ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಫೆಬ್ರವರಿ -೨೦೧೩ ಸಂಚಿಕೆ-೭

ಸರ್ಕಾರ ಬರೆದಿದೆ ಹಳ್ಳಿಗಳ ಮರಣಶಾಸನ

ದೇಶದ ಕೃಷಿಯ
ಒಂದು ಬೆತ್ತಲೆ ಚಿತ್ರ!

ಕೃಷಿ ಲೋಕದಲ್ಲಿಯ ತಲ್ಲಣಗಳು

ಗಣರಾಜ್ಯೋಪಾಖ್ಯಾನ

ಅವನತಿಯತ್ತ
ಭಾರತೀಯ ಕೃಷಿ

ಕೋಮು ಸಮರಸತೆ ಇಲ್ಲವೇ ಸರ್ವನಾಶ

ಜನಪದ ವಿಚಾರದಲ್ಲಿ

ಫೆಬ್ರವರಿ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ - ೨೦೧೩
ಸಂಪುಟ - ೧೩
ಸಂಚಿಕೆ - ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com
web: janapada.net

ಯೋಧಗೀತೆ

ಜನ್ಮ ಭೂಮಿಗೆ ವಚನ ಕೊಟ್ಟು
ಹೋರಾಡುವ ಪಣವತೊಟ್ಟು
ದೇಶಕಾಗಿ ಪ್ರಾಣಬಿಟ್ಟ ವೀರರೇ
ನಿಮ್ಮ ಜೀವವನ್ನೇ ಬಲಿಕೊಟ್ಟ ಶೂರರೇ
ವಂದನೆ ವಂದನೆ ವಂದನೆ
ಭಾರತಾಂಬೆ ಯೋಧರಿಗೆ ವಂದನೆ

ಹಗಲು ಇರಳು ಎನ್ನದೆ
ಗುಡುಗು ಸಿಡಿಲಿಗಂಜದೆ
ಭಯ ಭೀತಿ ಅರಿಯದ ಯುವಕರೇ
ಧೈರ್ಯದಿಂದ ಹೋರಾಡುವ ಧೀರರೇ
ವಂದನೆ ವಂದನೆ ವಂದನೆ
ಭಾರತಾಂಬೆ ಕುವರರಿಗೆ ವಂದನೆ

ಮಡದಿ ಮಕ್ಕಳ ಮನೆಯಲಿಟ್ಟು
ತಂದೆತಾಯ ಮನದಲಿಟ್ಟು
ಬಂಧು ಬಳಗ ಮರೆತು ಬಿಟ್ಟು
ನಮ್ಮ ನಾಡಿಗಾಗಿ ದುಡಿಯುತಿರುವ ಯೋದರೇ
ವಂದನೆ ವಂದನೆ ವಂದನೆ
ಭಾರತಾಂಬೆ ಶೂರರಿಗೆ ವಂದನೆ

ಬಿಸಿಲು ಮಳೆಗೆ ಜಗ್ಗದ
ಚಳಿಗಾಳಿಗೆ ಕುಗ್ಗದ
ಬೆದರಿಕೆಗೆ ಬಗ್ಗದ ಧೀರರೇ
ಸ್ಥೈರ್ಯದಿಂದ ಮುನ್ನುಗ್ಗುವ ವೀರರೇ
ನಮ್ಮ ದೇಶವನ್ನು ಕಾಯುತಿರುವ ತರುಣರೇ
ವಂದನೆ ವಂದನೆ ವಂದನೆ
ಭಾರತಾಂಬೆ ಯೋಧರಿಗೆ ವಂದನೆ

- ಟಿ.ವಿಜಯ್‌ಕುಮಾರ್

ವಿಚಾರ ದೀಪ್ತಿ

೧೯ಗಳಲ್ಲಿ ವಿಜ್ಞಾನ ಕಾಂಗ್ರೆಸ್‌ನ ಮೊದಲ ಸಮಾವೇಶದ ಅಧ್ಯಕ್ಷತೆಯನ್ನು ಅಂದಿನ ಕಲಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿ ಸರ್ ಅಶುತೋಷ್ ಮುಖರ್ಜಿ ವಹಿಸಿದ್ದರು. ಅವರು ಗಣಿತ ಮತ್ತು ಭೌತವಿಜ್ಞಾನದ ಎಂ.ಎ ಜೋಡಿ ಪದವಿ ಪಡೆದ ಮೊದಲಿಗರಾಗಿದ್ದರು. ಜೊತೆಗೆ ಕಾನೂನು ಪದವಿಯನ್ನೂ ಪಡೆದಿದ್ದರು. ವಕೀಲರಾಗಿ, ನ್ಯಾಯಾಧೀಶರಾದ ನಂತರವೂ ಅವರು ಗಣಿತ ಮತ್ತು ಭೌತವಿಜ್ಞಾನದ ಪ್ರಬಂಧಗಳನ್ನು ಬರೆಯುತ್ತಿದ್ದರು. ಆಧುನಿಕ ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣದ ಆದ್ಯ ಪ್ರವರ್ತಕರೆಂದೇ ಖ್ಯಾತಿ ಪಡೆದ ಅವರು ೧೯೦೬ರಲ್ಲೇ ಬೆಂಗಾಲ್ ತಾಂತ್ರಿಕ ಸಂಸ್ಥೆಯನ್ನೂ ದೇಶದ ಪ್ರಥಮ ವಿಜ್ಞಾನ ಕಾಲೇಜನ್ನೂ ಸ್ಥಾಪಿಸಿದ್ದರು. ಐದು ಬಾರಿ ಕಲ್ಕತ್ತಾ ವಿ.ವಿಯ ಉಪಕುಲಪತಿಯಾಗಿದ್ದರು.

ಅಶುತೋಷ್ ಮುಖರ್ಜಿಯವರ ಪ್ರತಿಭೆ, ಪಾಂಡಿತ್ಯ ಮತ್ತು ಸಂಘಟನಾ ಚಾತುರ್ಯ ಎಷ್ಟಿತ್ತೆಂದರೆ ಲಾರ್ಡ್ ಕರ್ಝನ್ ಇವರನ್ನು ತಮ್ಮ ದೇಶಕ್ಕೆ ಕರೆಸಿಕೊಳ್ಳಲು ಪದೇ ಪದೇ ಯತ್ನಿಸಿ ವಿಫಲನಾಗಿದ್ದ. ಬ್ರಿಟಿಷರು ನೀಡುವ ಶಿಕ್ಷಣದಿಂದ ಭಾರತದಲ್ಲಿ ಎಂತೆಂಥ ಪ್ರತಿಭೆಗಳು ಹೊಮ್ಮುತ್ತಿವೆ ಎಂದು ಆತ ತನ್ನ ತಾಯ್ನಾಡಿನಲ್ಲಿ ಪ್ರದರ್ಶಿಸಲು ಬಯಸಿದ್ದ. ನಿಜಕ್ಕೂ ಅಂದಿನ ಕಾಲದಲ್ಲಿ ಕಲ್ಕತ್ತೆಯಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮವಿತ್ತೆಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಅಶುತೋಷ್ ಸಹಪಾಠಿಗಳಲ್ಲಿ ಪ್ರಫುಲ್ಲಚಂದ್ರ ರೇ ಮತ್ತು ವಿವೇಕಾನಂದ ಕೂಡ ಮುಂದೆ ಅಂತರ ರಾಷ್ಟ್ರೀಯ ಖ್ಯಾತಿ ಪಡೆದರು. ಆರಂಭದಲ್ಲೇ ಆ ನೂಕುಜೇಕು ಸಿಕ್ಕಿದ್ದರಿಂದಲೇ ಇರಬೇಕು ಜಗದೀಶ ಚಂದ್ರ ಬೋಸ್ ಮೊದಲ್ಗೊಂಡು ಸತ್ಯೇಂದ್ರನಾಥ್ ಬೋಸ್, ಮೇಘನಾದ ಸಾಹಾ ಮುಂತಾದವರಿಂದಾಗಿ 'ಬಂಗಾಳವೆಂದರೆ ಇತರ ಭಾರತಕ್ಕಿಂತ ಐವತ್ತು ವರ್ಷ ಮುಂದೆ' ಎಂಬ ಕೋಡು ಬಂಗಾಳಿಗಳಲ್ಲಿ ಮೂಡಿತ್ತು.

ಮಗನ ಸಮುದ್ರ ಯಾನಕ್ಕೆ ಅಶುತೋಷ್ ಅಮ್ಮ ಒಪ್ಪಿಗೆ ನೀಡಲಿಲ್ಲ. ಕರ್ಝನ್ ಪತ್ರ ಬರೆದರು: 'ನಿಮಗೆ ಬ್ರಿಟನ್ನಿಗೆ ಹೋಗಲು ಭಾರತದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಖುದ್ದಾಗಿ ಆಜ್ಞಾಪಿಸಿದ್ದಾರೆಂದು ನಿಮ್ಮ ಅಮ್ಮನಿಗೆ ಹೇಳಿ' ಎಂಬ ಬೆದರಿಕೆ ಪತ್ರ ಅದು. ತುಸುವೂ ಅಳುಕದೆ, 'ಈ ಅಶುತೋಷ್ ಮುಖರ್ಜಿ ತನ್ನ ತಾಯಿಯ ಆಜ್ಞೆಯೊಂದನ್ನು ಬಿಟ್ಟು ಬೇರೆ ಯಾರ ಆಜ್ಞೆಯನ್ನೂ ಪಾಲಿಸುವುದಿಲ್ಲ' ಎಂದು ಮಾರುತ್ತರ ಬರೆದರು. ಟಿಳಕರಂತೆ ಭರ್ಜರಿ ಪೊದೆ ಮೀಸೆ ಹೊತ್ತು 'ಬೆಂಗಾಲ್ ಟೈಗರ್' ಎಂದೇ ಬ್ರಿಟಿಷರಿಂದ ಬಿರುದು ಗಳಿಸಿದ್ದ ಅಶುತೋಷ್ ಮುಖರ್ಜಿ ಕುರಿತು ಅಂದಿನ ಫ್ರಾನ್ಸಿನ ಚಿಂತಕ ಸಿಲ್ವಿಯನ್ ಲೆವ್ವೈ 'ಇವರಿಗೆ ಸಮನಾದ ಪಾಂಡಿತ್ಯ ಉಳ್ಳುವರು ಇಡೀ ಯೂರೋಪ್‌ನಲ್ಲೇ ಯಾರೂ ಇಲ್ಲ' ಎಂದು ಬರೆದಿದ್ದರು.

ಎಳೆಯರಲ್ಲಿ ಪ್ರತಿಭೆಯ ಮೊಳಕೆಯನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಅಶುತೋಷ್ ಅವರ ಪ್ರತಿಭೆಯ ವಿಶೇಷ ಲಕ್ಷಣವಾಗಿತ್ತು. ಗಣಿತ ಕೋವಿದ ಶ್ರೀನಿವಾಸ ರಾಮಾನುಜನ್ ಮತ್ತು ಸಿ.ವಿ.ರಾಮನ್ ಇಬ್ಬರನ್ನೂ ಮೊದಲು ಗುರುತಿಸಿ ಸಂಶೋಧನ ಸೌಲಭ್ಯ ಒದಗಿಸಿದ ಶ್ರೇಯ ಇವರದ್ದಾಗಿತ್ತು. ಇಂದೇನೋ ಶಿಷ್ಯರ ಪ್ರತಿಭೆಯ ದುರ್ಲಾಭ ಪಡೆದು ತಮ್ಮ ಸ್ವಂತದ ಪದೋನ್ನತಿ ಬಯಸುವ ಎಷ್ಟೊಂದು ವಿಜ್ಞಾನಿಗಳ, ಪಿಎಚ್‌ಡಿ ಗೈಡ್‌ಗಳ ಪ್ರಸಂಗವನ್ನು ನೋಡುತ್ತಿರುವ ನಾವು ಅಶುತೋಷ್ ಮುಖರ್ಜಿಯಂಥವರ ಉದಾಹರಣೆಗಳನ್ನು ಮತ್ತೆ ಮತ್ತೆ ಮೆಲುಕು ಹಾಕಬೇಕಾಗುತ್ತದೆ.

– ನಾಗೇಶ ಹೆಗಡೆ

ಸರ್ಕಾರ ಬರೆದಿದೆ ಹಳ್ಳಿಗಳ ಮರಣಶಾಸನ

- ಸುರೇಂದ್ರ ಕೌಲಗಿ

ಭಾರತದ ಸುಮಾರು ಆರು ಲಕ್ಷ ಹಳ್ಳಿಗಳಲ್ಲಿ ಜನರು ತಮ್ಮ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾಗ ದಿಲ್ಲಿಯ ಯೋಜನಾಭವನದಲ್ಲಿ ೨೦೧೨ ಡಿಸೆಂಬರ್ ಮಾಹೆಯ ಕೊನೆಯ ವಾರದಲ್ಲಿ ಭಾರತದ ಕೇಂದ್ರ ಸರ್ಕಾರ ಯೋಜನಾ ಆಯೋಗದ ಮೂಲಕ ಪ್ರಧಾನಿಯವರ ಅಧ್ಯಕ್ಷತೆಯಲ್ಲಿ ಹಳ್ಳಿಗಳ ಮರಣಶಾಸನವನ್ನು ಬರೆಯುತ್ತಿತ್ತು! ಇಪ್ಪತ್ತೈದು ರಾಜ್ಯಗಳ ಮುಖ್ಯ ಮಂತ್ರಿಗಳೂ ಮರಣಶಾಸನ ಬರೆಯುವುದರಲ್ಲಿ ಸೇರಿದ್ದರು. ದೇಶದ ಪ್ರಜಾಕೋಟಿಯಲ್ಲಿ ೨೦೧೧ರ ಜನಗಣತಿ ಪ್ರಕಾರ ೮೩ಕೋಟಿ ೩೦ಲಕ್ಷ ಜನ ರೈತರು ತಮ್ಮ ಹಳ್ಳಿಗಳನ್ನು ಬಿಡದೆ ಇನ್ನೂ ಅಲ್ಲಿಯೇ ವಾಸವಾಗಿದ್ದಾರೆ ಎಂಬರ್ಥದ ಮಾತನ್ನು ಹನ್ನೆರಡನೆ ಪಂಚವಾರ್ಷಿಕ ಯೋಜನೆಯ 'ಗ್ರಾಮ ಪುನರ್‌ರಚನೆ' ಎಂಬ ಅಧ್ಯಾಯದಲ್ಲಿ ಬರೆದಿದೆ. ಮತ್ತು ಪೂರ್ಣವಾಗಿ ಅಥವಾ ಗಮನೀಯವಾಗಿ ಕೃಷಿ ಚಟುವಟಿಕೆಯಲ್ಲಿ ಗ್ರಾಮೀಣರು ತೊಡಗಿದ್ದಾರೆ.

ಬಡತನವನ್ನು ಕಡಿಮೆ ಮಾಡಲು ಅಲ್ಲಿಯ ರೈತರಿಗೆ ಆದಾಯದ ಅವಕಾಶಗಳನ್ನು ಹೆಚ್ಚಿಸಲು ಕೃಷಿಯೇತರ ಚಟುವಟಿಕೆಯಲ್ಲಿ ತೊಡಗುವಂತೆ ಮಾಡುವುದು ಒಂದು ಪರಿಣಾಮಕಾರಿ ಮಾರ್ಗವೆಂದು ಹೇಳಲಾಗಿದೆ. ಹಳ್ಳಿಯಲ್ಲಿ ಇರುವುದು ಮತ್ತು ವ್ಯವಸಾಯ ಮಾಡುವುದನ್ನು ಯೋಜನಾ ಆಯೋಗ ಮತ್ತು ಕೇಂದ್ರ ಸರ್ಕಾರಗಳು ಒಂದು ಮಹಾ ಆತಂಕಕಾರಿ ಸಂಗತಿಯೆಂದು ಪರಿಭಾವಿಸಿರುವಂತಿದೆ. ಇಂಥ ನೀತಿಯ ಪರಿಣಾಮದಿಂದಾಗಿಯೇ 'ಅಮೀನ್ ಮಟ್ಟು'ರವರ ವರದಿಯಂತೆ ದಿಲ್ಲಿಯ ಸುತ್ತಲಿನ ಹಳ್ಳಿಗಳಲ್ಲಿಯ ರೈತರು ರೈತರಾಗಿ ಉಳಿದಿಲ್ಲ. ನೊಯ್ಡಾ, ಗಾಜಿಯಾಬಾದ್, ಗುಡಗಾಂವ್‌ಗಳಲ್ಲಿ ಜಮೀನು ಸ್ವಾಧೀನ ಪ್ರಕ್ರಿಯೆಯಿಂದ ಭೂಮಿಗೆ ಸಿಕ್ಕ ಚಿನ್ನದ ಬೆಲೆಯಿಂದಾಗಿ ರೈತರು ಬೆಳಗಾಗುವುದರೊಳಗಾಗಿ ಕೋಟ್ಯಾಧಿಪತಿಗಳಾಗಿದ್ದಾರೆ. ರೈತ ಕುಟುಂಬದ ಹೊಸ ತಲೆಮಾರಿನ ಹುಡುಗರು ರೈತರಾಗಿ ಉಳಿದಿಲ್ಲ. ದಿಢೀರ್ ಶ್ರೀಮಂತಿಕೆ ಹೊಸ ತಲೆಮಾರಿನವರನ್ನು ಅಡ್ಡದಾರಿಗಳಲ್ಲಿ ಕೊಂಡೊಯ್ದಿದೆ. ವ್ಯವಸಾಯ ಬಿಟ್ಟು ತಮ್ಮ ಅನುವಂಶಿಕ ವೃತ್ತಿಯಾದ ಕೃಷಿಯನ್ನು ಬಿಟ್ಟು ರಾಜಕೀಯದಂಥ ಕ್ಷೇತ್ರಗಳಿಗೆ ಕೆಲವರು ಇಳಿದರೆ ಇನ್ನು ಬಹುಸಂಖ್ಯಾತರು ಮೋಜು ಮಸ್ತಿಯಲ್ಲಿ ಕಾಲಕಳೆಯುತ್ತಿದ್ದಾರೆ. ಸಂಜೆಯಾಗುತ್ತಿದ್ದಂತೆಯೇ ಚಂಡೀಗಢ, ನೋಯ್ಡಾ, ಗಾಜಿಯಾಬಾದ್ ಕಡೆಗಳಿಂದ ಪುಂಡರ ಗುಂಪು ವಿಲಾಸಿ ಕಾರುಗಳಲ್ಲಿ ರಾಜಧಾನಿಗೆ ದಾಳಿ ಇಡುತ್ತದೆ. ಅಲ್ಲಿನ ಪಬ್, ಬಾರ್, ಐಷಾರಾಮಿ ಹೋಟೆಲ್‌ಗಳಲ್ಲಿ ರಾತ್ರಿ ಕಳೆದು ಬೆಳಿಗ್ಗೆ ಮರಳುತ್ತಾರೆ. ಇತ್ತೀಚಿಗೆ

ರಾಜಧಾನಿಯಲ್ಲಿ ನಡೆದ ಓರ್ವ ವೈದ್ಯಕೀಯ ವಿದ್ಯಾರ್ಥಿನಿಯ ಬಲಾತ್ಕಾರದಲ್ಲಿ ಈ ಪ್ರಕಾರದ ಹೊಸ ತಲೆಮಾರಿನ ಶ್ರೀಮಂತ ರೈತರ ಮಕ್ಕಳ ಪಾತ್ರ ಇದೆ. ಇಂಥದೇ ಪರಿಸ್ಥಿತಿ ದೇಶದ ಎಲ್ಲ ಜಿಲ್ಲೆಗಳ ಸುತ್ತಮುತ್ತಲಿನ ರೈತ ಮಕ್ಕಳು ಮತ್ತು ಹಳ್ಳಿಗರಲ್ಲಿದೆ. ರೈತರು ಐಷಾರಾಮಿ ಜೀವನಕ್ಕೆ ಬಲಿಯಾಗಿ ಸಾಲ ಮಾಡಿಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ. ಕೃಷಿ ಭೂಮಿಯನ್ನು ಸರ್ಕಾರ ತನ್ನ ಅಭಿವೃದ್ಧಿ ಎಂಬ ಮಂತ್ರದ ತಂತ್ರಗಾರಿಕೆಯಿಂದ ಸಾಕಾರಗೊಳಿಸಲು ರೈತರ ಭೂಮಿಯನ್ನು ವಿಶೇಷ ಪರಿಹಾರ ಧನದ ಆಸೆ ತೋರಿಸಿ ವಶಪಡಿಸಿಕೊಳ್ಳುತ್ತದೆ. ಸಾಲದ ಶೂಲದಿಂದ ಆ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಕಳೆದ ಒಂದು ದಶಕದಲ್ಲಿ ಕರ್ನಾಟಕದಲ್ಲಿ ಸುಮಾರು ೫೦೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಹು ಇತ್ತೀಚೆಗಿನ ಸುದ್ದಿ ಪ್ರಕಾರ ಬಿಹಾರ ರಾಜ್ಯದ ಬಕ್ಸರ್ ಎಂಬಲ್ಲಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪಿಸಲು ೧೦೮೧ ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಸರ್ಕಾರ ಹುನ್ನಾರ ನಡೆಸಿದೆ. ಕರ್ನಾಟಕದಲ್ಲಿ ಕಾರವಾರ ಬಳಿ ನಿರ್ಮಿಸಲಾದ ನೌಕಾಪಡೆಯ ಕೇಂದ್ರ ಸ್ಥಾಪನೆಗೆ ವಶಪಡಿಸಿಕೊಂಡ ಜಮೀನಿನ ರೈತರಿಗೆ ಇನ್ನೂ ಸರಿಯಾಗಿ ಪರಿಹಾರ ಸಿಕ್ಕಿಲ್ಲ. ಕೈಗಾ ಅಣುಸ್ಥಾವರಕ್ಕಾಗಿ ಭೂಮಿಯನ್ನು ಕಳೆದುಕೊಂಡ ರೈತರಿಗೂ ಸಮಾಧಾನಕರ ರೀತಿಯಲ್ಲಿ ಪುನರ್ವಸತಿ ಆಗಿಲ್ಲ. ಕಳೆದ ೨೭ ವರ್ಷಗಳಿಂದ ನರ್ಮದಾ ಅಣೆಕಟ್ಟೆಗಾಗಿ ಜಮೀನು ಕಳೆದುಕೊಂಡ ರೈತರ ಪುನರ್ವಸತಿಯಾಗಿಲ್ಲ. ತಮಿಳುನಾಡಿನ ಕುಡಂಕುಲಂ, ಮಹಾರಾಷ್ಟ್ರದ ಜೈತಾಪುರ ಅಣುಸ್ಥಾವರಗಳಿಗಾಗಿ ಜಮೀನನ್ನು ವಶಪಡಿಸಿಕೊಳ್ಳುವುದರ ವಿರುದ್ಧ ರೈತರು ಹೋರಾಟ ಮಾಡಿದರು. ಆದರೆ ಅದನ್ನು ಸರ್ಕಾರ ದಮನ ಮಾಡಿತು. ಈಗ ೧೨ನೇ ಪಂಚವಾರ್ಷಿಕ ಯೋಜನೆ ಅಡಿಯಲ್ಲಿ ಕೃಷಿಯಲ್ಲಿ ತೊಡಗಿರುವ ರೈತರ ಬಡತನವನ್ನು ನೀಗಿಸಲು ಕೃಷಿಯೇತರ ಚಟುವಟಿಕೆಗಳಲ್ಲಿ ಅಂದರೆ ಕೈಗಾರಿಕಾ ಕ್ಷೇತ್ರ, ಗಣಿಗಾರಿಕೆ ನಿರ್ಮಾಣಕಾರ್ಯ, ಸೇವಾಕ್ಷೇತ್ರ ಮುಂತಾದವುಗಳಲ್ಲಿ ಅವರನ್ನು ತೊಡಗಿಸಲು ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ೨೦೦೯-೧೦ನೇ ಸಾಲಿನಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ೨೪ ಕೋಟಿ ೪ ಲಕ್ಷ ೮೫ ಸಾವಿರ ಜನ ಉದ್ಯೋಗ ಪಡೆದಿದ್ದರು. ಈಗ ಸರ್ಕಾರ ಉದ್ಯೋಗವಕಾಶವನ್ನು ಹೆಚ್ಚಿಸಲು ಯೋಚಿಸಿರುವ ಯಾವ ಕ್ಷೇತ್ರದಲ್ಲೂ ಇಷ್ಟು ದೊಡ್ಡ ಉದ್ಯೋಗವಕಾಶವನ್ನು ಹೆಚ್ಚಿಸಲು ಸಾಧ್ಯವಾಗಿಲ್ಲ. ದೇಶಕ್ಕೆ ಬೇಕಾಗುವ ಆಹಾರೋತ್ಪಾದನೆಗೆ ವ್ಯವಸಾಯ ಕಾರಣವೆ ಹೊರತು ಕೈಗಾರಿಕೆಗಳಲ್ಲ. ಗ್ರಾಮಗಳಲ್ಲಿರುವ ರೈತರು ನಗರಗಳಿಗೆ ವಲಸೆ ಹೋಗುವಂತೆ ಸರ್ಕಾರ ಪ್ರಯತ್ನ ಮಾಡುತ್ತಿರುವುದು ಒಂದರ್ಥದಲ್ಲಿ ಹಳ್ಳಿಗಳ ಮರಣಶಾಸನವನ್ನು ಬರೆದಂತೆ. ಈಗ ೪೫ರಷ್ಟು ಗ್ರಾಮೀಣ ಜನರು ನಗರಾಭಿಮುಖವಾಗಿದ್ದಾರೆ. ಹಳ್ಳಿಗಳು ಕಣ್ಮರೆಯಾಗುತ್ತಿವೆ. ಹಳ್ಳಿಗಳ ಕಣ್ಮರೆಯೊಂದಿಗೆ ಪಶು ಸಂಪತ್ತು ನಶಿಸುತ್ತಿದೆ. ಇದೀಗ ಸರ್ಕಾರ ಅಂತಿಮ ರೂಪಗೊಳಿಸಿರುವ ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಿಯೂ 'ಹಳ್ಳಿಗಳು' ಎಂಬ ಪದವೇ ಇಲ್ಲ, ಬದಲಾಗಿ ಗ್ರಾಮೀಣ ಜೀವನವೆಂಬ ಪದವನ್ನು ಬಳಸಲಾಗಿದೆ ಮತ್ತು ಬಡತನಕ್ಕೂ ಗ್ರಾಮೀಣ ಪ್ರದೇಶಕ್ಕೂ ತಳಕು ಹಾಕಲಾಗಿದೆ. ಹಳ್ಳಿಗಳಲ್ಲಿ ಯಾವುದೇ ಪ್ರಕಾರದ ಸಂಪನ್ಮೂಲಗಳಿಲ್ಲ ಎಂಬಂತೆ ಆಲೋಚಿಸಲಾಗಿದೆ. ಹಳ್ಳಿಗಳಲ್ಲಿ ಇರುವವರು ಬಡವರು, ನಿರ್ಗತಿಕರು, ಬಡತನ

ರೇಖೆಗಿಂತ ಕೆಳಗಿನವರು ಎಂಬರ್ಥದಲ್ಲಿ ಯೋಜನೆಯುದ್ದಕ್ಕೂ ಬಿಂಬಿಸಲಾಗಿದೆ. ಹಳ್ಳಿಗಳಲ್ಲಿ ಸಹಿಸಲಾರದಷ್ಟು ಬಡತನವಿದೆಯಾದ್ದರಿಂದ ಅಲ್ಲಿಯ ಜನರ ತಲಾ ಆದಾಯವನ್ನು ಹೆಚ್ಚಿಸುವುದಕ್ಕಾಗಿ ಅವರೆಲ್ಲರನ್ನು ಕೃಷಿಯೇತರ ಚಟುವಟಿಕೆಗಳಲ್ಲಿ ಹೇಗೆ ತೊಡಗಿಸಬೇಕೆಂಬುದೆ ಯೋಜನಾ ಆಯೋಗದ ಚಿಂತನೆಯಾಗಿದೆ. ಜಾಗತೀಕರಣವನ್ನು ಗಮನದಲ್ಲಿರಿಸಿಕೊಂಡು ಪಂಚವಾರ್ಷಿಕ ಯೋಜನೆ ತಯಾರಿಸಲ್ಪಟ್ಟಿದೆಯೆ ಹೊರತು ಭಾರತದ ಅಸ್ಮಿತೆಯನ್ನು ವ್ಯಕ್ತಪಡಿಸುವ ಸಮಾಜ ರಚನೆಯನ್ನಲ್ಲ. ಜಾಗತೀಕರಣವನ್ನು ಪುನರ್ ಪರಿಶೀಲಿಸಬೇಕಾದ ಸನ್ನಿವೇಶ ಉಂಟಾಗುತ್ತಿರುವಾಗ ನಮ್ಮ ಸರ್ಕಾರ ಗ್ರಾಮಗಳ ಮರಣಶಾಸನವನ್ನು ಬರೆಯುತ್ತಿದೆ. ಯೋಜನೆಯಲ್ಲಿ ಎಲ್ಲಿಯೂ ಹಳ್ಳಿಗಳನ್ನು ಸ್ವಾವಲಂಬಿತ ಸ್ವಯಂಚಾಲಿತ ಅರ್ಥವ್ಯವಸ್ಥೆಯ ಪರಿಪೂರ್ಣ ಘಟಕಗಳನ್ನಾಗಿ ಉಳಿಸಬೇಕೆಂಬ ವಿಚಾರವೇ ಕಾಣುವುದಿಲ್ಲ. ಬದಲಿಗೆ ಹಳ್ಳಿಗರು ಯಾವ ಭೂಮಿ ಮೇಲೆ ವ್ಯವಸಾಯ ಮಾಡಿ ಬದುಕುತ್ತಿದ್ದಾರೊ ಆ ಭೂಮಿಯ ಮೇಲೆಯೇ ರಾಷ್ಟ್ರೀಯ ಹೆದ್ದಾರಿಗಳನ್ನು, ರೈಲು ಮಾರ್ಗಗಳನ್ನು, ವಿಮಾನ ನಿಲ್ದಾಣಗಳನ್ನು ಮತ್ತು ಕಾರ್ಖಾನೆಗಳನ್ನು ಸ್ಥಾಪಿಸುವ ಕೆಲಸವನ್ನು ಮಾಡುವ ಉದ್ದೇಶ ಇಟ್ಟುಕೊಳ್ಳಲಾಗಿದೆ. ಮೂಲಭೂತ ಸೌಕರ್ಯಗಳ ನಿರ್ಮಾಣ ಎಂಬ ನೀತಿಯಡಿ ಯಥೇಚ್ಛವಾಗಿ ರೈತರ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಆಧುನಿಕ ಜೀವನದ ರುಚಿಕಂಡ ರೈತರು ಯೋಗ್ಯ ಪರಿಹಾರ ಸಿಕ್ಕರೆ ಸಾಕು ಎಲ್ಲ ಸಂಪನ್ಮೂಲಗಳ ತಾಯಿಯಾದ ಭೂಮಿಯನ್ನು ಮಾರಲು ಸಿದ್ಧರಾಗುತ್ತಾರೆ. ಉದಾಹರಣೆಗೆ, ಒರಿಸ್ಸಾದ ಕರಾವಳಿ ಪ್ರದೇಶ ಜಗತ್ ಸಿಂಗ್‌ಪುರ್ ಜಿಲ್ಲೆಯಲ್ಲಿ ದಕ್ಷಿಣ ಕೊರಿಯಾ ಸ್ಥಾಪಿಸಲಿರುವ ಉಕ್ಕಿನ ಕಾರ್ಖಾನೆಗಾಗಿ ಕೇಂದ್ರ ಸರ್ಕಾರ ಜಮೀನನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಅಲ್ಲಿಯ ರೈತರು ತಮ್ಮ ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ಶಾಲಾ ಮಕ್ಕಳನ್ನು ಕರೆದುಕೊಂಡು ಪ್ರತಿಭಟನೆ ನಡೆಸುತ್ತಿರುವುದರಿಂದಾಗಿ ಆ ಮಕ್ಕಳು ಶಾಲೆ ತಪ್ಪಿಸಿ ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆ. ಚಳುವಳಿಯಲ್ಲಿ ಭಾಗವಹಿಸುತ್ತಿರುವ ಮಕ್ಕಳ ವಿರುದ್ಧ ಸರ್ಕಾರ ಶಿಕ್ಷಣದ ಹಕ್ಕು ಕಾಯ್ದೆ ಅನ್ವಯ ಕ್ರಮ ಕೈಗೊಳ್ಳುತ್ತಿದೆ. ಆದರೆ ರೈತರ ಪೋಸ್ಕೊ ವಿರೋಧಿ ಚಳುವಳಿಯ ನಾಯಕ ತಮ್ಮ ತಂದೆ ಮತ್ತು ಅಜ್ಜಂದಿರ ಭೂಮಿಯನ್ನು ವಶಪಡಿಸಿಕೊಳ್ಳುತ್ತಿರುವಾಗ ಮಕ್ಕಳು ಮೂಕ ಪ್ರೇಕ್ಷಕರಾಗಿ ಇರಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಉಕ್ಕು ಕಾರ್ಖಾನೆಗಾಗಿ ಈಗಾಗಲೇ ೨೦೦೦ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಇನ್ನೂ ೭೮೦೦ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಈ ಜಮೀನಿನಿಂದ ಉಚ್ಚಾಟಿಸಲ್ಪಟ್ಟ ರೈತರ ಬಾಳು ಹಾಳು ಎಂಬುದು ಶತಸಿದ್ಧ. ಬಹಳ ಹೆಚ್ಚೆಂದರೆ ಅಲ್ಲಿಯ ಕೆಲವು ರೈತರಿಗೆ ಉಕ್ಕಿನ ಕಾರ್ಖಾನೆಯಲ್ಲಿ ಕಾರ್ಮಿಕರನ್ನಾಗಿ ಮಾಡಿ ಸಂಬಳ ಕೊಡಬಹುದಷ್ಟೆ. ಅನ್ನ ಬೆಳೆಯುವ ರೈತನ ಕೈಗಳನ್ನು ಉಕ್ಕು ತಯಾರಿಸುವ ಕೈಯನ್ನಾಗಿ ಮಾಡಲಾಗುತ್ತದೆ. ಇದೀಗ ತಯಾರಾಗಿರುವ ಪಂಚವಾರ್ಷಿಕ ಯೋಜನೆಯಲ್ಲಿ ಇಂತಹುದೆ ನೂರಾರು ಉದಾಹರಣೆಗಳು ಕಾಣಸಿಗುತ್ತವೆ. ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ ನೀತಿಯ ಕಾರಣದಿಂದಾಗಿ ಒಂದು

ಕಡೆ ಸರ್ಕಾರ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಮಾಡುತ್ತಿದ್ದರೆ, ಇನ್ನೊಂದಡೆ ಹಳ್ಳಿಗಳಲ್ಲಿ ತಲತಲಾಂತರದಿಂದ ಇದ್ದ ಉದ್ಯೋಗಗಳ ಮೂಲಕ ಸೃಷ್ಟಿಯಾಗಿದ್ದ ಉದ್ಯೋಗಗಳನ್ನು ಕೈತಪ್ಪಿಸುತ್ತಿದೆ.

ದೇಶದ ಮುಖ್ಯವಾಹಿನಿಯಲ್ಲಿರುವ ಅರ್ಥಶಾಸ್ತ್ರಜ್ಞರ ಪ್ರಕಾರ ಜಾಗತೀಕರಣವು ಉದ್ಯೋಗಗಳನ್ನು ಸೃಷ್ಟಿಮಾಡುತ್ತಿದೆಯಾದರೂ ಅದು ಚಿತ್ರದ ಒಂದು ಮುಖವಷ್ಟೆ. ಬಹಳ ದೊಡ್ಡ ಸಮುದಾಯವೊಂದು ನೇಯ್ಗೆ ಕೆಲಸದಲ್ಲಿ ತೊಡಗಿತ್ತು. ಆದರೆ ಆ ಕ್ಷೇತ್ರವೇ ನಶಿಸಿ ಹೋಗಿದೆ. ಇಂದು ದೇಶಕ್ಕೆ ಬೇಕಾದ ಬಟ್ಟೆಯನ್ನು ಅತ್ಯಾಧುನಿಕ ಯಂತ್ರಗಳಲ್ಲಿ ತಯಾರಿಸಲಾಗುತ್ತಿದೆ. ಅಂದರೆ ವಿಕೇಂದ್ರೀಕರಣ ಮಾಯವಾಗಿ ಕೇಂದ್ರೀಕರಣ ಸ್ಥಾಪಿತವಾದಂತಾಯ್ತು. ಸ್ವತಂತ್ರವಾಗಿದ್ದ ಜೀವನ ನಡೆಸುತ್ತಿದ್ದವರು ಈಗ ಕಾರ್ಖಾನೆಗಳಲ್ಲಿ ಒಂದು ಯಂತ್ರದ ಭಾಗವಾಗಿದ್ದಾರೆ. 'ಚಾರ್ಲ್ಸ್ ಗೋರೆ' ಎಂಬುವವರು ವಿಶ್ವ ಸಂಸ್ಥೆಯಲ್ಲಿ ಒಬ್ಬ ಹಿರಿಯ ಅರ್ಥಶಾಸ್ತ್ರಜ್ಞ, ಅವರ ಪ್ರಕಾರ ಜಗತ್ತಿನ ಅನೇಕ ದೇಶಗಳು ಬಡತನದ ಬೋನಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಿವೆ. ಬಡತನದ ಬೋನು ಜಾಗತಿಕವಾಗಿದೆ. ಏಕೆಂದರೆ ಸಂಕೀರ್ಣ ಅಂತರ ವಾಣಿಜ್ಯ ಮತ್ತು ಹಣಕಾಸಿನ ಸಂಬಂಧ ಆರ್ಥಿಕವಾಗಿ ನಿಂತನೀರಾಗಿದೆ. ಪ್ರಚಲಿತ ಆರ್ಥಿಕ ಜಾಗತೀಕರಣವಾದ ನೀತಿ ಈ ಬಡತನದ ಬೋನನ್ನು ಸಡಿಲಗೊಳಿಸುವುದರ ಬದಲು ಬಿಗಿ ಗೊಳಿಸತ್ತಿದೆ. ಅವರ ಪ್ರಕಾರ ಜಾಗತೀಕರಣವು ಉದ್ಯೋಗಗಳನ್ನು ಸೃಷ್ಟಿಸುವುದಾಗಲಿ ಅಥವಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಅಗತ್ಯವಾದ ಬಂಡವಾಳವನ್ನಾಗಲಿ ತಲುಪಿಸುವ ಕೆಲಸವನ್ನು ಮಾಡುತ್ತಿಲ್ಲ. ಜಾಗತೀಕರಣವನ್ನು ಸ್ವೀಕರಿಸುವುದರ ಬಗ್ಗೆ ಪುನರ್ವಿಚಾರ ಮಾಡಬೇಕು ಮತ್ತು ವಿಶ್ವವಾಣಿಜ್ಯ ಸಂಸ್ಥೆಯೊಂದಿಗೆ ಮರು ಒಪ್ಪಂದ ಮಾಡಿಕೊಳ್ಳಬೇಕು. ಜಾಗತೀಕರಣದ ಹೆಸರಿನಲ್ಲಿ ನಮ್ಮ ದೇಶದ ಇಡೀ ಸಮಾಜ ವ್ಯವಸ್ಥೆಯ, ಅರ್ಥವ್ಯವಸ್ಥೆಯ ಸಾಂಸ್ಕೃತಿಕ ಜೀವನದ ಸ್ವಾವಲಂಬಿತ ಗ್ರಾಮಗಳು ದೇಶವೆಂಬ ಮಹಾನ್ ಕಟ್ಟಡದ ಅಡಿಪಾಯವಿದ್ದಂತೆ. ಹಳ್ಳಿಗಳೆಂಬ ತಳಹದಿಯ ಮೇಲೆ ಹಂತ-ಹಂತವಾಗಿ ಮೇಲಕ್ಕೆ ಹೋಗಿ ದಿಲ್ಲಿಯೆಂಬ ರಾಜಧಾನಿಯುಂಟಾಗಿದೆ. ಪಂಚವಾರ್ಷಿಕ ಯೋಜನೆಯ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗವಕಾಶಗಳನ್ನು ಹೆಚ್ಚಿಸುವ ನೀತಿಯೆಂದರೆ ಕೃಷಿಕ್ಷೇತ್ರದಲ್ಲಿ ಬಂದಿರುವ ಯಂತ್ರೋಪಕರಣಗಳನ್ನು ಸುಸ್ಥಿತಿಯಲ್ಲಿಡುವ ಉದ್ಯೋಗಗಳಾಗಿವೆ. ಆದರೆ ಈ ಕೃಷಿಯ ಯಾಂತ್ರೀಕರಣವೆ ರೈತರ ಅನೇಕ ಕಷ್ಟ-ನಷ್ಟಗಳಿಗೆ ಮತ್ತು ಆತ್ಮಹತ್ಯೆಗೆ ಕಾರಣವೆಂಬುದು ಎಲ್ಲರಿಗೂ ತಿಳಿದ ವಿಷಯ. ಗ್ರಾಮೀಣ ಅರ್ಥವ್ಯವಸ್ಥೆಯ ತೀವ್ರ ಬದಲಾವಣೆಗೆ ಉದ್ಯೋಗದ ಕ್ಷೇತ್ರ ಹೆಚ್ಚುವುದು ಅಗತ್ಯವೆಂಬುದು ಯೋಜನೆಯ ಉದ್ದೇಶ. ಗ್ರಾಮಗಳಲ್ಲಿ ಅಲ್ಲಿಯೆ ಸಹಜವಾಗಿ ಸಿಗುವ ಸಂಪನ್ಮೂಲಗಳನ್ನು ಉಪಯೋಗಿಸಿ ಗ್ರಾಮೋದ್ಯೋಗಗಳನ್ನು ಸೃಷ್ಟಿ ಮಾಡಿ ಹಳ್ಳಿಯಲ್ಲೇ ಜನರಿಗೆ ಪ್ರಜಾಸತ್ತಾತ್ಮಕ ಮಾದರಿಯಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸುವ ಬದಲು ಸರ್ಕಾರವು ಹಳ್ಳಿಗಳನ್ನೇ ಉಚ್ಚಾಟಿಸುತ್ತಿದೆ. ಒಂದರ್ಥದಲ್ಲಿ ಸಂವಿಧಾನವನ್ನು ರಚಿಸುವ ಕಾಲಕ್ಕೂ ಇಂತಹುದೆ ಪರಿಸ್ಥಿತಿ ಉಂಟಾಗಿತ್ತು. ಪಂಚಾಯತ್ ರಾಜ್ಯದ ವ್ಯವಸ್ಥೆ ಇಲ್ಲದೆ ಇರುವ ಸಂವಿಧಾನ ರಚನೆಯಾಗಿತ್ತು. ಗಾಂಧೀಜಿಯವರ ಗಮನಕ್ಕೆ

ಈ ನ್ಯೂನತೆ ಬಂದೊಡನೆ ಸಂಬಂಧಪಟ್ಟವರು ಸಂವಿಧಾನದ ಮುಖ್ಯಭಾಗದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ವಿಷಯವನ್ನು ಸೇರಿಸಲಿಕ್ಕಾಗದೆ ತರಾತುರಿಯಲ್ಲಿ ಅದನ್ನು ಐಚ್ಛಿಕ ವಿಷಯವನ್ನಾಗಿ ಮಾಡಿದರು. ಹೀಗೆ ಸ್ವಾತಂತ್ರ್ಯ ಬಂದಾಗಿಂದಲೂ ಹಳ್ಳಿಗಳ ವಿಷಯ ಪ್ರಮುಖವಾಗಿ ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪವಾಗಲೇ ಇಲ್ಲ. ರಾಜಕೀಯ ಪಕ್ಷಗಳು ಕೂಡ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತವೆಯೇ ಹೊರತು ಗ್ರಾಮ ಸ್ವರಾಜ್ಯವಾಗಬಹುದಾದ ಗ್ರಾಮಗಳ ಅವಿಚ್ಛಿನ್ನ ಇರುವಿಕೆಯ ಬಗ್ಗೆ ಮಾತನಡುವುದೆ ಇಲ್ಲ. ಇತ್ತೀಚಿಗೆ ರಾಜಸ್ಥಾನದ ಜೈಪುರ್‌ನಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಚಿಂತನಾ ಸಭೆ ಮತ್ತು ಅಧಿವೇಶನದ ಆಗುಹೋಗುಗಳನ್ನು ಗಮನಿಸಿದರೆ ಪಕ್ಷವು ಹಳ್ಳಿಗಳನ್ನು ಮರೆತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಯು.ಪಿ.ಎ ಸರ್ಕಾರ ಭಾರತ ನಿರ್ಮಾಣ ಕಾರ್ಯಕ್ರಮ ಮತ್ತು ಮಹಾತ್ಮಾಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ ಮುಂತಾದ ಏಳು ತನ್ನ ಪ್ರಮುಖ ಕಾರ್ಯಕ್ರಮಗಳು ಇಡೀ ಭಾರತದ ಆರು ಲಕ್ಷ ಹಳ್ಳಿಗಳ ೧೩೦ ಕೋಟಿ ಪ್ರಜಾಸಂಖ್ಯೆಯ ಯೋಗಕ್ಷೇಮವನ್ನು ನಿರ್ವಹಿಸುವುದಾಗಿ ತಿಳಿವ ಒಂದು ಭ್ರಮಾಲೋಕದಲ್ಲಿದೆ. ಅಧಿಕಾರಶಾಹಿ ಮತ್ತು ಭ್ರಷ್ಟಾಚಾರದ ಕಾರಣದಿಂದಾಗಿ ಯು.ಪಿ.ಎ ಸರ್ಕಾರದ ಎಲ್ಲ ಯೋಜನೆಗಳು ಭ್ರಷ್ಟಾಚಾರದ ಗಂಗೋತ್ರಿಗಳಾಗಿವೆ. ಜಯಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಹಳ್ಳಿಗಳು ಇರಬೇಕು ಎಂಬ ಧ್ವನಿ ಕೇಳಲೇ ಇಲ್ಲ. ಇದೇ ರೀತಿಯ ಮನೋಭಾವ ಉಳಿದೆಲ್ಲಾ ರಾಜಕೀಯ ಪಕ್ಷದ್ದಾಗಿದೆ. ಯಾವ ಪಕ್ಷಕ್ಕೂ ಹಳ್ಳಿಗಳು ಬೇಡವಾಗಿದೆ. ಬೇಕಿರುವುದು ಹಳ್ಳಿಗಳ ಜಮೀನು, ಅರಣ್ಯ, ಖನಿಜ ಇತ್ಯಾದಿ. ನಮ್ಮ ಸಂವಿಧಾನವು ಸಹ ಹಳ್ಳಿಗಳನ್ನು ಪೂರ್ಣವಾಗಿ ಮರೆತಿದೆ. ಪಂಚಾಯತ್‌ರಾಜ್ಯದ ಮೂಲಕ ಹಳ್ಳಿಗಳ ವಿಷಯವನ್ನು ಸಂವಿಧಾನ ಪ್ರಸ್ತಾಪ ಮಾಡುತ್ತದೆಯೇ ಹೊರತು ಹಳ್ಳಿಗಳನ್ನು ಪ್ರತ್ಯೇಕ ಘಟಕವನ್ನಾಗಿ ಇಟ್ಟುಕೊಂಡು ಮಾತನಾಡುವುದಿಲ್ಲ. ಅಲ್ಲದೆ ಸಂವಿಧಾನ ಕೇಂದ್ರ ಸರ್ಕಾರದ ಅಧಿಕಾರಕ್ಕೊಳಪಟ್ಟ ಜವಾಬ್ದಾರಿಗಳನ್ನು ತಿಳಿಸುತ್ತದೆ, ರಾಜ್ಯ ಸರ್ಕಾರದ ಜವಾಬ್ದಾರಿಗಳನ್ನೂ ತಿಳಿಸುತ್ತದೆ. ಮತ್ತು ಎರಡೂ ಸರ್ಕಾರಗಳು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ತಿಳಿಸುತ್ತದೆ. ಆದರೆ ಭಾರತದ ಹಳ್ಳಿಗಳು ತಮ್ಮ ಹಂತದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ಮೌನವಾಗಿದೆ. ಈ ರೀತಿ ಹಳ್ಳಿಗಳ ಬಗೆಗಿನ ಉದಾಸೀನತೆ ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇದೆ. ಅಭಿವೃದ್ಧಿ ಹೊಂದಿದ ಅಭಿವೃದ್ಧಿ ಹೊಂದದ ಮತ್ತು ಅಭಿವೃದ್ಧಿ ಶೀಲ ಎಂಬುದಾಗಿ ನಮ್ಮ ಜಗತ್ತಿನಲ್ಲಿಯ ರಾಷ್ಟ್ರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಆದರೆ 'ಇ.ಎಫ್.ಶೂಮಾಕರ್'ರವರ ಪ್ರಕಾರ ನಾಲ್ಕನೆಯ ಜಗತ್ತೊಂದಿದೆ. ಈ ಜಗತ್ತಿನ ವಲಯದಲ್ಲಿ ಚಿಕ್ಕ ದೇಶಗಳು ಮತ್ತು ಪ್ರಚಲಿತ ವ್ಯವಸ್ಥೆಗೆ ಭಿನ್ನವಾದ ಪರ್ಯಾಯ ವ್ಯವಸ್ಥೆಗಾಗಿ ಹೋರಾಡುವ ಜನಪರ ಚಳುವಳಿಗಳು ಇವೆ. ಇದರಲ್ಲಿ ಮಹಾತ್ಮಾ ಗಾಂಧೀಜಿಯವರು ಹೇಳಿದ ಗ್ರಾಮ ಸ್ವರಾಜ್ಯದ ಪರ್ಯಾಯವೂ ಇದೆ. ಅದೇ ರೀತಿ ವಿಜ್ಞಾನ ಮತ್ತು ತಂತ್ರಜ್ಞಾನದ ಮನಸ್ಸೋ ಇಚ್ಛೆ ಬೆಳವಣಿಗೆಯ ಮೇಲೆ ಕಡಿವಾಣ ಹಾಕಬೇಕೆಂಬ ಸಿದ್ಧಾಂತವು ಇದೆ. 'ಬೃಹತ್‌ಗಾತ್ರ ನಮ್ಮ ಶತ್ರುವಲ್ಲ. ಆದರೆ ಬೃಹತ್ತತೆಯ ಪೂಜೆಯನ್ನು

ನಾವು ವಿರೋಧಿಸಬೇಕಿದೆ' ಎಂಬ ವಿಚಾರವುಳ್ಳ ಜನ ಈ ನಾಲ್ಕನೆಯವಲಯದ ಜಗತ್ತಿನಲ್ಲಿದ್ದಾರೆ. ಈ ನಾಲ್ಕನೆ ವಲಯದ ಜಗತ್ತಿನ ಎಲ್ಲ ಪರ್ಯಾಯ ವಿಚಾರಗಳು ಚಳುವಳಿಗಳು ಮತ್ತು ಹೋರಾಟಗಳು ಕೈಗೂಡ ಬೇಕಾದರೆ ಅದರಲ್ಲೂ ಮುಖ್ಯವಾಗಿ ಪರಿಸರ ವಿನಾಶ ತಪ್ಪಬೇಕಾದರೆ ಹಳ್ಳಿಗಳೇ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಮುಖ್ಯ ಘಟಕಗಳಾಗಿರಬೇಕಾಗುತ್ತದೆ. ಆದರೆ ದುರ್ದೈವದಿಂದ ನಮ್ಮ ೧೨ ಪಂಚವಾರ್ಷಿಕ ಯೋಜನೆಗಳು ಹಳ್ಳಿಗಳನ್ನು ಮಲತಾಯಿ ಮಕ್ಕಳಂತೆ ಕಂಡಿವೆಯೆ ಹೊರತು ಭಾರತದೇಶದ ಸ್ವಂತ ಮಕ್ಕಳಂತೆ ಕಾಣಲಿಲ್ಲ. ನೆಹರೂರವರ ನೇತೃತ್ವದಲ್ಲಿ ಯೋಜನಾಯುಗ ಪ್ರಾರಂಭವಾಯಿತು. ಬೃಹತ್ ಅಣೆಕಟ್ಟು, ಬೃಹತ್ ಕೈಗಾರಿಕೆ, ಬೃಹತ್ ವಿಶ್ವವಿದ್ಯಾನಿಲಯ, ಬೃಹತ್ ವಿಮಾನ ನಿಲ್ದಾಣ ಇತ್ಯಾದಿಯಾಗಿ ನೆಹರೂ ವಿಚಾರದ ಆಧಾರದ ಮೇಲೆ ಯೋಜನೆಗಳು ಒಂದಾದ ಮೇಲೆ ಒಂದು ರಚಿತವಾದವು. ಭಾರತ ದೇಶ ಉದ್ಧಾರವಾಗಬೇಕಾದರೆ ಮತ್ತು ಪ್ರಪಂಚಕ್ಕೆ ಅಹಿಂಸಾ ಮತ್ತು ಶಾಂತಿಯ ದಾರಿಯನ್ನು ತೋರಿಸಬೇಕಾದರೆ ದೇಶದ ಹಳ್ಳಿಗಳನ್ನೇ ಘಟಕವಾಗಿ ಇಟ್ಟುಕೊಳ್ಳಬೇಕೆಂಬ ವಿಚಾರವನ್ನು ಗಾಂಧೀಜಿಯವರು ಇಟ್ಟುಕೊಂಡಿದ್ದರು. ಗಾಂಧೀ ಮಾದರಿಯಲ್ಲಿ ಯೋಜನೆಗಳು ರಚಿತವಾಗಿದ್ದರೆ ರೈತರ ಆತ್ಮಹತ್ಯೆಗಳು ಆಗುತ್ತಿರಲಿಲ್ಲ. ೧೯೯೫ ರಿಂದ ೨೦೧೧ರ ವರೆಗೆ ಅಂದರೆ ೧೬ ವರ್ಷದ ಅವಧಿಯಲ್ಲಿ ೨ಲಕ್ಷ ೯೦ ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡರು. ಇನ್ನೂ ಕೂಡ ರೈತರ ಆತ್ಮಹತ್ಯೆ ಆಗುತ್ತಲೇ ಇರುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರ ಆತ್ಮಹತ್ಯೆ ಆಗುತ್ತಿದ್ದರೂ, ಸರ್ಕಾರವು ಇದಕ್ಕೇನೂ ಪರಿಹಾರ ಕಂಡು ಹಿಡಿಯಲಿಲ್ಲ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಪರಿಸ್ಥಿತಿ ಏನಾಯಿತು ಎಂಬುದು ಅಜ್ಞಾತವಾಗಿಯೇ ಉಳಿದಿದೆ. ಹಳ್ಳಿಗರನ್ನು ನಗರಗಳಿಗೆ ವಲಸೆ ಹೋಗುವಂತೆ ಮಾಡಿದರೆ, ಹೆಚ್ಚು ಹೆಚ್ಚು ತಂತ್ರಜ್ಞಾನವನ್ನು ಉಪಯೋಗಕ್ಕೆ ತಂದರೆ ಹಳ್ಳಿಗರ ಸಮಸ್ಯೆಗಳು ಬಗೆಹರಿಯುತ್ತವೆ ಎಂಬ ಕಲ್ಪನೆ ಸರ್ಕಾರಕ್ಕಿದೆ. ಆದರೆ ಎಲ್ಲಿಯವರೆಗೆ ಹಳ್ಳಿಗಳನ್ನೇ ಗ್ರಾಮ ಸ್ವರಾಜ್ಯದ ನಿಟ್ಟಿನಲ್ಲಿ ಉಳಿಸಿಕೊಳ್ಳುವ ಪ್ರಯತ್ನ ನಡೆಯುವುದಿಲ್ಲವೋ ಅಲ್ಲಿಯವರೆಗೂ ಈ ರೀತಿಯ ಪಂಚವಾರ್ಷಿಕ ಯೋಜನೆಗಳಿಂದ ದೇಶ ಬಲಿಷ್ಠವಾಗುವುದಿಲ್ಲ. ಹಳ್ಳಿಗಳು ದೇಶದ ರಕ್ಷಣೆಯ ೨ನೇ ವ್ಯೂಹ ಆಗಬೇಕಾದರೆ ಹಳ್ಳಿಗಲ್ಲಿ ಅವುಗಳದೇ ಗ್ರಾಮರಾಜ್ಯವಾಗಬೇಕು. ಹಳ್ಳಿಗರು ಜಾಗತೀಕರಣದ ಸಂತೆಯಲ್ಲಿ ತಾವು ವಾಣಿಜ್ಯ ಪದಾರ್ಥಗಳಂತಾಗುವುದಕ್ಕೆ ನಿರಾರಕರಿಸಬೇಕು. ತಮ್ಮ ಹಳ್ಳಿಯನ್ನು ಬಲವಾಗಿ ಅಪ್ಪಿಕೊಳ್ಳಬೇಕು ಒಂದೊಂದು ಪಂಚವಾರ್ಷಿಕ ಯೋಜನೆ ಹಳ್ಳಿಗಳಿಗೆ ವಿಘಟನೆಯ ಏಟು ಕೊಟ್ಟಿದೆ. ಇದುವರೆಗೆ ಅಂತಹ ಹನ್ನೊಂದು ವಿಘಟನೆಯ ಏಟುಗಳು ಬಿದ್ದಿವೆ. ಈಗ ಹನ್ನೆರಡನೆಯ ಏಟು ಬಿದ್ದಿದೆ ಹಳ್ಳಿಗರು ಎಚ್ಚೆತ್ತುಕೊಳ್ಳುವ ಕಾಲ ಬಂದಿದೆ. ತಮ್ಮತನವನ್ನು ಉಳಿಸಿಕೊಳ್ಳುವ ಕಾಲ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಸಾಹತುಶಾಹಿಯನ್ನು ವಿರೋಧಿಸಬೇಕಿದೆ. ೨೦೧೪ರಲ್ಲಿ ನಡೆಯಲಿರುವ ಮಹಾಚುನಾವಣೆಯಲ್ಲಿ ಯಾವ ರಾಜಕೀಯ ಪಕ್ಷ ಹಳ್ಳಿಗಳನ್ನು ಸ್ವತಂತ್ರ ಘಟಕವನ್ನಾಗಿ ಪರಿಭಾವಿಸಲು ಸಿದ್ಧವಿದೆಯೋ ಅಂತಹ ಪಕ್ಷಕ್ಕೆ ಹಳ್ಳಿಗರು ತಮ್ಮ ಸಕಾರಾತ್ಮಕ ಅಭಿಪ್ರಾಯವನ್ನು ಸೂಚಿಸಬೇಕು.

ದೇಶದ ಕೃಷಿಯ ಒಂದು ಬೆತ್ತಲೆ ಚಿತ್ರ!

– ಸಂತೋಷ್ ಕೌಲಗಿ

ನಮ್ಮ ಹಳ್ಳಿಯ ಬೋರೇಗೌಡರಿಗೆ ಈಗ ೫೫ ವರ್ಷ . ಅವರ ಹೆಂಡತಿ ಲಕ್ಷಮ್ಮನವರಿಗೆ ಅವರಿಗಿಂತ ಒಂದು ೪/೫ ವರ್ಷ ಕಡಿಮೆ. ಅವರದು ೪ ಎಕರೆ ಒಣ ಭೂಮಿ. ಕಳೆದ ವರ್ಷ ಸಾಲ ಮಾಡಿ, ಏನೋ ಕಡೆದು ಕಟ್ಟಿ ಹಾಕಲು ಬೋರ್ ವೆಲ್ ಹಾಕಿಸಿದ್ದಾರೆ. ಬೋರ್‌ವೆಲ್‌ನಲ್ಲಿ ಬೆರಳಷ್ಟು ಗಾತ್ರ ನೀರು ಬರುತ್ತಿದೆ.

ಬೋರೇಗೌಡರು ಕೃಷಿ ಮಾಡಲು ಪ್ರಾರಂಭಿಸಿ ೪೫ ವರ್ಷಕ್ಕೂ ಹೆಚ್ಚು ವರ್ಷಗಳಾಗಿದೆ. ಇಷ್ಟು ವರ್ಷ ಆರಕ್ಕೂ ಏರದೆ ಮೂರಕ್ಕೂ ಇಳಿಯದೆ ಸಂಸಾರ ಸಾಗಿಸಿದ್ದಾರೆ, ಇನ್ನು ಮುಂದೆ ಆರಕ್ಕೆ ಏರುವುದಿರಲಿ, ಮೂರರಲ್ಲೂ ಉಳಿಯಲಾರದ ಪರಿಸ್ಥಿತಿಗೆ ತಲುಪಿದ್ದಾರೆ. ಅವರಿಗೆ ಮೂರು ಜನ ಮಕ್ಕಳು. ಎರಡು ಗಂಡು, ಒಂದು ಹೆಣ್ಣು. ಮೊದಲನೆಯವನು ಊರು ಬಿಟ್ಟು ಆಗಲೆ ಹದಿನೈದು ವರ್ಷಗಳಾಗಿವೆ. ಎಲ್ಲೋ ಬೆಂಗಳೂರಿನಲ್ಲಿ ಪಾನಿಪುರಿ ಅಂಗಡಿ ನಡೆಸುತ್ತಿದ್ದಾನೆ ಎಂದು ಸುದ್ದಿ. ಆತ ಊರಿಗೆ ಕಡೆಗೆ ಎಂದು ಬಂದದ್ದು ಎಂಬುದು ಮರೆತು ಹೋಗಿದೆ. ಇನ್ನು ಎರಡನೆಯ, ಮಗ ಪಕ್ಕದ ಪಟ್ಟಣದಲ್ಲಿ ಐ ಟಿ ಐ ಗೆ ಸೇರಿದ್ದಾನೆ. ಇರುವ ಒಂದೇ ಜೀನ್ಸ್‌ಪ್ಯಾಂಟ್ ತೊಟ್ಟು, ಮೇಲೆ **'ಐ ಲವ್ ನ್ಯೂಯಾರ್ಕ್"** ಎಂಬ ಬರಹದ ಟೀ ಶರ್ಟ್ ಹಾಕಿ, ಬೆನ್ನಿಗೆ ಒಂದು ಚೀಲ ನೇತುಬಿಟ್ಟು, ಎಸ್.ಎಂ.ಎಸ್ ಒತ್ತುತ್ತಾ ಬೆಳಿಗ್ಗೆ ೮ ಕ್ಕೆ ಮನೆ ಬಿಟ್ಟನೆಂದರೆ ಅವನು ಮನೆಗೆ ಬರುವುದೇ ಸಂಜೆ ಏಳಕ್ಕೆ, ಪಾಪ ಇನ್ನು ಮಗಳು ಬಾಣಂತನಕ್ಕೆಂದು ಅಪ್ಪನ ಮನೆಗೆ ಬಂದಿದ್ದಾಳೆ. ಅವಳ ಗಂಡ ಆಕೆಗೆ ಎರಡನೆಯ ಮಗುವಿನ ಸಂತಾನ ಭಾಗ್ಯವಿತ್ತು ಮತ್ತೆ ಮುಂಬೈಗೆ ಹೋಗಿದ್ದಾನೆ. ಆಕೆಯ ಮೊದಲ ಮಗು ಇಲ್ಲೇ ಅಂಗನವಾಡಿಗೆ ಹೋಗುತ್ತಿದೆ. ಅವನು ಮತ್ತೆ ಎಂದು ಬರುತ್ತಾನೆಂದು ಆಕೆಗೆ ಗೊತ್ತಿಲ್ಲ. ಇವರಲ್ಲದೆ ಮನೆಯಲ್ಲಿ ಬೋರೇಗೌಡರ ಅಪ್ಪ-ಅವ್ವ, ಅವರಿಗೆ ಕ್ರಮವಾಗಿ ೭೫ ಮತ್ತು ೭೦ ವರ್ಷ. ಮನೆಯ ಇನೊಬ್ಬರು ಸದಸ್ಯೆ, ಬೋರೇಗೌಡರ ತಂಗಿ. ಗಂಡ ಇನ್ನೊಂದು ಮದುವೆಯಾದನೆಂದು ಅಣ್ಣನ ಮನೆಗೆ ವಾಪಸ್ಸು ಬಂದು, ಬೌನ್ಸ್ ಆದ ಚೆಕ್ಕಿನಂತೆ ಇಲ್ಲೆ ಬಹಳ ವರ್ಷಗಳಿಂದ ಇದ್ದಾಳೆ. ಜೊತೆಗೆ ೧/೨ ಲೀ ಕರೆಯುವ ಎರಡು ಹಸುಗಳು, ೪ ಕುರಿ, ೬ ಕೋಳಿಗಳಿವೆ.

ಮಗನ ಕಷ್ಟ ನೋಡಲಾರದೆ ತಮ್ಮ ಇಳಿಯ ವಯಸ್ಸಿನಲ್ಲೂ ಕುರಿ ಕಾಯುತ್ತಾ, ಹುಣಿಸೇ ಮರ ಕಾಯುತ್ತಾ ಕೆಲಸ ಮಾಡುತ್ತಿರುವ ಅವರ ಅಪ್ಪ-ಅವ್ವ, ಅಪ್ಪ-ಅವ್ವನ ಕಷ್ಟ ನೋಡಲಾರದೆ ತನಗೆ ಸಾಧ್ಯವಾದಾಗ ಕೆಲಸದಲ್ಲಿ ಕೈ ಜೋಡಿಸುವ ಮಗಳು, ಅಣ್ಣನ ಹಂಗಿನ ಮನೆಯಲ್ಲಿ ಅನಿವಾರ್ಯವಾಗಿ ದುಡಿಯುತ್ತಿರುವ ತಂಗಿ, ಸಂಸಾರ ಕಟ್ಟಿ ಕೊಂಡಿರುವ ತಪ್ಪಿಗೆ ಏಗಲೇ ಬೇಕಾದ ಅವರ ಹೆಂಡತಿ, ಆಗಲೇ ೧೦ನೇ ತರಗತಿಯವರಗೆ ಓದಿದ್ದರೆ ನಾನೂ ಗೆಳೆಯ ರಾಮನಂತೆ ಅಮಲ್ದಾರ ಕಛೇರಿಯಲ್ಲಿ ಜವಾನನಾಗಿ ಆರಾಮವಾಗಿ ಇರಬಹುದಿತ್ತು ಎಂದು ಒಮ್ಮೊಮ್ಮೆ ಅನ್ನಿಸಿದರೂ ಅದು

ಇನ್ನು ಸಾಧ್ಯವಿಲ್ಲವೆಂದು ಅರಿತಿರುವ ಬೋರೇಗೌಡರು. ಕೆಲಸಕ್ಕೆ ಕರೆದರೆ ಹಳ್ಳಿಯಲ್ಲಿ ಒಂದೂ ಆಳಿಲ್ಲ. ಕಡೆಗೂ ಬಂದರೆ ೬೦ ದಾಟಿರುವ ಅದೇ ತಿಮ್ಮಣ್ಣ ಮತ್ತು ಬೊಮ್ಮಣ್ಣ. ಅವರಿಗೆ ಬೆಳಿಗ್ಗೆ ಬರುವಾಗಲೇ 'ಕರೆನ್ಸಿ' ಹಾಕಿಸಿದರಷ್ಟೇ ಮುಂದಿನ ಕೆಲಸ.

ಇಂತಹ ಪರಿಸ್ಥಿತಿಯಲ್ಲಿ ಶ್ರೀಮತಿ ಮತ್ತು ಶ್ರೀ ಬೋರೇಗೌಡರು ಈ ದೇಶದ ಕೃಷಿಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಅವರಿಗೇ ಗೊತ್ತಿಲ್ಲದೆ, ಅವರಿಗೆ ಬೇಡವಾಗಿಯೇ ಈ ಜವಾಬ್ದಾರಿಯೂ, ನಾಯಕತ್ವವೂ ಅವರ ಬಾಗಿಲಿಗೆ ಬಂದು ನಿಂತದೆ. ಎಂತಹ ಅದೃಷ್ಟ ನೋಡಿ !

ಇತ್ತೀಚಿನ ವರ್ಷಗಳಲ್ಲಿ ಅದೇಕೋ ಬೋರೇಗೌಡರಿಗೆ ತಾನು ಸೋಲುತ್ತಿದೇನೆಂಬ ಭಾವ ಕಾಡ ತೊಡಗಿದೆ. ಆದರೆ "ಇಲ್ಲ, ಇಲ್ಲ ನೀನು ಗೆಲ್ಲುತ್ತಿದ್ದೀಯ, ಇನ್ನೊಂದು ಚೂರು ಮೇಲಕ್ಕೆ ನೆಗೆದರೆ, ಸಿಹಿ ದ್ರಾಕ್ಷಿ ನಿನ್ನ ಬಾಯಿಗೆ," ಎಂದು ಕೃಷಿ ಇಲಾಖೆಯೂ, ಅಭಿವೃದ್ಧಿ ಇಲಾಖೆಯೂ ಸತತವಾಗಿ ಹೇಳುತ್ತಿವೆ. ಅದರ ಮುಂದುವರಿಕೆಯಾಗಿ ಸಿಹಿ ದ್ರಾಕ್ಷಿ ಪಡೆಯಲು ಬೇಕಾದ ಆಧುನಿಕ ಅಸ್ತ್ರ ನನ್ನಲ್ಲಿದೆ ಎಂದು ಅದನ್ನು ಮಾರಲು ದಂಡು ದಂಡಾಗಿ ಕೃಷಿ ಕಂಪನಿಗಳು ಇವನ 'ನೆರವಿಗೆ' ಬರುತ್ತಿವೆ.

"ನಿನ್ನ ಮೇಲೆ ಈ ದೇಶದ ೫೦೦೦ ವರ್ಷಗಳ ಕೃಷಿ ಪರಂಪರೆಯನ್ನು ಉಳಿಸುವ ಜವಾಬ್ದಾರಿ ಇದೆ, ನೀನು ಖಂಡಿತಾ ಧೈರ್ಯಗೆಡಬಾರದು, ಭ್ರಷ್ಟನಾಗಬಾರದು, ನಿನ್ನನ್ನು ಬಿಟ್ಟರೆ ಈ ಭವ್ಯ ಕೃಷಿ ಪರಂಪರೆಯನ್ನು ಯಾರೂ ಉಳಿಸಲಾರರು" ಎಂಬ ಸಂದೇಶವನ್ನು ಸಾರುತ್ತಾ ಗೀತಾಚಾರ್ಯನಂತೆ ಮತ್ತೊಂದೆಡೆ ನಿಂತಿವೆ 'ಸುಸ್ಥಿರ' ಕೃಷಿಯಲ್ಲಿ 'ಅಪಾರ' ನಂಬಿಕೆಯುಳ್ಳ ಸರ್ಕಾರೇತರ ಸಂಸ್ಥೆಗಳು.

ಇಷ್ಟಲ್ಲದೆ ಬದನೆಕಾಯಿ ಬೆಳೆದು ಭಾಗ್ಯವಂತರಾದ, ಕ್ಷೀರಧಾರೆ ಹರಸಿದ, ಡಯಾಬಿಟಿಸ್ ಭತ್ತ (?) ಬೆಳೆದು ತಳಿ ಉಳಿಸಿದ ಕಾಗಣ್ಣ, ಗುಬ್ಬಣ್ಣಗಳ ಕತೆಯನ್ನು ತಪ್ಪದೆ ಪ್ರಚುರಪಡಿಸಿ ಕೃಷಿ ಪುರವಣಿಗಳೂ, ಕೃಷಿ ರಂಗಗಳೂ ಬೋರೇಗೌಡರು ನಿಶಸ್ತ್ರರಾಗದಂತೆ ನೋಡಿ ಕೊಳ್ಳುವುದರೊಂದಿಗೆ, "ಎಲ್ಲರಿಗೂ ಯಶಸ್ವಿಯಾಗಿ ಕೃಷಿ ಮಾಡಲು ಬರುತ್ತಿದೆ, ನನಗೆ ಮಾತ್ರ ಸಾಧ್ಯವಾಗುತ್ತಿಲ್ಲ" ಎಂಬ ಕೀಳರಿಮೆಯನ್ನು ಅವರಲ್ಲಿ ಹುಟ್ಟಿಸುವುದರಲ್ಲಿ ಯಶಸ್ವಿಯಾಗಿವೆ. ಇನ್ನು ಪ್ರಶಸ್ತಿ ಪ್ರಿಯ ಬೋರೇಗೌಡರುಗಳಿಗೆ 'ಕೃಷಿ ಪಂಡಿತ' ಎಂಬ ತುಪ್ಪವನ್ನು ಮೂಗಿನ ತುದಿಗೆ ಹಚ್ಚಿ ಅವರು ಯಾವುದೇ ಕಾರಣಕ್ಕೂ ಕೃಷಿ ಬಿಡದಂತೆ ಮಾಡುವ ಮಿಷನ್ ಅನ್ನು ವ್ಯವಸ್ಥೆ ಇಟ್ಟು ಕೊಂಡಿದೆ. ಇನ್ನು ಮುಖ್ಯ ಮಂತ್ರಿಗಳ ವಾಸ್ತವ್ಯ ತನಗೇನಾದರೂ ಅದೃಷ್ಟ ತರಬಹುದೆಂಬ ಭ್ರಮೆಯ ಇನ್ನೊಂದಿಷ್ಟು ಬೋರೇಗೌಡರುಗಳು.

ಇನ್ನು ನಮ್ಮ ಆಧುನಿಕ ಅರ್ಥಶಾಸ್ತ್ರ ಪಂಡಿತರೂ, ಅರ್ಥ ಪತ್ರಿಕೆಗಳೂ 'ವಿದ್ಯಾವಂತ' ಯುವಜನ ಕೃಷಿ ಕಡೆಗೆ ವಾಲುತ್ತಿದ್ದಾರೆ ಎಂದು, ೫೦ ಎಕರೆಯಲ್ಲಿ ಮೆಕ್ಕೆ ಜೋಳ ಬೆಳೆದ. ೨೦೦ ಹಸುಗಳನ್ನು ಸಾಕಿದ, ೨೦೦೦ ಕುರಿ ಮೇಯಿಸಿದ, ೧೦೦ ಎಕರೆಯಲ್ಲಿ ಜಟ್ರೋಪಾ ಬೆಳೆದ ಶ್ರೀಮಂತವರ್ಗದ ಮಕ್ಕಳ ಖಯಾಲಿ ಕೃಷಿಯನ್ನು ಆಧುನಿಕ ಕೃಷಿ ಎಂದು ಇತ್ತೀಚಿಗೆ ಬಿಂಬಿಸುತ್ತಿವೆ.

ಇದೆಲ್ಲವನ್ನೂ ನೋಡಿ, ನಮ್ಮ ಬೋರೇಗೌಡರು, ನಾನು ಸೋತಿದ್ದೇನೆ

ಎಂದು ಒಪ್ಪಿ ಕೊಂಡು ಬಿಟ್ಟರೆ, ಎಲ್ಲಿ ವ್ಯವಸ್ಥೆ ಕುಸಿದು ತನ್ನ ಮೇಲೆ ಬೀಳುವುದೋ, ಎಂದು ಕೃಷಿ ವಿಜ್ಞಾನಿಗಳಿಗಿಂತಲೂ ವ್ಯವಸ್ಥಿತವಾಗಿ ಅಂಕಿ ಅಂಶಗಳನ್ನು ಕೊಡುವುದನ್ನು ಕರತಲ ಮಾಡಿಕೊಂಡಿದ್ದಾರೆ.

ಹಳ್ಳಿಯಲ್ಲಿದ್ದವರಿಗೆ ಕೃಷಿ ಉತ್ಪತ್ತಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದೂ, ಹೆಚ್ಚು ಹೆಚ್ಚು ಭೂಮಿ ತಕ್ಕಲು ಬೀಳುತ್ತಿರುವುದೂ ಕಂಡು ಬರುತ್ತಿದ್ದರೂ ಅಂಕಿ-ಅಂಶಗಳು ಮಾತ್ರ ಕೃಷಿ ಉತ್ಪತ್ತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದನ್ನು ತೋರಿಸುತ್ತಿವೆ.

ಒಟ್ಟಾರೆ ತಾಳ- ಮೇಳಗಳಿಲ್ಲದ ಒಂದು ಅಧ್ಭುತ ಸಂಗೀತ ಕಛೇರಿ ನಮ್ಮ ಕೃಷಿ ಕ್ಷೇತ್ರ.

ಈ ದೇಶಕ್ಕೆ ದೊಡ್ಡ ಪರಂಪರೆಯಿದೆ, ಇಲ್ಲಿಯ ಕೃಷಿ ಸಂಸ್ಕೃತಿ ಆಳವಾಗಿ ಬೇರು ಬಿಟ್ಟಿದೆ, ಯಾವುದೇ ಆಧುನಿಕ ಹೊಡೆತವನ್ನೂ ತಡೆದು ನಿಲ್ಲುವ ಗಟ್ಟಿಯಾದ ಹಡಗು ನಮ್ಮದು, ಎಂದು ಕೊಂಡಿದ್ದವರಿಗೆ ನಮ್ಮದೂ ಟೈಟಾನಿಕ್ ಹಡಗು ಎಂದು ಅರಿವಾಗತೊಡಗಿದೆ. ಕೃಷಿ ಸಂಸ್ಕೃತಿಯ ಹಡಗಿನಲ್ಲಿ ಆಗಲೇ ನೀರು ತುಂಬಿಕೊಳ್ಳತೊಡಗಿದೆ. ನಾಗರೀಕತೆಗೂ ಸಂಸ್ಕೃತಿಗೂ ನಡುವಿನ ಅಂತರದ ಸೂಕ್ಷ್ಮತೆ ನಮಗರಿವಿಲ್ಲದಾಗತೊಡಗಿದೆ.

ಯಾವುದೇ ಒಂದು ಕೃಷಿ ತಾಕಿನಲ್ಲಿ ನಮ್ಮ ಪಾರಂಪರಿಕ ಕೃಷಿ ವಿಧಾನದಲ್ಲಿನ ವೈವಿಧ್ಯತೆಯನ್ನು ಉಳಿಸಿಕೊಂಡು ಕೃಷಿ ಮಾಡಲು ಬೇಕಾದ ದೈಹಿಕ ಮತ್ತು ಮಾನಸಿಕ ಸ್ಥಿತಿ ಇಂದು ನಮಗಿಲ್ಲದಾಗಿದೆ. ಪಾರಂಪರಿಕ ಕೃಷಿ ನಮ್ಮ ಅಗತ್ಯಗಳನ್ನು ಪೂರೈಸಬಲ್ಲದೆ ಹೊರತು ನಮ್ಮ ದುರಾಸೆಗಳನ್ನಲ್ಲ. ಜಾಗತೀಕರಣದ ಹೊಸ ಆರ್ಥಿಕ ವ್ಯವಸ್ಥೆಯು ತನಗೆ ಲಾಭದಾಯಕವಲ್ಲದ ಯಾವುದನ್ನಾದರೂ ಹೊಸಕಿ ಹಾಕುವ ಪ್ರಬಲವಾದ ಅಸ್ತ್ರಗಳನ್ನು ಹೊಂದಿದೆ. ಲಾಭದಾಯಕವಲ್ಲದನ್ನು ಮುಗಿಸಲು ವ್ಯವಸ್ಥೆಯ ಇತರ ಅಂಗಗಳು ಕೆಲಸ ಮಾಡುವಂತೆ ನೋಡಿಕೊಳ್ಳುತ್ತದೆ.

ಉದಾಹರಣೆಗೆ ಆಧುನಿಕ ಶಿಕ್ಷಣವನ್ನು ನೋಡಿ. ಆಧುನಿಕ ಶಿಕ್ಷಣ ನಮ್ಮ ಮಕ್ಕಳನ್ನು ಪಾರಂಪರಿಕ ಕೃಷಿಯಿಂದ ಎಷ್ಟು ದೂರವೋ ಅಷ್ಟು ದೂರಕ್ಕೆ ಒಯ್ದಿದೆ. ಪಾರಂಪರಿಕ ಕೃಷಿಕನಾಗಲು ೮/೧೦ ಗಂಟೆ ಬಿಸಿಲಿನಲ್ಲಿ ಬೇಗಲು ಸಿದ್ಧನಿರಬೇಕು. ಹಸು ಎಮ್ಮೆಗಳನ್ನು ಕಟ್ಟಿಕೊಂಡರೆ ಹೊರಗಿನ ಯಾವುದೇ ಆಮಿಶಕ್ಕೂ ಒಳಗಾಗದೇ ಸದಾ ಕಾಲ ಮನೆಯಲ್ಲಿ ಇರುವ ಮನೋಸ್ಥಿತಿ ಬೇಕು. ಇಂತಹ ದೈಹಿಕ ಮಾನಸಿಕ ಸ್ಥಿತಿಗೆ ಬಾಲ್ಯದಿಂದಲೇ ತಯಾರಿ ಬೇಕು. ಆದರೆ ನಮ್ಮ ಆಧುನಿಕ ಶಿಕ್ಷಣ ಇದಕ್ಕೆ ವಿರುದ್ಧವಾದುದನ್ನೇ ಮಾಡುತ್ತಿದೆ. ಶಾಲೆಯಿಂದ ಒಂದು ಮಗು ಹೊರಗೆ ಉಳಿದರೂ ಅದು ಸಾಮಾಜಿಕ ಪಾಪ ಎನ್ನುವ ಈ ದಿನಗಳಲ್ಲಿ ಏನು ಮಾಡೋಣ? ಹೇಗೆ ಸರಿದೂಗಿಸೋಣ? ಆಯ್ಕೆ ನಮ್ಮ ಕೈಯಲಿಲ್ಲ. ಎಲ್ಲರೂ ಅಸಹಾಯಕರು.

ಇನ್ನೂ ಗಂಭೀರವಾದ ಬೆಳವಣಿಗೆ ಎಂದರೆ ಕೃಷಿ ಮಾಡುತ್ತಿದ್ದಾನೆಂದರೆ ವಧುವೇ ಸಿಗದ ಪರಿಸ್ಥಿತಿ ನಿರ್ಮಾಣವಾಗಿರುವುದು. ಮದುವೆ ಆಗಿ ತನ್ನದೊಂದು ಗೂಡು ಕಟ್ಟಿಕೊಳ್ಳಲು ಸಾಧ್ಯವಾಗದಿದ್ದ ಮೇಲೆ ಕೃಷಿ ಮಾಡಲು ಯಾರು ಬಂದಾರು?

ಇಂದು ಕೃಷಿಗೆ ಬಂದಿರುವ ವಿಪತ್ತು ಗ್ರಾಮೀಣ ಕೈಗಾರಿಕಗಳಿಗೆ ಬಹು

ಹಿಂದೆಯೇ ಬಂದು ಹೋಯಿತು. ಕುಟುಂಬ ವ್ಯವಸ್ಥೆಯ ಉದ್ಯೋಗಗಳು ನಮಗೆ ಮರತೇ ಹೋದವು.

ಇನ್ನು ಆಧುನಿಕ ಕೃಷಿಯನ್ನು ತೆಗೆದು ಕೊಳ್ಳಿ. ಅದು ಬೇಡುವ ಬಂಡವಾಳ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗಿ ಬೋರೇಗೌಡರಂಥವರಿಗೆ ಬಂಡವಾಳ ಹೊಂದಿಸುವುದೇ ಸವಾಲಾಗಿ ಅಧಿಕ ರಕ್ತದೊತ್ತಡ, ಮಧುಮೇಹ ಅವರಿಗೆ ಗೊತ್ತಿಲ್ಲದಂತೆಯೇ ಬರುತ್ತದೆ.

ಹತಾಶರಾಗಿರುವ ಕೋಟ್ಯಾಂತರ ಬೋರೇಗೌಡರು ಯಾರು ಏನೇ ಹೇಳಿದರು ಮಾಡುವ ಸ್ಥಿತಿಗೆ ತಲುಪಿಹೋಗಿದ್ದಾರೆ. ರೋಗಕ್ಕೆ ಒಳಗಾದ ವ್ಯಕ್ತಿ ಆಧುನಿಕ ವೈದ್ಯರ ಬಳಿಯೂ, ನಾಟಿ ವೈದ್ಯರ ಬಳಿಯೂ, ದೇವರ ಬಳಿಯೂ, ದೆವ್ವದ ಬಳಿಯೂ ಹೋಗುವಂತೆ ಬೋರೇಗೌಡರು ಎಲ್ಲ ಕಡೆ ಸುತ್ತುತ್ತಿದ್ದಾರೆ. ಹೀಗಾಗಿ ಎಲ್ಲ ಪಂಡಿತರ ಬಳಿಯೂ ದೊಡ್ಡ, ದೊಡ್ಡ ಸಾಲುಗಳು ಕಾಣಸಿಗುತ್ತವೆ. ಇದರಿಂದಾಗಿ ಗೋಮೂತ್ರದವರು, ಸಗಣಿಯವರು, ಎಂಡೋಸಲ್ಫಾನ್‌ನವರು, ಹೋಮ-ಹವನದವರು, ನಾಟೀ ಬೀಜದವರು, ಎರೆಗೊಬ್ಬರದವರು, ಯೂರಿಯಾದವರು, ಹೈಬ್ರೀಡ್ ಬೀಜದವರು ಹೀಗೆ ಲಕ್ಷಾಂತರ ಜನರಿಗೆ ನಿಜವಾದ ಅರ್ಥದಲ್ಲಿ ಬೋರೇಗೌಡರು ಅನ್ನದಾತರಾಗಿದ್ದಾರೆ.

ಪರ್ಯಾಯ ಚಿಂತನೆಗಳ ವಿರುದ್ಧದ ರಾಜಕೀಯ ಶಕ್ತಿಗಳು ನೀವು ಏನನ್ನು ಹೇಳ ಬಯಸುತ್ತೀರೋ ಅದು ನಿಮ್ಮ ಬಾಯಿಂದ ಬರುವ ಮೊದಲೇ ಅದು ಭಿನ್ನವಾದ ಆರ್ಥ ಪಡೆದು ಬರುವಂತೆ ಮಾಡುತ್ತವೆ. ನೀವು ಕೈ ಗೊಂಡಿರುವ ಕಾರ್ಯ ಎಷ್ಟೇ ಅರ್ಥಪೂರ್ಣವಾದದ್ದು ಎಂದು ನಿಮಗೆ ಅನಿಸಿದ್ದರೂ, ಜಾಗತಿಕ ನೆಲೆಗಟ್ಟಿನಲ್ಲಿ ನಿಮಗೇ ಅದರ ಬಗ್ಗೆ ಅನುಮಾನ ಮೂಡುವಂತೆ ಮಾಡುತ್ತವೆ. ಅಪಾಯದ ತುದಿಗಟ್ಟಿನಲ್ಲಿ ನಿಲ್ಲಿಸಿ, ಪಾರಾಗಲು ನಿನ್ನಲ್ಲಿ ಏನಾದರೂ ಉಪಾಯವಿದೆಯೇ ಎನ್ನುತ್ತವೆ.

೫೦೦೦ ವರ್ಷಗಳ ಕೃಷಿ ಪರಂಪರೆಯನ್ನು ಒಂದು ರಾಜಕೀಯ ಇಚ್ಛಾಶಕ್ತಿ ೬೦ ವರ್ಷಗಳಲ್ಲಿ ಹೇಗೆ ಬದಲಿಸಿತು ನೋಡಿ !

ತನಗೆ ಪ್ರಯೋಜನವಿಲ್ಲದ ಕನ್ನಡ ಶಾಲೆಗಳನ್ನು ವ್ಯವಸ್ಥೆ ಹೇಗೆ ಕೊಲ್ಲುತ್ತಿದೆ ನೋಡಿ. ಇಲ್ಲಿ ಬಳಸಲ್ಪಡುತ್ತಿರುವ ತಂತ್ರಗಳೇ ಹೊಸ ವ್ಯವಸ್ಥೆಗೆ ಲಾಭದಾಯಕವಲ್ಲದ್ದನ್ನು ಮುಚ್ಚಲು ಬಳಕೆಯಾಗುತ್ತದೆ. ಇದಕ್ಕೆ ಕೃಷಿ ಏನು ಅಪವಾದವಲ್ಲ.

ಇದಕ್ಕೆ ಏನು ಪರ್ಯಾಯ ಎಂದು ನನ್ನನ್ನು ಕೇಳಬೇಡಿ. ನನಗೂ ಅರ್ಥವಾಗುತ್ತಿಲ್ಲ. ಇಡೀ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿದೆ. ಚಿನ್ನದ ಕತ್ತಿಯಿಂದ ನಮ್ಮನ್ನೂ ನಮ್ಮ ವ್ಯಕ್ತಿತ್ವವನ್ನೂ ಹೇಗೆ ಕುಯ್ಯುತ್ತಿದೆ ಎಂದು ಒಮ್ಮೆ ಅರ್ಥವಾದರೆ ಹೊಸ ದಾರಿಗಳು ಕಂಡಾವು.

* * *

ಕೃಷಿ ಲೋಕದಲ್ಲಿಯ ತಲ್ಲಣಗಳು

– ಕೆ.ಪಿ.ಸುರೇಶ

ದೇಶದ ಕೃಷಿ, ಕೃಷಿಲೋಕ ಮತ್ತು ರೈತ ಅಸ್ಥಿರಗೊಳ್ಳುತ್ತಾ ಹೋಗುತ್ತಿರುವುದು ಎಲ್ಲರ ಗಮನಕ್ಕೂ ಬಂದಿದೆ.. ಸಮಸ್ಯೆಯನ್ನು ಹೇಳಿ, ವಿಮರ್ಶಿಸಿ, ಹೊಸದಾರಿ ಬಗ್ಗೆ ಯೋಚಿಸುವುದು ನಿರಂತರವಾಗಿ ನಡೆಯುತ್ತಿದೆ.

ಈ ದೇಶ ಒಂದು ರೀತಿಯಿಂದ ನೋಡಿದರೆ ನತದೃಷ್ಟ ದೇಶ, ಇನ್ನೊಂದು ರೀತಿಯಿಂದ ನೋಡಿದರೆ ಅದೃಷ್ಟ ಪಡೆದ ದೇಶ. ಇಲ್ಲಿನ ಋತು ವೈಪರೀತ್ಯಗಳು, ಅತಿಯಾದ ಜನಸಂಖ್ಯೆ, ಶಠತನ ರೂಢಿಸಿಕೊಂಡ ಸಮುದಾಯಗಳನ್ನ ನೋಡಿದರೆ ಮನ ವಿಹ್ವಲಗೊಳ್ಳುತ್ತದೆ. ಆದರೆ ಇಲ್ಲಿನ ಜೀವ, ಋತು ಮತ್ತು ಸಮುದಾಯಗಳ ವೈವಿಧ್ಯತೆ ನೊಡಿದರೆ, ಆಸೆ ಮೂಡುತ್ತದೆ.

ನಮ್ಮ ಬಹುತೇಕ ಪ್ರತಿಕ್ರಿಯೆಗಳು ಇವೆರಡರಿಂದ ಹೊಮ್ಮಿರುತ್ತವೆ. ಒಂದೋ ತೀರಾ ಆಸೆ ಕಡಿದ ಆಕ್ರೋಶ ಭರಿತ ಮಾತುಗಳು, ಇಲ್ಲಾ ತೀರಾ ಆತ್ಮವಂಚನೆಯ ರೊಮ್ಯಾಂಟಿಕ್ ಭರವಸೆಯ ಪ್ರತಿಕ್ರಿಯೆಗಳು.

ನಮ್ಮ ರೈತ ಸಂಘ, ಹೋರಾಟಗಾರರು ಸುಮಾರಾಗಿ ಮೊದಲನೇ ವರ್ಗಕ್ಕೆ ಸೇರಿದರೆ, ನಮ್ಮ ಎನ್.ಜಿ.ಓಗಳು,, ಸರ್ಕಾರೀ ಇಲಾಖೆಗಳು ಎರಡನೇ ವರ್ಗಕ್ಕೆ ಸೇರಿದಂತಿವೆ.

ಈ ದೇಶದಲ್ಲಿ ನಿರಾಶವಾದಿಯಾಗಿರುವುದೆಂದರೆ, ಆತ್ಮಹತ್ಯೆ ಮಾಡಿಕೊಂಡಂತೆ ಎಂದು ಹಿರಿಯರೊಬ್ಬರು ಹೇಳಿದ್ದು ನೆನಪಾಗುತ್ತಿದೆ. ನಮ್ಮ ಸಣ್ಣ ಕ್ರಿಯೆಗಳೂ, ಅದು ಹೊಸದಾರಿಯ ಪುಟ್ಟ ದೀಪವಾಗಿ, ಸದಾ ಉರಿಯುತ್ತಿರಲೇಬೇಕು. ಸ್ವಾತಂತ್ರ್ಯ ಸಂಗ್ರಾಮದ ವಿವರಗಳನ್ನು ನೋಡಿದರೆ, ಈ ದೇಶದ ೧% ಮಂದಿ ಮಾತ್ರ ಪ್ರಾಯಶಃ ಅದರಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದರು. ೦.೧% ಜೈಲಿಗೆ ಹೋಗಿರಬಹುದೋ ಏನೋ.. ಆದರೆ ಸ್ಥಳೀಯವಾಗಿ ಈ ಒಬ್ಬೊಬ್ಬನೂ ತನ್ನ ಸಮುದಾಯದ ಮೇಲೆ ವ್ಯಾಪಕ ಪರಿಣಾಮ ಬೀರಿ ಅಲ್ಲೊಂದು ಅಸಹಯೋಗದ ಮೌನನಿರ್ಧಾರ ಘನೀಭೂತಗೊಂಡಿದ್ದರಿಂದಲೇ ಬ್ರಿಟಿಶ್ ಆಡಳಿತ ಕೊನೆಗೊಂಡಿತು. ಇದಕ್ಕೆ ಬಾಹ್ಯ ಕಾರಣಗಳೂ ಇದ್ದವು, ಅದನ್ನು ನೆನಪಿಸಿಕೊಂಡರೂ ಈ ಮೌನನಿರ್ಧಾರ ಗೌಣವಾಗುವುದಿಲ್ಲ.

ನಮ್ಮ ಕೃಷಿ/ ಗ್ರಾಮೀಣ ಲೋಕದಲ್ಲಿ ಆತ್ಯಂತಿಕ ಎನ್ನುವ ಬದಲಾವಣೆ ಶುರುವಾಗಿದ್ದು ೬೦ರ ದಶಕದ ಹಸಿರು ಕ್ರಾಂತಿಯಿಂದ, ಇದು ಹುಸಿ ವಿಶ್ವಾಸವನ್ನು ಬಿತ್ತಿದರೆ, ೯೦ರ ದಶಕದ ಜಾಗತೀಕರಣ ತೀವ್ರ ಅಸಹಾಯಕತೆಯನ್ನು ಸೃಷ್ಟಿ ಮಾಡಿತು. ಹಸಿರು ಕ್ರಾಂತಿಯ ಭೀಕರ ಪರಿಣಾಮಗಳಿಂದಾಗಿ ದಿಕ್ಕೆಟ್ಟ ಕೃಷಿಲೋಕಕ್ಕೆ ಈ ಜಾಗತೀಕರಣದ ತರುವಾಯದ ಪ್ರಕ್ರಿಯೆಗಳು ಮರಣಶಾಸನವಾಗಿ ಪರಿಣಮಿಸುತ್ತಿರುವುದು ಸುಳ್ಳಲ್ಲ.

ಇವೆರಡು ಬದಲಾವಣೆಗಳನ್ನೂ ಪ್ರಭುತ್ವವೇ ಉದ್ಘಾಟಿಸಿದ್ದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ೫೦ರ ದಶಕದಲ್ಲೇ ಪ್ರಭುತ್ವ ನಮ್ಮೆಲ್ಲರಿಗೂ ಮಾಯಿ-ಬಾಪ್ ಆಯಿತಷ್ಟೇ. ಅತೀ ಆತ್ಮ ವಿಶ್ವಾಸದಲ್ಲಿ ಪ್ರಭುತ್ವ ಶುರುಮಾಡಿದ ಎಲ್ಲ ಕಲ್ಯಾಣ ಕಾರ್ಯಕ್ರಮಗಳು ಕರ್ಮ ಫಲವಾಗಿ ಕಾಡತೊಡಗಿದಾಗ ಅದನ್ನು ಸರಿಪಡಿಸುವ ಹೆಜ್ಜೆಗಳೂ ಅಷ್ಟೇ ಅಪದ್ಧವಾಗತೊಡಗಿದ್ದು ನಮಗೆಲ್ಲರಿಗೂ ಗೊತ್ತು. ಇಂದಿಗೂ ಸರ್ಕಾರ ಏನನ್ನು ಮಾಡಹೊರಟರೂ ಅದು ನಮ್ಮನ್ನು ಇನ್ನಷ್ಟು ಆಳಕ್ಕೆ ತಳ್ಳುತ್ತಿರುವಂತೆ ತೋರುತ್ತದೆ.

ಆದ್ದರಿಂದಲೇ ನಮ್ಮ ಕೃಷಿ/ಗ್ರಾಮೀಣ ಲೋಕವನ್ನು ಸರಿಪಡಿಸುವ ಪರ್ಯಾಯ ಸೂಚಿಗಳು ಪ್ರಭುತ್ವದಿಂದ ಬರಲು ಸಾಧ್ಯವಿಲ್ಲ. ಅದು ನಮ್ಮಿಂದ ಅಂದರೆ ಸಮುದಾಯದಿಂದಲೇ ಹೊಮ್ಮಬೇಕು. ಆದರೆ ಯಾವ ಸಂಸ್ಥೆ ಅಥವಾ ಸಮುದಾಯದ ಗುಂಪುಗಳಿಗೂ ಪ್ರಭುತ್ವದಷ್ಟು ಶಕ್ತಿಯಾಗಲೀ, ಹಣಕಾಸಿನ ದಾರ್ಢ್ಯತೆಯಾಗಲೀ ಇರಲು ಸಾಧ್ಯವೇ ಇಲ್ಲ. ನಾವು ಮಾಡಬಹುದಾದ ಕೆಲಸವೆಂದರೆ, ಪರ್ಯಾಯದ ಮಾದರಿಗಳನ್ನು ಸೃಷ್ಟಿಸಿ ಪ್ರಭುತ್ವ ಅದನ್ನು ಗಮನಿಸುವಂತೆ ಒತ್ತಾಯಿಸುವುದು. ಅಥವಾ, ಹೋರಾಟ, ಹಕ್ಕೊತ್ತಾಯಗಳ ಮೂಲಕ ಪ್ರಭುತ್ವ ಗಮನಿಸಿ ತಿದ್ದಿಕೊಳ್ಳುವಂತೆ ಅದನ್ನು ಮಣಿಸುವುದು.

ಈ ಬೆಳಕಿನಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ನಮ್ಮಲ್ಲಿ ಚಾಲ್ತಿಗೆ ಬಂದಿರುವ ಸಾವಯವ ಕೃಷಿಯನ್ನೂ ಇನ್ನಿತರ ತಾಂತ್ರಿಕ ಆವಿಷ್ಕಾರಗಳನ್ನೂ ಗಮನಿಸಬೇಕು. ಹೊಟ್ಟೆಹೊರೆಯಲು, ದಾನಿಗಳನ್ನು ಮೆಚ್ಚಿಸಲು ರಂಜಕ ವರದಿಗಳನ್ನು ನೀಡುವ ಸಂಸ್ಥೆಗಳನ್ನು ಪಕ್ಕಕ್ಕಿಟ್ಟರೂ ಈ ಪರ್ಯಾಯಗಳ ದೂರಗಾಮೀ ಪರಿಣಾಮಗಳ ಒತ್ತಾಯಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಇದು ಮೂಲತಃ ಸದ್ಯದ ವ್ಯವಸ್ಥೆಗೆ ಪರ್ಯಾಯವಲ್ಲ. ಆದರೆ, ಪ್ರಸ್ತುತ ಇರುವ ರೋಗವನ್ನು, ದೋಷಗಳನ್ನೂ ಎತ್ತಿ ತೋರಿಸಿ ಹೊಸ ದಾರಿಯತ್ತ ನಡೆಯಲು ಒತ್ತಾಯಿಸುವ ಶಕ್ತಿ ಪಡೆದಿವೆ. ಆದ್ದರಿಂದಲೇ ಇವು ಮುಖ್ಯ.

ಇಂದು ನಮ್ಮ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ರಾಸಾಯನಿಕ ರಹಿತ ಕೃಷಿ ಅನಿವಾರ್ಯ ಎಂದು ತಾತ್ವಿಕವಾಗಿ ಒಪ್ಪಿಕೊಂಡಿವೆ. ಆದರೆ ಸದ್ಯದ ರಾಸಾಯನಿಕ ಕೃಷಿಯನ್ನು ಬಿಡಲೂ ಸಾಧ್ಯವಿಲ್ಲ ಎಂದು ಹೇಳುತ್ತಿವೆ. ಆದರೆ ಸರ್ಕಾರಕ್ಕೂ ಇದು ಸದ್ಯೋ ಭವಿಷ್ಯದಲ್ಲೇ ಆರ್ಥಿಕವಾಗಿ ಅತ್ಮಹತ್ಯಾಕಾರಿ ಎಂಬ ಅರಿವೂ ಇದೆ. ಸುಮಾರಾಗಿ ವರ್ಷಕ್ಕೆ ಏನಿಲ್ಲವೆಂದರೂ ೨ ಲಕ್ಷ ಕೋಟಿ ರೂಪಾಯಿ ಈ ಕೃಷಿ ಮಾದರಿಯನ್ನು ಉಳಿಸಲು ಸರ್ಕಾರ ವೆಚ್ಚ ಮಾಡುತ್ತಿದೆ. ವರ್ಷಗಳುರುಳಿದಂತೆ ಇದು ದುಸ್ಸಾಧ್ಯವೆಂಬ ಮಟ್ಟಿಗೆ ಏರುವುದು ಖಚಿತ.

ತನ್ನ ಆರ್ಥಿಕ ವ್ಯವಸ್ಥೆಯ ಉಳಿವಿಗಾದರೂ ಸರ್ಕಾರ ಈ ಪರ್ಯಾಯಗಳತ್ತ ಗಂಭೀರವಾಗಿ ಗಮನ ಹರಿಸುವುದು ಅನಿವಾರ್ಯ.

ನಮ್ಮ ಸರ್ಕಾರದ ಮೂರ್ಖತನ ಹೇಗಿದೆಯೆಂದರೆ, ಹಸಿರುಕ್ರಾಂತಿ ನಮ್ಮ ನೆಲ-ಜಲವನ್ನು ನಂಜುಗೊಳಿಸಿದೆ ಎಂದು ಅರ್ಥವಾದಾಗಲೂ, ಜಾಗತೀಕರಣದ ಒತ್ತಡಕ್ಕೆ ಬಿದ್ದು ನಗರೀಕರಣಕ್ಕೆ ಒತ್ತಾಸೆ ಕೊಡುತ್ತಿದೆ. ಇದೂ ಶೀಘ್ರವೇ ಬಲು

ತಲೆನೋವಿನ ಸಮಸ್ಯೆಗಳನ್ನು ಸೃಷ್ಟಿಸುವುದು ಖಚಿತ. ಕೃಷಿ ನಷ್ಟದಾಯಕವೆಂದು ಬಗೆದ ಗ್ರಾಮೀಣ ಮಂದಿ ನಗರಗಳಿಗೆ ಗುಳೆ ಬಂದರೆ, ಅದನ್ನು ನಿಭಾಯಿಸುವ ಮೂಲಸೌಕರ್ಯವ್ಯವಸ್ಥೆ ಸೃಷ್ಟಿಸಲು ಸಾಧ್ಯವೇ ಇಲ್ಲ. ನೀರು, ಸೂರು, ರಸ್ತೆ, ವಿದ್ಯುತ್, ಇಂಧನ ಜೊತೆಗೆ ಕಾನೂನು ಸುವ್ಯವಸ್ಥೆಯ ಆಯಾಮಗಳನ್ನು ನೆನೆಸಿಕೊಂಡರೆ ನಮ್ಮ ಗ್ರಾಮಗಳನ್ನೂ ಅದಕ್ಕೆ ಆಧಾರವಾಗಿರುವ ಕೃಷಿಯನ್ನೂ ಉಳಿಸುವುದು ಸರ್ಕಾರಕ್ಕೂ ಅನಿವಾರ್ಯ. ಔದಾರ್ಯದ ಕಾರಣಕ್ಕಾಗಿ ಅಲ್ಲ; ತನ್ನ ಅಸ್ತಿತ್ವದ ಉಳಿವಿಗಾಗಿಯೇ ಪ್ರಭುತ್ವ ಇದನ್ನು ಮಾಡಲೇಬೇಕಾಗಿ ಬರುತ್ತದೆ.

ಇದಕ್ಕೆ ಅವಶ್ಯವಾದ ತಿದ್ದುಪಡಿ ಮತ್ತು ಆವಿಷ್ಕಾರಗಳ ಜೋಡಿ ನಡಿಗೆ ಅಸಾಧ್ಯವೇನಲ್ಲ.. ಒಂದೆರಡು ಉದಾಹರಣೆ ನೀಡುವುದಾದರೆ, ನಮ್ಮಲ್ಲಿ ಬಲು ಮುಗ್ಧವಾಗಿ ಬಳಕೆಯಾಗುತ್ತಿದ್ದ ಎಂಡೋಸಲ್ಫಾನ್‌ನ ದುಷ್ಪರಿಣಾಮಗಳು ಸ್ಫೋಟಗೊಂಡ ಬಳಿಕ ಇಂದು ಅದನ್ನು ನಿಷೇದಿಸಬೇಕಾದ ಒತ್ತಡದಲ್ಲಿ ಸರ್ಕಾರವಿದೆ. ಪರಿಸರ ಸಂಬಂಧೀ ಮಾಲಿನ್ಯದ ಬಗ್ಗೆ ಸರ್ಕಾರ ತೆಪ್ಪಗೆ ಕೂರಲು ಸಾಧ್ಯೇ ಇಲ್ಲ. ಸಾಮುದಾಯಿಕ ಒತ್ತಡ ಅಷ್ಟು ತೀವ್ರವಾಗಿದೆ.

ಅದೇ ರೀತಿ ಹೊಸ ಆವಿಷ್ಕಾರಗಳು ನಂಜೇರಿದ ನಮ್ಮ ನೆಲವನ್ನು ತಿದ್ದಿ ಸುಸ್ಥಿರ ಕೃಷಿಗೆ ಸಹಾಯ ಮಾಡುತ್ತವೆಂದಾದರೆ, ಸರ್ಕಾರ ಅದನ್ನು ಅನುಷ್ಠಾನಗೊಳಿಸಬೇಕಾದ ದಿನ ಬಂದೇ ಬರುತ್ತದೆ. ಸಾವಯವ ಕೃಷಿ, ಬಯೋ-ಡೈಜೆಸ್ಟರ್, ನಾಟಿ ತಳಿ ಬೀಜ ಇವನ್ನೆಲ್ಲಾ ಗಂಭೀರವಾಗಿ ವಿಸ್ತೃತ ಯೋಜನಾ ಚಿಂತನೆಯ, ಅನುಷ್ಠಾನದ ಭಾಗವಾಗಿ ಪ್ರಭುತ್ವ ಪರಿಗಣಿಸಲೇಬೇಕಾಗುತ್ತದೆ. ಸ್ಥಳೀಯ ಸ್ಥಿತಿಯೂ ವಿಷಮಗೊಂಡು, ಜಾಗತಿಕವಾಗಿಯೂ ಇದಕ್ಕೆ ಪೂರಕ ಒತ್ತಡವಿದ್ದರೆ ಪ್ರಭುತ್ವಕ್ಕೆ ಇದು ಅನಿವಾರ್ಯ.

ಇನ್ನೊಂದೆಡೆ ಡ್ರಗ್ ಅಡಿಕ್ಟ್ ಗಳಂತೆ ವರ್ತಿಸುತ್ತಿರುವ ರೈತ ಸಮೂಹ ಸ್ಥಳೀಯ ಮಾದರಿಗಳ ಸುಸ್ಥಿರತೆಯನ್ನು ಮನಗಾಣುವಂತೆ ಮಾಡುವ ಜವಾಬ್ದಾರಿಯೂ ನಮಗಿದೆ. ಇದು ಸುಲಭವಲ್ಲ ಎಂಬ ಅರಿವೂ ನನಗಿದೆ. ಸ್ವಾತಂತ್ರ್ಯ ಸಂಗ್ರಾಮದ ಉದಾಹರಣೆ ಇಲ್ಲೂ ಕೆಲಸ ಮಾಡೀತು.

ನಾನು ಪದೇ ಪದೇ ಕೊಡುವ ಉದಾಹರಣೆಯೊಂದಿದೆ. ಕರ್ನಾಟಕದಲ್ಲೇ ಕಳೆದೊಂದು ದಶಕದಲ್ಲಿ ಏನಿಲ್ಲವೆಂದರೂ ೫೦೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಒಬ್ಬನೇ ಒಬ್ಬ ಸಾವಯವ ಕೃಷಿಕ ಆತ್ಮ ಹತ್ಯೆ ಮಾಡಿಕೊಂಡಿಲ್ಲ..!! ನೀವು ಸಾವಯವ ಕೃಷಿ ಮಾಡುತ್ತಿರುವ ರೈತನನ್ನು ಮಾತಾಡಿಸಿದರೆ, ಅವನ ಆತ್ಮ ಸ್ಥೈರ್ಯ ಮತ್ತು ವಿಚಿತ್ರ ಜಂಬ ನಿಮ್ಮನ್ನು ಕಸಿವಿಸಿಗೊಳಿಸುವುದು ಖಚಿತ..!! ಈ ಪರ್ಯಾಯ ದಾರಿ ಆರ್ಥಿಕ ಬದಲಾವಣೆಗಿಂತ ಮಾನಸಿಕ ದೃಢತೆಯನ್ನು ನೀಡಿರುವುದು ಗಮನಿಸಬೇಕು.

ಈ ಮಾನಸಿಕ ಸ್ಥಿತ್ಯಂತರ ಈ ದುಷ್ಕಾಲದಲ್ಲಿ ಅಸಹಜ ಅನ್ನಿಸಿದರೆ, ಅದು ನಮ್ಮ ಬೌದ್ಧಿಕ ಸ್ಥೈರ್ಯದ ಅಭಾವವನ್ನಷ್ಟೇ ಢಾಳಾಗಿ ತೋರಿಸುತ್ತದೆ.

* * *

ಗಣರಾಜ್ಯೋಪಾಖ್ಯಾನ

– *ಎಸ್.ಜಿ.ಸೀತಾರಾಮ್*

"ಹಿರಿದಾದ ಗಣ" ಎಂಬುದಕ್ಕೆ "ಹೆಗ್ಗಣ" ಎಂಬ ಸಮಾಸವು ಸೂಕ್ತವಾಗುವುದಾದಲ್ಲಿ, ೬೩ ವರ್ಷಗಳು ವೃದ್ಧವಾದ ನಮ್ಮ ಗಣರಾಜ್ಯವನ್ನಿಂದು ನಾವು ಧಾರಾಳವಾಗಿ "ಹೆಗ್ಗಣರಾಜ್ಯ" ಎಂದೆನ್ನಬಹುದು! ಆದರೆ, ವ್ಯಾಕರಣವೇನೇ ಹೇಳಲಿ, ಇದು ಹೆಗ್ಗಣರಾಜ್ಯವೇ ಎಂದು ಸಾಮಾನ್ಯವಾದ ಇನ್ನೊಂದರ್ಥದಲ್ಲಿ ಘೋಷಿಸಲು, ನಮ್ಮ "ಗಣಪತಿ"ಗಳು ಕಳೆದ ಆರು ದಶಕಗಳಲ್ಲಿ ಆಸೇತುಹಿಮಾಚಲ ಕೊರೆದು ಹೋಗಿರುವ ಬಿಲಗಳೇ ನಮಗೆ ಸಾಕು. ಹೆಗ್ಗಣಗಳಿಗೆ ಚೀಸ್ (ಗಿಣ್ಣು) ಎಂದರೆ ಪಂಚಪ್ರಾಣ, ಮತ್ತು ಸ್ವಿಜ಼್‌ನಾಡು ಚೀಸ್‌ಗೆ ಜಗತ್ಪ್ರಸಿದ್ಧ; ಹೀಗಾಗಿ, ನಮ್ಮ ಹೆಗ್ಗಣಪತಿಗಳಿಗೆ ಸ್ವಿಜ಼್‌ನಾಡಿನ, ಸ್ವಿಜ಼್‌ನಿಧಿಯ ಸೆಳೆತವಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಬ್ರಿಟಿಷರು, ಮೊಘಲರು, ಮಂಗೋಲರು, ಹೂಣರು, ಅಥವಾ ವಿದೇಶೀಯರ್ಯಾರೂ ಶತಮಾನಾಂತರಗಳಲ್ಲೂ ದೋಚದಿದ್ದಷ್ಟು, ಭಾರತದ ಸಾರಾಸಗಟು ಉತ್ಪನ್ನವನ್ನೇ ಅಣಕಿಸುವಷ್ಟು, ಸಂಪತ್ತನ್ನು ನಮ್ಮವರೇ ಆದ ಬಿಲತೋಡಮಲ್ಲರು ಅರುವತ್ತೇ ವರ್ಷಗಳಲ್ಲಿ ಗುಳುಂ ಮಾಡಿ, ಜಗತ್ತಿಗೇ ನಮ್ಮ ಪುಣ್ಯಭೂಮಿಯ 'ಹೆಗ್ಗಳಿಕೆ'ಯನ್ನು ಸಾರಿರುವುದು ಮಾತ್ರ ಒಂದು ಅದ್ಭುತವೇ ಸರಿ! ಇಷ್ಟೇ ಸಾಲದೆಂಬಂತೆ, ಈ ಭ್ರಷ್ಟಾರ್ಥಸಾಧಕರಲ್ಲಿ ಅನೇಕರು ಹೊನ್ನಿನಿಂದಾಚೆ ಮಣ್ಣಿಗೂ ಕಣ್ಣುಹಾಕಿ, ಇಡೀ ಭರತಭೂಮಿಯೇ ತಮ್ಮದು ಎಂಬ ಉತ್ಕಟ ತಾಯ್ನೆಲದೊಲವಿನಿಂದ, ಭಾರಿ ಭೂಭಾಗಗಳನ್ನೇ ತಮ್ಮ ಕೋರೆದಂತಗಳ ಮೂಲಕ ಬಾಚಿಕೊಂಡಿದ್ದಾರೆ; ಮೂಷಿಕಾವತಾರದಿಂದ ವರಾಹಾವತಾರಕ್ಕೆ ಒಂದೇ ಜಿಗಿತದಲ್ಲಿ ವಿಕಸಿತರಾಗಿ, ತಮ್ಮ ಭೂದಾಹ ಯಜ್ಞದ ಫಲವನ್ನು ಚಪ್ಪರಿಸುತ್ತಾ, ಸಾರ್ವಭೌಮರಾಗಿ ಸ್ವೇಚ್ಛೆಯಿಂದ ಮೆರೆದಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಒಂದು ಮುಖ್ಯ ಸಂಗತಿಯೆಂದರೆ, ಈ ಕದಿನಾಯಕರ ಉದರವಾದದಲ್ಲೂ "ನಾನೂ ತಿಂಬೆ, ನೀನೂ ತಿಂಬು" ಎಂದು ಹಂಚಿತಿನ್ನುವ ಒಂದು ಉದಾರವಾದವಿದೆ; ಒಂದು ನವೀನ ಫುಡ್‌ಚೈನ್ ಧರ್ಮವಿದೆ. ಹೀಗಾಗಿ, ಇವರ ಕೊಳ್ಳೆಯ ಕೊಳಕಿನಲ್ಲಿ ಸಹಭೋಗಿಗಳಾಗಲು ಇಂದು ಹೆಚ್ಚೆಚ್ಚು ಜನಸಾಮಾನ್ಯರು ತಾವೂ ಸಣ್ಣಿಲಿ, ಸುಂಡಿಲಿ, ಚಿಟ್ಟಿಲಿಗಳಾಗಿ ರೂಪಾಂತರಗೊಂಡು, ಹೆಗ್ಣೇಶರಿಗೆ ಇಲಿತೇರುಗಳಾಗಲು, ಇಲಿಯೋಟದಲ್ಲಿ ಹೇಗಾದರೂ ಗೆಲ್ಲಲು, ಕೈಗೆ ತೊಡಕಿದವರನ್ನು ತಳ್ಳಿ ಮುಂದೋಡುತ್ತಿರುವುದು ಅತಿಶಯವೆಂದೇನೆನಿಸುವುದಿಲ್ಲ.

ಈ ಪರಿಯಲ್ಲಿ, "ಆಳುವವನಿಗೆ ಭೂಮಿ, ಅಳುವವನಿಗೆ ಭೂಮಿಯಡಿ ಆರಡಿ ಮಣ್ಣಷ್ಟೇ" ಎಂಬ ಜಾಣಜ್ಞಾನವು ಎಲ್ಲೆಡೆ ಮೂಡುತ್ತಾ ಬಂದು, ದಂಶಕ ಸಂತಾನಾಭಿವೃದ್ಧಿಯು ಈ ದೇಶದಲ್ಲೀಗ ಅತಿತ್ವರೆಯಿಂದ ನಡೆದಿದೆ; ಹೊಲಸು

ಹುಲುಸಾಗಿ ಹಾದಿಯುದ್ದಕ್ಕೂ ಹಬ್ಬುತ್ತಿದೆ; ಯಾವ ಚಿಕಿತ್ಸೆಗೂ ಬಗ್ಗದ. ವಿಲಕ್ಷಣ ಆರ್ಥಿಕ–ನೈತಿಕ ಪ್ಲೇಗೊಂದು ಸಲೀಸಾಗಿ ನಮ್ಮ ನಡುವೆ ಹರಡುತ್ತಿದೆ; ಜಿಳಿಕಾಲರ್ ಭಯೋತ್ಪಾದಕತೆಯು ಸದ್ದಿಲ್ಲದೆ ನಮ್ಮ ಹಿತ್ತಲಲ್ಲೇ ಹೆಡೆಯೆತ್ತುತ್ತ, ನಮ್ಮ ಪ್ರಜೆಗಳನ್ನೇ ಒತ್ತುವರಿ ಮಾಡುತ್ತಿದೆ.

ವಾಸ್ತವವಾಗಿ, ಕಾಳಹಣದ ವಿಧಿಯೊಡನೆ ನಮ್ಮ ವಿಲಾಸವು ಆ ಕಾಳರಾತ್ರಿಯೇ (ಆಗಸ್ಟ್ ೧೪/೧೫, ೧೯೪೭) ಶುರುವಾಯ್ತು. ಅಂದಿನಿಂದೀಚೆಗೆ ನಾವು ಹೇಸಿಗೆ ಹಣಕ್ಕೆ, ನೆರೆಹೊರೆಯವರ ನೆಲಕ್ಕೆ, ನಮ್ಮ ಬದ್ಧತೆಯನ್ನು (ಇದೊಂದು ವಿಧದ ಮಲ–ನೆಲಬದ್ಧತೆ; ಜೀರ್ಣವಾಗದಿರುವ ಕಪ್ಪುಕಾಸಿನಿಂದಾಗುವುದು ಇನ್ನೊಂದು ವಿಧದ ಮಲಬದ್ಧತೆ), ಜೊತೆಗೆ ನಮ್ಮ ಸ್ವಾಹಾಭಿಮಾನವನ್ನು, ದಾಹಶೂರತ್ವವನ್ನು, ಧರಣಿಯೇ ದಂಗುಬಡಿವಂತೆ ಪ್ರದರ್ಶಿಸಿದ್ದೇವೆ. ನಮ್ಮ ಈ "ಸಾರೇ ಜಹ್ಞಾ ಸೇ ಅಚ್ಚಾ"ಎನ್ನಲ್ಪಡುವ ಸಿಂಧೂದೇಶದ ಅಗಣಿತ ಗಣಿಗುಣಗಳನ್ನು, ಬಿಲಹರಿ ಮತ್ತು ತೋಡಿ ರಾಗವೈಭವಗಳಲ್ಲಿ ವಿಶ್ವವೇದಿಕೆಯಲ್ಲಿಯೇ ಹಾಡಿಮಿಂಚಿದ್ದೇವೆ. ಆದರೆ, ಈ ತಮಾಷೆಯಿನ್ನು ಸಾಕು. ದುಷ್ಟರ ಈ ಮಜಾಪ್ರಭುತ್ವವನ್ನು ಹಾಗೂ ಶಿಷ್ಟರ ಪಾಲಿಗಾಗಿರುವ ಈ 'ಗಾಣ'ರಾಜ್ಯವನ್ನು, ಈ 'ಕದಿ'ಯುಗವನ್ನು, ನಾವೀಗಲಾದರೂ ಕೊನೆಗೊಳಿಸಲೇಬೇಕು. ಹೆಗ್ಗಣಕ್ಕೆ ಮುದ್ದು ನಿಲ್ಲಿಸಿ, ಮದ್ದು ಹುಡುಕಬೇಕು. ಇಲ್ಲದಿದ್ದಲ್ಲಿ, ಈ ದ್ವಿಪಾದ–ಮೂಷಿಕಸಂತತಿಯ ("ಮೂಷಿಕ" ಎಂಬುದರ ಧಾತು "ಮೂಷ್" ಎಂದರೆ, "ಕದಿ, ದೋಚು, ಲೂಟಿಹೊಡೆ" ಎಂದಾಗುತ್ತದೆ) ಹೆಚ್ಚಳದಿಂದಾಗಿ, ದವಸ–ಧಾನ್ಯದ ದಾಸ್ತಾನುಗಳಿರಲಿ, ನಮ್ಮ ಕಾಲ್ಕೆಳಗಿನ ನೆಲವೇ ಒಂದು ವಿಷಗಳಿಗೆಯಲ್ಲಿ ಮಂಗಮಾಯವಾಗಿ, ನಾವೆಲ್ಲರೂ ತ್ರಿಶಂಕು ನರಕವೊಂದರಲ್ಲಿ ದಿಢೀರೆಂದು ಬೀಳಬೇಕಾಗಬಹುದು. ಗಣನಾಯಕ ಮಾಫಿಯಾದ ಪಾಪಕೋಟಿ ಡಾಲರ್‌ಗಳ ಮುಂದೆ ಇನ್ನಷ್ಟು ಸೊನ್ನೆಗಳು ಬಂದುಸೇರುತ್ತಿದ್ದಂತೆ, ಇನ್ನಷ್ಟು ಕೋಟಿ ಸಾಧುಜನರ ಆಸ್ತಿ ಅಥವಾ ಅಸ್ತಿತ್ವವೇ ಸೊನ್ನೆಯಾಗಬಹುದು; ಕಟ್ಟಕಡೆಗೆ ನಮ್ಮ ಸ್ವಾತಂತ್ರ್ಯ ಮತ್ತು ಗಣತಂತ್ರ ಎಂಬ ಎರಡೂ ಪದಗಳಲ್ಲಿರುವ ಸೊನ್ನೆ ಮಾತ್ರ ಜಗಕೆಲ್ಲ ಹೊಡೆದು ಕಾಣುವಂತಾಗಬಹುದು.

ಆದ್ದರಿಂದ, ಎಲ್ಲಕ್ಕಿಂತ ಮುಂಚೆ ಈ ಇಲಿ–ಮಾರಿಗೆ ಇಲಾಜು ನೀಡುವ ಸಮರ್ಥ ಕಿಂದರಿಜೋಗಿಗಳನ್ನು ನಾವಿಂದು ನೇಮಿಸಬೇಕಿದೆ. ತದನಂತರ, ಅಳಿದುಳಿದ ಸನ್ನಾಗರಿಕರಿಂದಲೇ ನಮ್ಮ ಗಣರಾಜ್ಯವನ್ನು ಗುಣರಾಜ್ಯವನ್ನಾಗಿ, ಘನರಾಜ್ಯವನ್ನಾಗಿ ಮತ್ತೊಮ್ಮೆ ಕಟ್ಟುವ ಪ್ರಕ್ರಿಯೆಯನ್ನು ತಪ್ಪದೇ ಚೇತನಗೊಳಿಸಬೇಕಿದೆ. ನಾವೇ ಆಯ್ಕೆಮಾಡಿ ಆಳಿಸಿಕೊಳ್ಳುತ್ತಿರುವ ನಮ್ಮ 'ಪ್ರಜಾಪ್ರಭು'ಗಳ ವಿರುದ್ಧ ನಾವೇ ಒಂದು ವಿಕೃತ ಸ್ವಾತಂತ್ರ್ಯಸಂಗ್ರಾಮವನ್ನೀಗ ಹೂಡಬೇಕಿದೆ; ಕುತಂತ್ರ–ರಹಿತವಾದ ಗಣತಂತ್ರವೊಂದಕ್ಕಾಗಿ ರಣತಂತ್ರವೊಂದನ್ನು ಸಮರದೋಪಾದಿಯಲ್ಲಿ ರೂಪಿಸಬೇಕಿದೆ.

* * *

ಬಹುಮುಖಿ ಸಮಾಜ ಸೇವಕ – ಉಡುಪರು

– ಕೆ.ಆರ್.ಮೋಹನ್

ಮೂರು ದಶಕಗಳ ಕಾಲ ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಉಡುಪರವರು ದಿವಂಗತ ಶ್ರೀ ಟಿ.ಎ.ಪೈಯವರು ಸ್ಥಾಪಿಸಿದ ಭಾರತೀಯ ವಿಕಾಸ ಟ್ರಸ್ಟ್‌ನ ಆಡಳಿತ ಟ್ರಸ್ಟಿಯಾಗಿ ಕಳೆದ ೧೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇದೀಗ ತಮ್ಮ ೭೫ನೇ ವಯಸ್ಸಿನ ಹೊಸ್ತಿಲಿನಲ್ಲಿದ್ದಾರೆ. ಇಳಿಯ ವಯಸ್ಸಿನಲ್ಲಿಯೂ ಸೌರಶಕ್ತಿ ಮೂಲಕ ವಿದ್ಯುತ್ ಒದಗಿಸುವ ಕಾರ್ಯಕ್ರಮಗಳ ಮುಖೇನ ಜನಜಾಗೃತತಿಯನ್ನು ಮೂಡಿಸುತ್ತಿದ್ದಾರೆ. ದಿನಾಂಕ ೩-೧೧-೧೨ರಂದು ಶ್ರೀ ಉಡುಪರವರ ೭೫ನೇ ವರ್ಷದ ಜನ್ಮದಿನೋತ್ಸವವನ್ನು ಉಡುಪಿಯ ಎಂ.ಜಿ.ಎಂ ಕಾಲೇಜಿನ ರವೀಂದ್ರ ಮಂಟಪದಲ್ಲಿ ಕಾರ್ಯಾಗಾರ ಮತ್ತು ಅಭಿನಂದನಾ ಸಭೆಯನ್ನು ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ವೀರೇಂದ್ರ ಹೆಗ್ಗಡೆಯವರು ವಹಿಸಿದ್ದರು. ಉಡುಪರ ಅಸಂಖ್ಯಾತ ಅಭಿಮಾನಿಗಳು, ಸ್ನೇಹಿತರು ಮತ್ತು ಕುಟುಂಬ ವರ್ಗದವರು ಬಹಳ ಉತ್ಸಾಹದಿಂದ ಭಾಗಿಯಾಗಿದ್ದರು. ಈ ಗ್ರಂಥದಲ್ಲಿ ೪೦ ಕನ್ನಡ ಮತ್ತು ೯ ಇಂಗ್ಲಿಷ್ ಲೇಖನಗಳಿವೆ. ಈ ಲೇಖನಗಳು ಉಡುಪರ ಬಹುಮುಖ ಪ್ರತಿಭೆಯ ಮಜಲುಗಳನ್ನು ತೋರಿಸುತ್ತವೆ. ವೀರೇಂದ್ರ ಹೆಗ್ಗಡೆಯವರ ಸುದೀರ್ಘ ಸಂದೇಶ ಮತ್ತು ಮಹಾಬಲ ಎಂ.ಕಲ್ಮಡ್ಕ ಅವರ ೩೪ ಪುಟಗಳ ವಿಸ್ತಾರ ಸಂದರ್ಶನ ಉಡುಪರ ವೃತ್ತಿ, ಪ್ರವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ಕಂಡ ಯಶಸ್ಸನ್ನು ಅನಾವರಣಗೊಳಿಸುತ್ತದೆ. ಅಂದವಾದ ಮುದ್ರಣ, ಸುಂದರ ಮುಖಪುಟ ಮತ್ತು ಇತರೆ ವಿನ್ಯಾಸಗಳಿಂದ ಗ್ರಂಥ ಬಹಳ ಆಕರ್ಷಕವಾಗಿದೆ. ದೇಶದ ಹಿತಾಸಕ್ತಿ ಬಗ್ಗೆ ಕಾಳಜಿ ಇದ್ದವರು ಓದಲೇ ಬೇಕಾದ ಗ್ರಂಥ. ಡಾ॥ಮಹಾಬಲೇಶ್ವರರಾವ್ ಗ್ರಂಥ ಸಂಪಾದನೆಯನ್ನು ಚೆನ್ನಾಗಿ ಮಾಡಿದ್ದಾರೆ. ಆಸಕ್ತರು ಈ ಕೆಳಕಂಡ ವಿಳಾಸಕ್ಕೆ ಪತ್ರ ಬರೆದು ಗ್ರಂಥವನ್ನು ಉಚಿತವಾಗಿ ಪಡೆಯಬಹುದು.

ವಿಳಾಸ:-

ಡಾ॥ಎಲ್.ಎಚ್.ಮಂಜುನಾಥ
ಅಧ್ಯಕ್ಷರು,
ಕೆ.ಎಂ.ಉಡುಪ-೭೫ ಅಭಿನಂದನಾ ಸಮಿತಿ (ಧರ್ಮಸ್ಥಳ-ಉಡುಪಿ)
'ಸಪ್ತಸ್ವರ' ರಥಬೀದಿ
ಉಜಿರೆ - ೫೭೪೨೪೦
ದಕ್ಷಿಣ ಕನ್ನಡ ಜಿಲ್ಲೆ

* * *

ಅವನತಿಯತ್ತ ಭಾರತದ ಕೃಷಿ

– *ಎಲ್.ಸಿ.ನಾಗರಾಜ್*

ಭಾರತದ ಕೃಷಿ ಮತ್ತು ಕೃಷಿ ಸಂಸ್ಕೃತಿಯ ಅವನತಿಗೆ ೪ ಪ್ರಮುಖ ಕಾರಣಗಳು ಎದ್ದು ಕಾಣುತ್ತವೆ.

೧. ಕೃಷಿ ಮತ್ತು ಕೃಷಿ ಆಧಾರಿತ ಕಸುಬು, ಕುಶಲತೆಗಳನ್ನು ಬಲ್ಲ ಶೇ. ೪೦ ರಷ್ಟು ಗ್ರಾಮೀಣ ಜನತೆ ೨೦೨೦ರ ವೇಳೆಗೆ ನಗರಮುಖಿಗಳಾಗಲಿದ್ದಾರೆ.

೨. ಅನ್ಯಯಯುತ, ಅವೈಜ್ಞಾನಿಕ ಮಾರುಕಟ್ಟೆ ವ್ಯವಸ್ಥೆ.

೩. ಕೇಂದ್ರೀಯ ಅಂತರ್ಜಲ ಇಲಾಖೆ ಪ್ರಕಟಿಸಿರುವ ಅಂಕಿ–ಅಂಶಗಳ ಪ್ರಕಾರ ಅಂತರ್ಜಲ ಮಟ್ಟ ೩೦೦ ರಿಂದ ೪೦೦ ಮೀಟರುಗಳಿಗೆ ಕುಸಿದಿದೆ; ಭಾರತದ ಬಹಳಷ್ಟು ಅಣೆಕಟ್ಟು ಮತ್ತು ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ.

೪. ೨೦೦೪ರಲ್ಲಿ ನಡೆದ ವಿಶ್ವಸಂಸ್ಥೆಯ ಭೂಮಿ ಬರಡಾಗುವಿಕೆ ತಡೆ ಅಧಿವೇಶನ (ಯುಎನ್‌ಸಿಸಿಡಿ)ದಲ್ಲಿ ಭಾರತ ಸರ್ಕಾರದ ಅಧಿಕಾರಿಗಳೇ ಒಪ್ಪಿಕೊಂಡಿರುವ ಪ್ರಕಾರ ಭಾರತದ ಶೇ.೪೦ರಷ್ಟು ಮಣ್ಣು ಬರಡಾಗಿದೆ.

ಮೊದಲಿನ ಎರಡು ಕಾರಣಗಳು ಚರ್ಚೆಯಾಗುತ್ತಿವೆ ಆದ್ದರಿಂದ ಮೂರು ಮತ್ತು ನಾಲ್ಕನೆಯ ಕಾರಣಗಳನ್ನು ಇಲ್ಲಿ ಚರ್ಚಿಸಬಹುದು. ಭೂಮಿ ಬರಡಾಗುವಿಕೆಯ ಪ್ರಮಾಣವನ್ನು ಗುರುತಿಸುವಾಗ ಭಾರತದ ಅಧಿಕಾರಿಗಳು ಒಣಬೇಸಾಯ ವಲಯಗಳನ್ನು ಮಾತ್ರ ಪರಿಗಣಿಸಿದ್ದಾರೆ. ಭಾರತದ ಶೆ.೬೦ರಷ್ಟು ದವಸ ಮತ್ತು ಕಾಳುಗಳು ಮಳೆ ಆಶ್ರಿತ ಪ್ರದೇಶದಲ್ಲಿ ಉತ್ಪತ್ತಿಯಾಗುತ್ತಿರುವುದರಿಂದ ಈ ಪರಿಗಣನೆ ತುಂಬ ಮುಖ್ಯ. ಆದರೆ ಅಣೆಕಟ್ಟೆಗಳ ನೀರಾವರಿ ಸೌಕರ್ಯವಿರುವ ಅಚ್ಚುಕಟ್ಟು ಪ್ರದೇಶಗಳಲ್ಲಿ ಕೂಡ ಭೂಮಿ ಬರಡಾಗುತ್ತಿದೆ. ಪಶ್ಚಿಮ ಬಂಗಾಳ ಅಚ್ಚುಕಟ್ಟು ಪ್ರದೇಶಗಳ ಮಣ್ಣಿನಲ್ಲಿ ಕ್ಯಾಡ್ಮಿಯಂ ಮತ್ತು ಸೀಸದಂತಹ ಭಾರ ಲೋಹಗಳು ಪತ್ತೆಯಾಗಿವೆ. ಪಂಜಾಬಿನ ಹಸಿರುಕ್ರಾಂತಿ ಪ್ರದೇಶದಲ್ಲಿ ಕ್ಯಾನ್ಸರ್ ಮತ್ತು ಪಾರ್ಕಿನ್‌ಸನ್ ಕಾಯಿಲೆಗಳು ವ್ಯಾಪಕ ಪ್ರಮಾಣದಲ್ಲಿ ಕಾಣಿಸಿಕೊಂಡಿವೆ. ಭಾರತ ಸರ್ಕಾರ ಪಂಜಾಬಿಗೆ ಒಂದು ವಿಶೇಷ ಸವಲತ್ತನ್ನ ಒದಗಿಸಿದೆ; ಪಂಜಾಬ್‌ನಿಂದ ಮುಂಬಯಿ ನಗರಕ್ಕೆ ವಶೇಷ ಕ್ಯಾನ್ಸರ್ ರೈಲು ಬಿಟ್ಟಿದೆ.

೨೦೦೮ರಲ್ಲಿ ಬಜೆಟ್ ಮಂಡಿಸುತ್ತಿದ್ದ ಆಗಿನ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಭಾರತದ ಕೃಷಿ ಮಣ್ಣಿನ ಬಗ್ಗೆ ಪ್ರಮುಖವಾದ ಮಾತುಗಳನ್ನು ಆಡುತ್ತಿದ್ದರು: ಭಾರತದ ಕೃಷಿ ಮಣ್ಣು ಪ್ರಧಾನ ರಾಸಾಯನಿಕ ಪೋಷಕಾಂಶಗಳಿಗೆ ಪ್ರತಿಕ್ರಿಯಿಸುತ್ತಿಲ್ಲ, ಆದ್ದರಿಂದ ಇನ್ನು ಮುಂದೆ ಲಘು ಪೋಷಕಾಂಶಗಳಿಗೆ ಸಬ್ಸಿಡಿ ಕೊಡಲಾಗುತ್ತದೆ. (ಲೋಕಸಭೆಯಲ್ಲಿ ಈ ಆಘಾತಕಾರಿ ಅಂಶಗಳು ಚರ್ಚೆಯಾಗುತ್ತಿದ್ದಾಗ ಭಾರತ ಸರ್ಕಾರದ ಸನ್ಮಾನ್ಯ, ಕೃಷಿ ಮಂತ್ರಿ ಕ್ರಿಕೆಟ್ ಪಿಚ್ಚಿನಲ್ಲಿ

ಶಿಳ್ಳೆ ಹೊಡೆಯುತ್ತಿದ್ದರಾ?) ಹೀಗಾಗಿ ಮೆಗ್ನೀಷಿಯಂ ಸಲ್ಫೇಟ್, ಸತುವಿನ ಸಲ್ಫೇಟ್ ಮತ್ತು ಬೋರಾಕ್ಸ್ ಲಘು ಪೋಷಕಾಂಶಗಳು ರಾಸಾಯನಿಕಗಳ ರೂಪದಲ್ಲಿ ಮಾರುಕಟ್ಟೆ ಪ್ರವೇಶಿಸಿದವು. ಆದರೆ ೧೯೬೦ರ ದಶಕದಲ್ಲಿ ರೈತರು ರಾಸಾಯನಿಕ ಪ್ರಧಾನ ಪೋಷಕಾಂಶಗಳನ್ನು ಹೇಗೆ ಸಂದೇಹದಿಂದ ಕಂಡರೋ ಅದೇ ರೀತಿ ಈಗ ರಾಸಾಯನಿಕ ಲಘು ಪೋಷಕಾಂಶಗಳನ್ನು ಅನ್ಯ ಪದಾರ್ಥವೆಂಬಂತೆ ಸಂದೇಹಿಸುತ್ತಿದ್ದಾರೆ. ಮಣ್ಣು ಯಾವುದೇ ಗೊಬ್ಬರಕ್ಕೆ ಪ್ರತಿಕ್ರಿಯಿಸಬೇಕೆಂದರೆ ಮಣ್ಣಿನ ಭೌತಿಕ ರಚನೆ ಸಮಪ್ರಮಾಣದಲ್ಲಿರಬೇಕು ಮತ್ತು ಈ ಭೌತಿಕ ರಚನೆಯೊಳಗೆ ಕಳಿಯುವ ಸಾವಯವ ಪದಾರ್ಥಗಳ ಸೂಕ್ಷ್ಮ ಹೆಣಿಗೆಯಿರಬೇಕು; ದ್ವಿದಳ ಸಸ್ಯಗಳು ಬೆಳವಣಿಗೆಯಾಗಬೇಕಾದರೆ ಮಣ್ಣಿನಲ್ಲಿ ಮಾಲಿಬ್ಡಿನಂ ಎಂಬ ಖನಿಜ ಪೋಷಕಾಂಶ ನೈಸರ್ಗಿಕವಾಗಿ ಉತ್ಪತ್ತಿಯಾಗಬೇಕು. ಮಣ್ಣು ತನ್ನ ಭೌತಿಕ ಸಂರಚನೆ ಮತ್ತು ಸಾವಯವ ಹೆಣಿಗೆಯನ್ನು ಕಳೆದುಕೊಂಡಿರುವುದರಿಂದ ಅನೇಕ ಲಘು ಪೋಷಕಾಂಶಗಳು ನೈಸರ್ಗಿಕವಾಗಿ ಉತ್ಪತ್ತಿಯಾಗುತ್ತಿಲ್ಲ. ಜೊತೆಗೆ ಅನೇಕ ದಶಕಗಳ ಕಾಲ ಮಣ್ಣಿಗೆ ಸುರಿದಿರುವ ರಾಸಾಯನಿಕ ಪ್ರಧಾನ ಪೋಷಕಾಂಶಗಳು ಲಘು ಪೋಷಕಾಂಶಗಳ ನಡುವೆ ಪರಸ್ಪರ ವಿರೋಧಗುಣವನ್ನ ಪ್ರಚೋದಿಸಿವೆ; ವಾಸ್ತವಿಕವಾಗಿ ಭಾರತದ ಕೃಷಿ ಮಣ್ಣಿನಲ್ಲಿ ತೀವ್ರ ಪ್ರಮಾಣದ ಕೃತಕ ದಾಹ ತಲೆದೋರಿದೆ. ಅದ್ದರಿಂದ ರೈತರ ಈ ಸಂದೇಹವನ್ನ ಮಣ್ಣಿನ ಫಲವಂತಿಕೆ ಕುರಿತ ವಿಜ್ಞಾನ ಮತ್ತು ಕೃಷಿಯ ಚಾರಿತ್ರಿಕ ಅಂಶಗಳ ಚರ್ಚೆಯ ಬೆಳಕಿನಲ್ಲಿ ಕಾಣುವುದು ಸೂಕ್ತ.

ಇದು ಆದದ್ದು ಹೀಗೆ : ೧೮೨೦ ಮತ್ತು ೧೮೪೦ರ ಅವಧಿಯಲ್ಲಿ ಯುರೋಪು ಮತ್ತು ಉತ್ತರ ಅಮೆರಿಕದ ಮಣ್ಣಿನಲ್ಲಿ ಕೂಡ ಇಂತಹದೇ ಕೃತಕ ದಾಹ ಉಂಟಾಗಿತ್ತು. ತನ್ನ ಮಣ್ಣಿನ ಫಲವಂತಿಕೆಯನ್ನು ಸುಧಾರಿಸಿಕೊಳ್ಳಲು ಬ್ರಿಟನ್ ೧೮೩೭ರ ವೇಳೆಯಲ್ಲಿ ಸುಮಾರು ೨೬,೦೦೦ ಪೌಂಡುಗಳಷ್ಟು ಮೂಳೆಗಳನ್ನು ಆಮದು ಮಾಡಿಕೊಳ್ಳುತ್ತಿತ್ತು; ಸಮುದ್ರ ಪಕ್ಷಿಗಳ ಹಿಕ್ಕೆಯನ್ನು ಹೊತ್ತ ಹಡಗು ೧೮೩೫ರಲ್ಲಿ ಬ್ರಿಟನ್ನಿನ ಲಿವರ್‌ಪೂಲ್ ಬಂದರಿಗೆ ಬಂದು ನಿಂತಿತು. ೧೮೪೧ರಲ್ಲಿ ಮತ್ತು ಬ್ರಿಟನ್ ೧೭೦೦ ಟನ್ ಮತ್ತು ೧೮೪೭ರಲ್ಲಿ ೨,೨೦,೦೦೦ ಟನ್‌ಗಳಷ್ಟು ಪಕ್ಷಿ ಹಿಕ್ಕೆಯನ್ನ ಪೆರು ದೇಶದ ಸಮುದ್ರ ತೀರಗಳಿಂದ ಆಮದು ಮಾಡಿಕೊಂಡಿತು; ಆದರೂ ಬ್ರಿಟನ್ನಿನ ಮಣ್ಣಿನ ಕೃತಕ ದಾಹ ಹಿಂಗಲಿಲ್ಲ. ಹತಾಶರಾದ ಬ್ರಿಟಿಷ್ ರೈತರು ಮೂಳೆಗಳನ್ನು ಆಯ್ದುಕೊಳ್ಳ ನೆಪೋಲಿಯನ್ನನ ವಾಟರ್ಲೂ ಯುದ್ಧ ಭೂಮಿಗೆ ಲಗ್ಗೆ ಹಾಕಿದರು. ಈ ಘಟನೆ ಚರಿತ್ರೆಯಲ್ಲಿ ಪ್ರಥಮವಾಗಿ ಆಧುನಿಕ ಕೃಷಿ ವಿಜ್ಞಾನ ಬೆಳವಣಿಗೆಗೆ ದಾರಿಮಾಡಿಕೊಟ್ಟಿತು. ೧೮೩೭ರಲ್ಲಿ ಬ್ರಿಟಿಷ್ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ ಸಂಸ್ಥೆ ಮಣ್ಣಿನ ಫಲವಂತಿಕೆ ಕುರಿತಂತೆ ಅಧ್ಯಯನ ಮಾಡುವ ಹೊಣೆಗಾರಿಕೆಯನ್ನು ರಸಾಯನಶಾಸ್ತ್ರಜ್ಞ ವಾನ್ ಜಸ್ಟಿಸ್ ಲೀಬಿಗ್ ಅವರಿಗೆ ವಹಿಸಿಕೊಟ್ಟಿತು. ಸಸ್ಯಗಳು ಆರೋಗ್ಯಕರವಾಗಿ ಬೆಳೆಯಲು ಅವಕ್ಕೆ ಯಾವ್ಯಾವ ಪೋಷಕಾಂಶಗಳು ಬೇಕೆಂಬುದನ್ನು ನಿರ್ಧರಿಸಲು, ಒಣಗಿದ ಸಸ್ಯವನ್ನು ಸುಟ್ಟು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ ಲೀಬಿಗ್ ಸಸ್ಯಗಳ ಬೆಳವಣಿಗೆಗೆ ನೈಟ್ರೋಜನ್, ಫಾಸ್ಫರಸ್ ಮತ್ತು ಪೊಟ್ಯಾಷ್ ಇವಿಷ್ಟು ಪೋಷಕಾಂಶಗಳು ಬೇಕು

ಎಂದು ಹೇಳಿದ. ಲೀಬಿಗ್‌ನ ರಾಸಾಯನಿಕ ವಿಚಾರಗಳಿಂದ ಪ್ರಭಾವಿತನಾದ ಶ್ರೀಮಂತ ರೈತ ಮತ್ತು ಕೃಷಿ ತಜ್ಞ ಜೆ.ಡಬ್ಲ್ಯೂ.ಲೇನ್ಸ್ ಸೂಪರ್ ಫಾಸ್ಫೇಟ್ ಕಾರ್ಖಾನೆ ಶುರುಮಾಡಿಕೊಂಡ. ಆದರೆ ಕೊಂಚ ನಿಯತ್ತಿನ ವಿಜ್ಞಾನಿಯಾಗಿದ್ದ ಲೀಬಿಗ್‌ಗೆ ತಾನು ಮಾಡಿರುವ ವಿಶ್ಲೇಷಣೆ ತಪ್ಪು ಎನಿಸತೊಡಗಿತ್ತು. ಮುಂದೊಂದು ದಿನ ಲಂಡನ್ನಿನ ರಾಯಲ್ ಸೈಂಟಿಫಿಕ್ ಸೊಸೈಟಿಯಲ್ಲಿ ಮಾತನಾಡುತ್ತ ಲೀಬಿಗ್ ತನ್ನ ತಪ್ಪೊಪ್ಪಿಕೊಳ್ಳುತ್ತಾ 'ನಾನು ತಪ್ಪು ಮಾಡಿದ್ದೇನೆ. ದೇವರ ಸೃಷ್ಟಿಯನ್ನು ಮೀರಿದ್ದೇನೆ' ಎಂದು ತನ್ನ ಮಣ್ಣು ಫಲವಂತಿಕೆ ತತ್ವದ ಬಗ್ಗೆ ಧಾರ್ಮಿಕ ನುಡಿಗಟ್ಟುಗಳ ಪ್ರಕಾರ ಪಶ್ಚಾತ್ತಾಪಪಟ್ಟ. ದೇವರು ರಥ ಬಿಟ್ಟು ಇಳಿದುಹೋದಮೇಲೆ ಅವರ ಭಕ್ತರು ರಥವನ್ನೇ ಲಪಟಾಯಿಸಿದರು ಎಂಬುದೊಂದು ಮಾತು ಪ್ರಚಲಿತದಲ್ಲಿದೆ; ವಿಜ್ಞಾನಿ ಲೀಬಿಗ್ ತಪ್ಪೊಪ್ಪಿಕೊಂಡ, ಆದರೆ ಆತನ ತಪ್ಪು ವಿಚಾರಗಳ ಆಧಾರದ ಮೇಲೆ ಕಟ್ಟಲಾಗಿದ್ದ ಸೂಪರ್ ಫಾಸ್ಫೇಟ್ ಕಾರ್ಖಾನೆಗಳು ಉತ್ಪಾದನೆ ನಿಲ್ಲಿಸಲಿಲ್ಲ. ಮುಂದಿನ ದಿನಗಳಲ್ಲಿ ಮಣ್ಣಿನ ಫಲವಂತಿಕೆ ವಿಚಾರದಲ್ಲಿ ರಾಸಾಯನಿಕ ವಿಜ್ಞಾನಿ ಲೀಬಿಗ್, ರಾಜಕೀಯ ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್, ರಿಕಾರ್ಡೊ ಮತ್ತು ಮಾಲ್ತೂಸ್ ಇವರುಗಳ ನಡುವೆ ವಾದ ವಿವಾದಗಳು ನಡೆದಿವೆ. ಮಾಲ್ತೂಸ್ ಈ ಬಿಕ್ಕಟ್ಟನ್ನ ಜನಸಂಖ್ಯಾ ಸ್ಫೋಟದ ಸಂದರ್ಭದಲ್ಲಿ ಕಂಡ. ಆದರೆ ಇದರ ಮೇಲೆ ಸೂಕ್ತ ವಿಶ್ಲೇಷಣೆ ಮಾಡಿದ್ದು ಕಾರ್ಲ್‌ಮಾರ್ಕ್ಸ್; ಮಾರ್ಕ್ಸ್ ಇದನ್ನು ಕೃಷಿ ಭೂಮಿ ಮತ್ತು ಬೆಳವಣಿಗೆಯಾಗುತ್ತಿದ್ದ ನಗರಗಳ ನಡುವಿನ ಪರಸ್ಪರ ವಿರೋಧಿ ಗುಣವಾಗಿ ಕಂಡರು; ಸರಳವಾಗಿ ಹೇಳಬೇಕೆಂದರೆ ಕೃಷಿ ಮಣ್ಣಿನಲ್ಲಿ ಒಂದು ಟನ್ ಆಹಾರ ಪದಾರ್ಥ ಉತ್ಪತ್ತಿಯಾದರೆ ಮಣ್ಣಿಗೆ ಅದೇ ಪ್ರಮಾಣದ ಪೋಷಕಾಂಶಗಳು ನಷ್ಟವಾಗಿರುತ್ತದೆ.

ಮುಂದೆ ಮಣ್ಣು ವಿಜ್ಞಾನದ ಬಗ್ಗೆ ಸಂಶೋಧನೆ ನಡೆಸಿದವರು ರಷ್ಯನ್ನರು, ಆದರೆ ಅವರ ಸಂಶೋಧನೆ ಮಣ್ಣನ್ನು ರೂಪಿಸಿರುವ ಮಾತೃ ಪದಾರ್ಥಗಳನ್ನು ಕುರಿತದ್ದು; ಅಂದರೆ ಮಣ್ಣಿನ ವಿಕಾಸಕ್ಕೆ ಕಾರಣವಾದ ಮಣ್ಣಿನ ತಳಭಾಗದ ಶಿಲಾಪದರಗಳ ಮೇಲೆ ರಷ್ಯನ್ನರು ಪ್ರಮುಖ ಸಂಶೋಧನೆ ನಡೆಸಿದರು. ರಷ್ಯಾದ ದೊಕೊಚೊವ್ ಮಣ್ಣು ವಿಜ್ಞಾನದ ಬಗ್ಗೆ 'ಪೆಡಾಲಜಿ' ಎಂಬ ಶಬ್ದವನ್ನೇ ಚಲಾವಣೆಗೆ ತಂದರು.

೧೯೩೦ರ ವೇಳೆಗೆ ಡಾ॥ ವಿಲಿಯಂ ಆಲ್‌ಬ್ರೆಕ್ಟ್ ಮೇಲ್ಮಣ್ಣಿನ ಬಗ್ಗೆ ತನ್ನ ಸಂಶೋಧನೆಯನ್ನು ಪ್ರಕಟಿಸುವ ತನಕ ಜಗತ್ತಿನ ಜೀವಕೋಟಿಯನ್ನು ಸಲಹುತ್ತಿರುವ ಮಣ್ಣಿನ ಬಗ್ಗೆ ಯಾವುದೇ ನಿಖರ ಮಾಹಿತಿಗಳಿರಲಿಲ್ಲ. ಈ ಹಿಂದೆ ತತ್ವಜ್ಞಾನಿ ಅರಿಸ್ಟಾಟಲ್ ಎರೆಹುಳುವನ್ನು ಭೂಮಿತಾಯಿಯ ಕರುಳು ಎಂದಿದ್ದ. ವಿಕಾಸವಾದಿ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಎರೆಹುಳುವನ್ನು 'ಕೆಳಸ್ತರದ ಜೀವಿಯ ಕಾಯಕ ವಿಕಾಸವಾದದ ಪ್ರಮುಖ ಕೊಂಡಿ' ಎಂದಿದ್ದ. ಹೀಗೆ ಎಲ್ಲವೂ ಬಿಡಿ ಬಿಡಿ ವಿಚಾರಗಳು. ಆದರೆ ಮಣ್ಣಿನ ಫಲವಂತಿಕೆ, ಮಣ್ಣಿನ ವಿವಿಧ ಜೀವಗಳಿಂದ ಜರುಗುವ ನೈಸರ್ಗಿಕ ಕ್ರಿಯೆ ಎಂದು ಗುರುತಿಸಿದ್ದು ಡಾ॥ ವಿಲಿಯಂ ಆಲಬ್ರೆಕ್ಟ್. ಸಂಕ್ಷಿಪ್ತವಾಗಿ ಆಲ್‌ಬ್ರೆಕ್ಟ್ ಹೇಳಿದ್ದು ಇಷ್ಟು: ಮಣ್ಣು ಒಂದು ಏಕರೂಪಿ (ಹೋಮೊಜಿನಿಸೆಡ್) ಕಚ್ಚಾ ಸಾಮಾಗ್ರಿಯಲ್ಲ, ಅನೇಕ ಜೀವಿಗಳು ನಿರಂತರವಾಗಿ ದುಡಿಯುವ ಮತ್ತು

ತಿನ್ನುವ ಜೀವಮಂಡಲ, ಮಣ್ಣು ವಿವಿಧ ಜೀವಿಗಳ ಆಹಾರ ವರ್ತುಲ. ಅಂದರೆ ನಾವು ಗೊಬ್ಬರ ಹಾಕಬೇಕಿರುವುದು ಗಿಡಗಳಿಗಲ್ಲ ಮಣ್ಣಿನಲ್ಲಿರುವ ಜೀವಿಗಳ ಆಹಾರ ವರ್ತುಲಕ್ಕೆ.

ಆಲ್‌ಬ್ರಕ್ಟ್‌ನ ಈ ಮಣ್ಣು ಫಲವಂತಿಕೆ ತಾತ್ವಿಕತೆ ಹೊರಬಿದ್ದದ್ದು ೧೯೬೦ರ ವೇಳೆಗೆ, ಆದರೆ ೧೯೬೦-೬೫ರ ವೇಳೆಗಾಗಲೇ ಭಾರತದ ಕೃಷಿ ವಿಸ್ತರಣಾ ನಿರ್ದೇಶನಾಲಯಗಳ ಮೂಲಕ ಮತ್ತು ಆಕಾಶವಾಣಿಯ ಮೂಲಕ ಪುಂಗಿ ಊದತೊಡಗಿದ್ದರು. ಭಾರತದ ಕೃಷಿ ವಿಜ್ಞಾನಿಗಳು ಊದಿದ ಪುಂಗಿಯಲ್ಲಿ ಬಂದದ್ದು ಲೀಬಿಗ್‌ನ ಪ್ರಧಾನ ಪೋಷಕಾಂಶ ವಿಚಾರ. ಆದರೆ ಮಣ್ಣು ಒಂದು ಜೀವಮಂಡಲ ಎಂಬ ಆಲ್‌ಬ್ರೆಕ್ಟ್‌ನ ಕೊಳು ನಾದವಲ್ಲ. 'ತನ್ನ ಸಂಶೋಧನೆ ತಪ್ಪು ನಾನು ದೇವರ ಸೃಷ್ಟಿಯನ್ನ ಮೀರಿದ್ದೇನೆ ಎಂದು ಲಂಡನ್ನಿನ್ನ ರಾಯಲ್ ಸೈಂಟಿಫಿಕ್ ಸೊಸೈಟಿ ಮುಂದೆ ಲೀಬಿಗ್ ತಪ್ಪೊಪ್ಪಿಕೊಂಡಿದ್ದನೋ ಅದೇ ವಿಚಾರಕ್ಕೆ ಭಾರತದ ಕೃಷಿ ವಿಜ್ಞಾನಿಗಳು ಗಂಟುಬಿದ್ದಿದ್ದರು; ಈ ಮಹಾಶಯರು ಆಲ್‌ಬ್ರೆಕ್ಟ್‌ನ ಮಣ್ಣು ಫಲವಂತಿಕೆ ವಿಚಾರಗಳ ಥೀಸಿಸ್ಸನ್ನು ಮುಟ್ಟಿನೋಡುವ ಗೋಜಿಗೆ ಕೂಡ ಹೋಗಿಲ್ಲ.

ದೇವರು ರಥ ಬಿಟ್ಟು ಇಳಿದು ಹೋದ ಮೇಲೆ ಭಕ್ತರ ಗ್ಯಾಂಗು ರಥವನ್ನೇ ಲಪಟಾಯಿಸಿತು ಅಂದಿದ್ದೆನಲ್ಲಾ - ಆ ಮಾತು ಭಾರತದ ಕೃಷಿ ವಿಜ್ಞಾನಿಗಳಿಗೆ ಬಲು ಚೆನ್ನಾಗಿ ಒಪ್ಪುತ್ತದೆ. ಮಣ್ಣಿಗೆ ಪ್ರಧಾನ ರಾಸಾಯನಿಕ ಪೋಷಕಾಂಶಗಳನ್ನು ಸುರಿದು ಫಸಲು ಬೆಳೆದುಕೊಳ್ಳುವ ಮಾದರಿ ರಸಾಯನಶಾಸ್ತ್ರಜ್ಞ ಲೀಬಿಗ್‌ನ ಸಂಶೋಧನೆ; ಅದು ಮಣ್ಣನ್ನು ಒಂದು ಏಕರೂಪಿ ಕಚ್ಚಾ ಸಾಮಗ್ರಿ ಎಂದು ಹೀಗೆಳೆದಿದೆ, ಆದರೆ ನಿಯತ್ತಿನ ವಿಜ್ಞಾನಿ ಲೀಬಿಗ್ ತಾನು ಮಾಡಿದ ತಪ್ಪನ್ನ ಒಪ್ಪಿಕೊಂಡಿದ್ದಾನೆ. ಆದರೆ ಭಾರತೀಯ ಕೃಷಿ ವಿಜ್ಞಾನಿಗಳು ಪಧಾನ ರಾಸಾಯನಿಕ ಪೋಷಕಾಂಶಗಳ ಬಳಕೆಯನ್ನು ಭಾರತದಲ್ಲಿ ಪ್ರಚುರಪಡಿಸಲು ಪ್ರಾರಂಭಿಸಿದ ವೇಳೆಗಾಗಲೇ ಆಲ್‌ಬ್ರೆಕ್ಟರ ಮಣ್ಣು ವಿಜ್ಞಾನದ ಥೀಸಿಸ್ಸು ಚರ್ಚೆಯಾಗುತ್ತಿತ್ತು. ಭಾರತದ ವಿಜ್ಞಾನಿಗಳು ಯಾಕೆ ಅದನ್ನು ಗಮನಿಸಲಿಲ್ಲ? ಎರಡನೆಯ ಮಹಾಯುದ್ಧ ಮುಗಿದಿತ್ತು, ಬಂಗಾಳದ ಭೀಕರ ಕ್ಷಾಮ ಭಾರತವನ್ನು ಕಂಗೆಡಿಸಿತ್ತು. ಅಹಾರ ಉತ್ಪಾದನೆಗೆ ಒತ್ತುಕೊಡಬೇಕಾಗಿತ್ತು ನಿಜ, ಆದರೆ ನಮ್ಮ ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ನರ ಈ ಮಾತು ಮಾಲ್ತೂಸಿಯನ್‌ನ ಜನಸಂಖ್ಯಾ ಸ್ಫೋಟದ ವಿಚಾರಗಳಿಂದ ಪ್ರಭಾವಿತವಾಗಿರುವಂತಿದೆ. ಮಣ್ಣಿನ ಫಲವಂತಿಕೆ ವಿಚಾರದಲ್ಲಿ ಮತ್ತೊಂದು ಪ್ರಮುಖ ಅಂಶವನ್ನಿಲ್ಲಿ ಕಾಣಿಸಬೇಕು. ಮಣ್ಣಿನಲ್ಲಿ ಯಾವುದೇ ಫಸಲು ಬೆಳವಣಿಗೆಯಾಗಿ, ಅರೋಗ್ಯಕರವಾಗಿ ಹೂಬಿಟ್ಟು ಫಲಕಚ್ಚಿ ನಿಲ್ಲಬೇಕೆಂದರೆ ಮಣ್ಣಿನಲ್ಲಿ ೨೧ಕ್ಕಿಂತ ಹೆಚ್ಚು ಪೋಷಕಾಂಶಗಳು ಬೇಕು. ಇವುಗಳ ಪೈಕಿ ಲೀಬಿಗ್ ಗುರುತಿಸಿದ್ದು ಮೂರು ಪ್ರಧಾನ ಪೋಷಕಾಂಶಗಳನ್ನು ಮಾತ್ರ. ಉಳಿದ ೪ ಮಾಧ್ಯಮಿಕ ಪೋಷಕಾಂಶಗಳು ಮತ್ತು ಇತರೆ ಖನಿಜ ಪೋಷಕಾಂಶಗಳು, ಧಾತುಗಳು ಲೀಬಿಗ್‌ನ ಸಂಶೋಧನೆಗೆ ದಕ್ಕಿರಲಿಲ್ಲ. ಮಣ್ಣು ವಿಜ್ಞಾನದ ಅಚ್ಚರಿಯ ಅಂಶಗಳೆಂದರೆ: ಸಸ್ಯಗಳು ಬೆಳೆಯಲು ಯಾವ್ಯಾವ ಪೋಷಕಾಂಶಗಳ ಅಗತ್ಯವಿದೆಯೋ ಆ ಎಲ್ಲ ಪೋಷಕಾಂಶಗಳು ಮಾನವ ಶರೀರಕ್ಕೂ ಅಗತ್ಯವಿದೆ. ಭಾರತ ಸರ್ಕಾರ ಪಂಜಾಬ್‌ನಿಂದ ಮುಂಬಯಿಗೆ ವಿಶೇಷ ಕ್ಯಾನ್ಸರ್ ರೈಲು ಬಿಡುತ್ತಿದೆ ಯಾಕೆಂದರೆ

ಫಸಲನ್ನು ಸಲಹುವ, ಈ ಮೂಲಕ ಮಾನವ ಶರೀರವನ್ನು ಸದೃಢಗೊಳಿಸುವ ಯಾವ ಪೋಷಕಾಂಶಗಳಾಗಲೀ, ವಿವಿಧ ಬಗೆಯ ಧಾತುಗಳಾಗಲೀ ಪಂಜಾಬಿನ ಮಣ್ಣಿನಲ್ಲಿ ಉಳಿದಿಲ್ಲ. ಭಾರತದ ಶೇ.೪೦ರಷ್ಟು ಮಳೆ ಆಶ್ರಿತ ಭೂಮಿ ಬರಡಾಗಲು, ಅಚ್ಚುಕಟ್ಟು ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಕ್ಷಾರೀಯತೆಗಳಿಗೂ ಇದೇ ಪ್ರಮುಖ ಕಾರಣ.

ಕೃಷಿಗೆ ಸಂಬಂಧಿಸಿದ ಒಂದು ಪ್ರಮುಖ ಆಚರಣೆಯನ್ನು ಕನ್ನಡ ಲೇಖಕರಾದ ಡಾ॥ಚಂದ್ರಶೇಖರ ಕಂಬಾರರು ದಾಖಲಿಸಿದ್ದಾರೆ. ಅದು ಕೊಂತಿ ಪೂಜೆ. ಕೊಂತಿ ಪೂಜೆ ಹ್ಯಾಗೆ ಸಾಂಸ್ಕೃತಿಕವೋ ಹಾಗೇ ಅನೇಕ ಆಯಾಮಗಳನ್ನ ಕಾಣಿಸುತ್ತದೆ. ಹಳೆ ಮೈಸೂರು ಪ್ರಾಂತದಲ್ಲಿ ದ್ವಿದಳ ಧಾನ್ಯಗಳು, ದವಸ, ಎಣ್ಣೆ ಬೀಜಗಳು ಮತ್ತು ಜಾನುವಾರು ಮೇವುಗಳನ್ನ ಮಿಶ್ರ ಬೆಳೆಯಾಗಿ ಬೆಳೆಯುವ ಅಕ್ಕಡಿಸಾಲು ಪದ್ಧತಿ ಪಾರಂಪರಿಕವಾಗಿ ಅಸ್ತಿತ್ವದಲ್ಲಿತ್ತು: ಸರಿಸುಮಾರು ಇದೇ ಪದ್ಧತಿ ಉತ್ತರ ಕರ್ನಾಟಕ ಪ್ರದೇಶಗಳಲ್ಲೂ ಕಾಣಸಿಗುತ್ತದೆ. ಅಕ್ಕಡಿಸಾಲು ಪದ್ಧತಿಯಲ್ಲಿ ಬಿತ್ತನೆಯಾಗುವ ತೊಗರಿ, ಅವರೆ, ಹಲಸಂದೆ ಸಸ್ಯಗಳು ವಾತಾವರಣದಲ್ಲಿ ಹೇರಳವಾಗಿ ಸಿಗುವ ಅಮೋನಿಯಂ ಅನಿಲವನ್ನು ಹೀರಿಕೊಂಡು ಅದನ್ನು ಸಾರಜನಕವಾಗಿ ಪರಿವರ್ತಿಸುತ್ತವೆ; ಇವುಗಳ ಸಂಗಾಗಿ ಸಸ್ಯಗಳಾಗಿ ಬೆಳೆಯುತ್ತಿರುವ ರಾಗಿ ಮತ್ತು ಜೋಳಗಳಿಗೆ ವಿಪರೀತ ಪ್ರಮಾಣದ ಸಾರಜನಕದ ಅವಶ್ಯಕತೆಯಿದೆ. ಯಾವ ಕೃಷಿ ವಿಶ್ವವಿದ್ಯಾಲಯವೂ ಇಲ್ಲದ ಕಾಲದಲ್ಲಿ, ಲೀಬಿಗ್ ತನ್ನ ಸಂಶೋಧನೆಯನ್ನು ಪ್ರಕಟಿಸುವುದಕ್ಕೂ ಮೊದಲೇ ಈ ಅಕ್ಕಡಿಸಾಲು ಪದ್ಧತಿ ರೂಪುಗೊಂಡಿದೆ. ಇದೇ ರೀತಿ ಅಮೆರಿಕದ ಇರುಕ್ವೋಯಿಸ್ ಇಂಡಿಯನ್ ಮೂಲ ನಿವಾಸಿ ಜನಾಂಗದ ಬೆಟ್ಟ ಕಾಡುಗಳಲ್ಲಿ ಅಕ್ಕತಂಗಿಯರ ಪದ್ಧತಿ ಎಂಬುದೊಂದು ಸಂಗಾತಿ ಸಸ್ಯ, ಬೆಳೆ ಪದ್ಧತಿ ಅಸ್ತಿತ್ವದಲ್ಲಿದೆ. ಅಕ್ಕಡಿ ಸಾಲು ಪದ್ಧತಿಯಲ್ಲಿ ವಿವಿಧ ಜಾತಿಯ ಸಸ್ಯಗಳು ಭೂಮಿಯ ವಿವಿಧ ಆಳಗಳಿಗೆ ಬೇರು ಬಿಟ್ಟು ವಿವಿಧ ಪೋಷಕಾಂಶಗಳನ್ನ ಹೀರಿಕೊಳ್ಳುತ್ತವೆ; ಎಲೆ ಉದುರಿಸುವ ಮೂಲಕ ಆ ಪೋಷಕಾಂಶಗಳು ಮೇಲ್ಮಣ್ಣಿಗೆ ಸೇರುತ್ತವೆ; ಹೀಗೆ ಮಣ್ಣಿನ ವಿವಿಧ ಜೀವಗಳ ವರ್ತುಲದ ಆಹಾರ ಸರಪಳಿಯನ್ನ ಪೋಷಿಸಿದಂತಾಗುತ್ತದೆ. ಈ ಪದ್ಧತಿ ಬಗ್ಗೆ ಅಧ್ಯಯನ ನಡೆಸಿದ ಸ್ವೀಡನ್ನಿನ ಕೃಷಿ ಶಾಸ್ತ್ರಜ್ಞೆ ಡಾ॥ಬ್ರಿಟಿಟಾ ಇದು ಭಾರತೀಯ ಪಾರಂಪರಿಕ ಕೃಷಿಯ ಅತ್ಯುತ್ತಮ ಉದಾಹರಣೆ ಎಂದಿದ್ದಾರೆ. ಭಾರತದ ಕೃಷಿ ಪದ್ಧತಿಗಳನ್ನು ಸುಧಾರಿಸಲು ಬಂದ ಸರ್.ಆಲ್ಬರ್ಟ್ ಹೋವಾರ್ಡ್ ಇಲ್ಲಿನ ಕೃಷಿ ಪದ್ಧತಿಗಳ ಬಗ್ಗೆ ಸುದೀರ್ಘ ಅಧ್ಯಯನ ನಡೆಸಿ 'ಭಾರತದ ಕೃಷಿಯಲ್ಲಿ ನಾವು ಮಾಡಬೇಕಾಗಿರುವ ಸುಧಾರಣೆ ಯಾವುದೂ ಇಲ್ಲ' ಎಂದು ವಸಾಹತುಶಾಹಿ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಆದರೆ ದುರಂತ ನೋಡಿ, ದೇವರು ಬಿಟ್ಟುಹೋದ ರಥ ಲಪಟಾಯಿಸಿದ ಭಕ್ತರ ಗ್ಯಾಂಗು ಇದ್ಯಾವುದನ್ನೂ ಗಮನಿಸಿಲ್ಲ.

ಮಣ್ಣಿಗೆ ಸುರಿಯುವ ರಾಸಾಯನಿಕ ಪ್ರಧಾನ ಪೋಷಕಾಂಶಗಳನ್ನ ಸಸ್ಯಗಳು ಹೀರಿಕೊಳ್ಳಲು ಒಂದು ಮಾಧ್ಯಮವಾಗಿ ಮಣ್ಣಿನಲ್ಲಿ ಸಾಕಷ್ಟು ಪ್ರಮಾಣದ ಹ್ಯೂಮಿಕ್ ಆಮ್ಲವಿರಬೇಕು, ಈ ಹ್ಯೂಮಿಕ್ ಆಮ್ಲ ಉತ್ಪಾದನೆಯಾಗುವುದು ಭೂಮಿಯ ಜೇಡಿಮಣ್ಣು ಮತ್ತು ಕಳಿಯುವ ಸಾವಯವ ಪದಾರ್ಥಗಳ ಸುಸೂಕ್ಷ್ಮ

ಹೆಣಿಗೆಯಿಂದ. ಆದರೆ ಭಾರತದಲ್ಲಿ ಉತ್ಪತ್ತಿಯಾಗುತ್ತಿರುವ ಸಗಣಿ ಪೈಕಿ ಶೇ.೬೦ರಷ್ಟು ಉರುವಲಿಗೆ ಖರ್ಚಾಗುತ್ತಿದೆ. ಉಳಿದ ಶೇ.೪೦ರಷ್ಟು ಸಗಣಿ ಬಿಸಿಲಿಗೆ ಒಣಗಿ, ಮಳೆಯಲ್ಲಿ ನೆನೆದು ಉಳಿಯುವುದು ಕಳಪೆ ಗುಣಮಟ್ಟದ ಲಿಗ್ನೊ ಪ್ರೊಟೀನ್ ಮತ್ರ. ಜಾಗತಿಕವಾಗಿ ಕಾರ್ಖಾನೆಗಳು ಉತ್ಪತ್ತಿ ಮಾಡುತ್ತಿರುವ ನೈಟ್ರೋಜನ್‌ನ ಪ್ರಮಾಣ ವರ್ಷಕ್ಕೆ ೧೦೦ ಮಿಲಿಯನ್ ಟನ್‌ಗಳು, ಜಾನುವಾರುಗಳ ಸಗಣಿಯಿಂದ ಸಿಗುವ ನೈಟ್ರೋಜನ್ನಿನ ಪ್ರಮಾಣ ವರ್ಷಕ್ಕೆ ೧೪೦ ಮಿಲಿಯನ್ ಟನ್ನುಗಳು. ಆದರೆ ಅಕ್ಕಡಿಸಾಲು ಪದ್ಧತಿಯಲ್ಲಿ ಬೆಳೆಯಲಾಗುವ ದ್ವಿದಳ ಧಾನ್ಯಗಳು ಮತ್ತು ಇತರೆ ಸಸ್ಯಗಳು ವರ್ಷವೊಂದಕ್ಕೆ ನೈಸರ್ಗಿಕವಾಗಿ ೧೬೦ ಮಿಲಿಯನ್ ಟನ್ ಸಾರಜನಕ ಉತ್ಪಾದನೆ ಮಾಡುತ್ತವೆ.

೧೯೭೦ರ ದಶಕದಲ್ಲಿ ಭಾರತದ ಕೃಷಿ ವಿಜ್ಞಾನಿಗಳು ಹೇಳುತ್ತಿದ್ದರು. ರಾಗಿ ಜೋಳಗಳ ಜೊತೆ ಅವರೆ, ಹಲಸಂದೆ, ತೊಗರಿ ಬಿತ್ತಬೇಡಿ ಇದರಿಂದ ಫಸಲಿನ ಎಫಿಷಿಯೆನ್ಸಿ ಕಡಿಮೆಯಾಗುತ್ತದೆ ಎಂದು. ಇತ್ತ ಭಾರತೀಯವೂ ಅಲ್ಲ, ಅತ್ತ ಪಾಶ್ಚಿಮಾತ್ಯವೂ ಅಲ್ಲ, ಇದ್ಯಾವ ಸೀಮೆಯ ಕೃಷಿ ವಿಜ್ಞಾನ? ಇದೇ ಆದದ್ದು: ೧೯೬೦-೬೫ರ ವೇಳೆಯಲ್ಲಿ ಹಸಿರು ಕ್ರಾಂತಿ ಪ್ರಾರಂಭವಾದ ವೇಳೆಗೆ ಭಾರತದಲ್ಲಿ ಚಾಲ್ತಿಯಲ್ಲಿ ಇದ್ದದ್ದು ಇಂತಹ ಒಂದು ಪರಕಿ ಕೃಷಿ ವಿಜ್ಞಾನ ಅಥವಾ ಅಮೆರಿಕದಲ್ಲಿ ಚೋಮ್‌ಸ್ಕಿಯವರಂತಹ ವಿಜ್ಞಾನಿಗಳ ಪ್ರಕಾರ ವಿಜ್ಞಾನ ದಿಗ್ಬಂಧನದಲ್ಲಿತ್ತು: ಹೌ ದ ಅದರ್ ಹಾಫ್ ಡೈಸ್' ಪುಸ್ತಕದ ಲೇಖಕಿ ಸೂಸನ್ ಜಾರ್ಜ್ ಇದನ್ನ ಮತ್ತಷ್ಟು ನಿಷ್ಠುರ ಮಾತುಗಳಲ್ಲಿ ಹೇಳುತ್ತಾರೆ: ಭಾರತದ ಕೃಷಿ ವಿಜ್ಞಾನಿಗಳು ರಾಕ್‌ಫೆಲ್ಲರ್ ಪ್ರಾಯೋಜಿತ ಅಂತರರಾಷ್ಟ್ರೀಯ ಸೆಮಿನಾರುಗಳಲ್ಲಿ ಓಂ ಪ್ರಥಮವಾಗಿ ಸೂಟು ಬೂಟು ತೊಟ್ಟು ಅಮೆರಿಕನ್ ಅಧಿಕಾರಿಗಳ ಮುಂದೆ ಸೊಂಟ ನುಲಿಯುತ್ತಿದ್ದರು; ಅವರದೊಂದು ಕೃಪಾಕಟಾಕ್ಷಕ್ಕಾಗಿ ಪದೇ ಪದೇ ಟೈ ಸರಿಮಾಡಿಕೊಳ್ಳುತ್ತಿದ್ದರು.

ಮಣ್ಣು ವಿವಿಧ ಜೀವ ಪ್ರಭೇದಗಳ, ವಿವಿಧ ಹಂತಗಳ ಕ್ರಿಯಾತ್ಮಕ ಆಹಾರ ಸರಪಳಿ; ಈ ಸರಪಳಿಯ ಕೊನೆಯ ಕೊಂಡಿ ಮನುಷ್ಯ. ಮಣ್ಣು ಏಕರೂಪಿ ಕಚ್ಚಾ ಸರಕಲ್ಲ, ವಿವಿಧ ಜೀವವ್ಯವಸ್ಥೆಗಳ, ಡಾರ್ವಿನ್ ಹೇಳುವಂತೆ ಕೆಳಸ್ತರದ ಜೀವಿಗಳ ಸುಂಘಟಿತ ಆಹಾರ ಸರಪಳಿ ಮತ್ತು ಅರಿಸ್ಟಾಟಲ್ ಹೇಳುವಂತೆ ಅದು ಭೂಮಿತಾಯಿಯ ಕರುಳು; ಆಲ್‌ಬ್ರೆಕ್ಟ್ ಹೇಳುವಂತೆ 'ಇಟ್ಸ್ ಹೆಟರೋಜೇನಿಯಸ್ ಲಿವಿಂಗ್ ಸಿಸ್ಟಮ್' ಅಮೆರಿಕ ಸಂಯುಕ್ತ ಸಂಸ್ಥಾನ, ಇಥಾಕಾ ಸ್ಟೇಟ್ ಯೂನಿವರ್ಸಿಟಿಯ ಪ್ರೊಫೆಸರ್ ಜೇನ್ ಮೌಂಟ್ ಪ್ಲೆಸೆಂಟ್ ಅಲ್ಲಿನ ಕೃಷಿ ಇಲಾಖೆಗೆ ಒಂದು ಎಚ್ಚರಿಕೆ ಕೊಟ್ಟರು: ಅಮೆರಿಕದ ಮಣ್ಣಿನಲ್ಲಿ ಕಾಳು, ದವಸ ಬೆಳೆಯುವುದೇ ನಿಮ್ಮ ಇಚ್ಛೆಯಾಗಿದ್ದರೆ ನೀವು ಅಮೆರಿಕದ ಪಾರಂಪರಿಕ ಕೃಷಿ ಮಾದರಿಗಳನ್ನ ವೈಜ್ಞಾನಿಕ ಮಾಲ್ಯಮಾಪನಕ್ಕೊಳಪಡಿಸಬೇಕು. ಅಮೆರಿಕ ಸರ್ಕಾರ ಜೇನ್‌ರ ಮಾತು ಕೇಳಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಯಾಕೆಂದರೆ ಇಂದು ಕೃಷಿಯಲ್ಲಿ ಬಳಕೆಯಾಗುತ್ತಿರುವ ಅನೇಕ ಕೀಟನಾಶಕ, ಕಳೆನಾಶಕ ಮತ್ತು ಶಿಲೀಂಧ್ರನಾಶಕಗಳು ಅಮೆರಿಕ ಹೂಡಿದ ಯುದ್ಧಗಳಲ್ಲಿ ಮಿಕ್ಕು ಹೋಗಿರುವ ಯುದ್ಧ ರಾಸಾಯನಿಕಗಳು; ಅಷ್ಟೂ ಅಲ್ಲದೇ ಜೇನ್ ಬೆಟ್ಟಗಾಡಿನ ಹೆಂಗಸು. ದೇವರಿಂದ ಕದ್ದ ರಥದಲ್ಲಿ ಕುಳಿತ ಅಂಥ ಭಕ್ತರ ಗ್ಯಾಂಗಿನಿಂದ ಭಾರತದ ಹಸಿರು

ಕ್ರಾಂತಿ ಪ್ರಾರಂಭದಲ್ಲೇ ಹೈಜಾಕಾಗಿ ಹೋಯಿತು. ಅತ್ಯುತ್ತಮ ಪಾರಂಪರಿಕ ಕೃಷಿ ಮಾದರಿಗಳ ಜೊತೆಗೆ ಮಣ್ಣಿನ ಮೂಲ ಭೌತಿಕ ಸಂರಚನೆ ಮತ್ತು ಜೀವಮಂಡಲದ ಹೆಣಿಗೆಯನ್ನೇ ನಾಶಮಾಡಿತು. ಮಗುವನ್ನ ಬಟ್ಟೆಯ ತೊಟ್ಟಿಲಿಗೆ ಹಾಕಿ, ಮರದ ರೆಂಬೆಗೆ ತೂಗುಹಾಕಿ, ಮರಳಿಬರುವ ಬೇಟೆಗಾರ ಗಂಡನಿಗಾಗಿ ಕಾಯುತ್ತಾ ಯಾವ ಗಿಡ, ಯಾವ ಗಿಡದ ಸಾಂಗತ್ಯದಲ್ಲಿ ಚೆನ್ನಾಗಿ ಬೆಳೆಯಬಲ್ಲದು ಎಂಬ ಬೆಟ್ಟಗಾಡಿನ ಹೆಂಗಸಿನ ಗ್ರಹಿಕೆ ಮತ್ತು ಅರಿವುಗಳು ಮಾತ್ರ ಭಾರತದ ಕೃಷಿ ವಿಜ್ಞಾನಕ್ಕೆ ಮುಂದಿನ ದಾರಿ ತೋರಬಲ್ಲವು.

ಭಾರತದ ಹಳ್ಳಿಗಳು ಕೃಷಿ ಮತ್ತು ಕೃಷಿ ಆಧಾರಿತ ಸ್ಥಳೀಕ ಉದ್ದಿಮೆ ಮತ್ತು ಕುಶಲ ಕಸುಬುಗಳ ಹೆಟರೋಜೀನಿಯಸ್ ಸೋಷಿಯಲ್ ಸೆಟ್ಟಿಂಗ್; ಈ ನೆಲಾಧಾರಿತ ಕಸುಬು ಮತ್ತು ಅರಿವುಗಳ ಸಮಾಜವನ್ನ ಸಮಾಜಶಾಸ್ತ್ರಜ್ಞ ರಾಮ್ ಗುಹಾ ಈಕೊ ಸಿಸ್ಟಮ್ ಸೊಸೈಟೀಸ್ ಅಂತಾ ಕರೆದಿದ್ದಾರೆ. ಅಂದರೆ ಇಲ್ಲಿನ ಬೆಟ್ಟ, ಗುಡ್ಡ, ಹೊಲ, ಗದ್ದೆ, ಹಳ್ಳಿ, ಕೆರೆಗಳನ್ನು ರಕ್ಷಿಸಿಕೊಳ್ಳಬೇಕಾದ ಆತ್ಯಂತಿಕ ಪೋಷಕರು ಕೃಷಿ ಪರಿಸರ ವ್ಯವಸ್ಥೆಯ ಪೋಷಕರು ಸರ್ಕಾರ ಸ್ಥಾಪಿಸಿದ ರೈತ ಸಂತೆಗಳಲ್ಲಿ ತರಕಾರಿ, ದವಸ ಮಾರುತ್ತ ಕುಳಿತು ಕೊಳ್ಳುವುದು ವಾಸ್ತವಿಕವಲ್ಲ. ಇದಕ್ಕಾಗಿ ಅಂತಹ ಸರ್ಕಾರಿ ಸ್ವಾಮ್ಯದ ಎಪಿಎಂಸಿ ಹಾಪ್‌ಕಾಮ್ಸ್ ಸಂಸ್ಥೆಗಳಿವೆ. ಈ ಸಂಸ್ಥೆಗಳಲ್ಲಿರುವ ಕಳಪೆ ಅಧಿಕಾರಿಗಳು, ತೂಕಗಳ್ಳರು, ಹಫ್ತಾದಾರರು ಕೃಷಿಕರ ಬದುಕನ್ನು ಹೀಗಳೆದು ನಿಂದಿಸಿದರೆ ಅದು ನಿಸರ್ಗದ ಆತ್ಯಂತಿಕ ಪೋಷಕರನ್ನ ನಿಂದಿಸಿದಂತೆ. ಕೃಷಿ ತನ್ನ ಉಳಿವಿಗಾಗಿ ಸ್ವಂತ ಚಿಂತನೆ, ಕ್ರಿಯಾಶೀಲತೆ ಮತ್ತು ಕೃಷಿ ಹುಟ್ಟುವಳಿಗಳು ನೇರವಾಗಿ ಗ್ರಾಹಕರಿಗೆ ತಲುಪುವಂತೆ ಮತ್ತು ಅದರ ಪ್ರತಿಫಲಗಳು ರೈತರಿಗೆ ನ್ಯಾಯಯುತವಾಗಿ ಕೈಸೇರುವಂತೆ ತನ್ನ ರೂಪಾವಳಿಯಲ್ಲಿ ಬದಲಾವಣೆ ತಂದುಕೊಳ್ಳಬೇಕು. ದೇವರು ಇಳಿದು ಹೋದ ಮೇಲೂ ಕೃಷಿ ವಿಜ್ಞಾನಿಗಳು, ಕೃಷಿ ಅರ್ಥಶಾಸ್ತ್ರಜ್ಞರು ಕದ್ದ ರಥದಿಂದ ಇಳೀದು ಬಂದು ಈ ಭೂಮಿಗೆ ಮುತ್ತಿಡಬೇಕು. ಹೀಗಾಗದಿದ್ದರೆ ಈಗಾಗಲೇ ಪರಕೀಯಾಗಿರುವ ಕೃಷಿ ವಿಜ್ಞಾನ ಅಮೆರಿಕದ ಕೆಟ್ಟ ದಾರಿ ಹಿಡಿಯುತ್ತದೆ.

(ಸಾಭಾರ : ಹೊಸತು)

* * *

ಕೋಮುಸಮರಸತೆ, ಇಲ್ಲವೆ ಸರ್ವನಾಶ

– ಡಾ॥ ರಾಜೇಂದ್ರ ಪ್ರಸಾದ್

ಸಾರ್ವಜನಿಕ ಜೀವನದ ಆರಂಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನೆಲಸಿದ್ದ ಮಹಾತ್ಮಾ ಗಾಂಧೀ ಪ್ರಾರಂಭದಿಂದಲೇ ಕೋಮುಸೌಹಾರ್ದತೆಯ ಅವಶ್ಯಕತೆಯನ್ನು ಮನಗಂಡಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಬೇರೆ ಬೇರೆ ಧರ್ಮದ, ಬೇರೆ ಬೇರೆ ಭಾಷೆ ಮಾತನಾಡುವ, ಬೇರೆ ಬೇರೆ ಪ್ರಾಂತ್ಯಗಳಿಂದ ಬಂದ ಭಾರತೀಯರು ಇದ್ದರು. ಗಾಂಧೀಜಿಯವರ ಹೋರಾಟಕ್ಕೆ ಇವರೆಲ್ಲರ ಸಹಕಾರ ಬೆಂಬಲ ಬೇಕಾಗಿತ್ತು. ಗಾಂಧೀಜಿ ಭಾರತಕ್ಕೆ ಮರಳುವ ವೇಳೆಗೆ, ಸ್ವರಾಜ್ಯ ದಕ್ಕಬೇಕಾದರೆ ಇವರೆಲ್ಲರ ತ್ಯಾಗ, ಬಲಿದಾನ, ಬೆಂಬಲ ಅಗತ್ಯವೆಂಬುದನ್ನು ನಿಚ್ಚಳವಾಗಿ ಕಂಡುಕೊಂಡಿದ್ದರು. ಆದ್ದರಿಂದ ಕೋಮು ಸೌಹಾರ್ದತೆ ಅವರ ಪ್ರಮುಖ ಆದ್ಯತೆಗಳಲ್ಲೊಂದಾಗಿತ್ತು.

ಮುಖ್ಯಪ್ರಶ್ನೆ ಭಾರತದಲ್ಲಿ ನೆಲೆಸಿರುವ ಮುಸ್ಲಿಂ ಮತ್ತು ಹಿಂದೂಗಳ ಸಾಮರಸ್ಯದ್ದೇ ಆಗಿತ್ತು. ಹಿಂದೂ–ಮುಸ್ಲಿಂ ಐಕ್ಯತೆ ನೆಲೆಸಿದರೆ ಉಳಿದ ಕೋಮಗಳ ಸೌಹಾರ್ದತೆ ತರಲು ಅಷ್ಟೇನು ಕಷ್ಟಪಡಬೇಕಿಲ್ಲ ಎಂದು ತಿಳಿದಿದ್ದರು. ಅವರು ಇನ್ನುಳಿದ ಅಲ್ಪಸಂಖ್ಯಾತ ಕೋಮುಗಳಾದ ಕ್ರಿಶ್ಚಿಯನ್, ಸಿಖ್, ಪಾರ್ಸಿ ಜನಾಂಗದವರೊಡನೆ ಹಿಂದೂಗಳ ಘರ್ಷಣೆ ಅಷ್ಟೊಂದಿರಲಿಲ್ಲವೆಂದು ಹೇಳಿದ್ದರು. ಮುಖ್ಯಪ್ರಶ್ನೆ ಹಿಂದೂ–ಮುಸ್ಲಿಂ ಐಕ್ಯತೆಯೇ ಆಗಿದೆ ಎಂದು ತಿಳಿದಿದ್ದರು. ಮೊದಲನೆಯ ಮಹಾಯುದ್ಧದ ನಂತರ ಮುಸ್ಲಿಂ ಸಮುದಾಯದಲ್ಲಿ ಬ್ರಿಟಿಷರ ಬಗ್ಗೆ ಸಿಟ್ಟು ಗರಿಗೆದರಿತ್ತು. ಟರ್ಕಿಯ ಸುಲ್ತಾನನಿಗೆ ಬ್ರಿಟಿಷರು ಮಾಡಿದ ವಿಶ್ವಾಸಾಘಾತ ಅವರ ಮನಸ್ಸನ್ನು ನೋಯಿಸಿತ್ತು. ಯುದ್ಧದ ಕಾಲದ ಕಠೋರ ಶಾಸನಗಳನ್ನು ಸಡಿಲಿಸಿದೆ ಇದ್ದದ್ದೂ ಸರ್ಕಾರದ ವಿರುದ್ಧ ಸಿಡಿದೇಳಲು ಜನರನ್ನು ಪ್ರೇರೇಪಿಸಿತು. ಜಲಿಯನ್ ವಾಲಾ ಬಾಗ್‌ನ ದಾರುಣ ಕಗ್ಗೊಲೆ, ಪಂಜಾಬ್‌ನಲ್ಲಿ ನಡೆದ ಅಸಂಖ್ಯಾತ ದೌರ್ಜನ್ಯಗಳು, ಜನರ ಮನಸ್ಸಿನಲ್ಲಿ ಅವಿಶ್ವಾಸದ ಅಸಹನೆಯ ಬೀಜ ಬಿತ್ತಿದ್ದವು. ಇದು ಒಂದು ಚಳುವಳಿಯಾಗಿ ರೂಪುಗೊಂಡಿತ್ತು. ಖಿಲಾಫತ್‌ನ ಸಮಸ್ಯೆಯನ್ನು ಹಿಂದೂ–ಮುಸ್ಲಿಂ ಇಬ್ಬರೂ ಸಮಾನವಾಗಿ ಎದುರಿಸಿದ್ದರು. ಗಾಂಧೀಜಿ ಮುಸ್ಲಿಂ ನಾಯಕರುಗಳಾದ ಅಲಿ ಸಹೋದರರು, ಮೌಲಾನ ಅಬುಲ್ ಕಲಂ ಅಜ಼ಾದ್ ಮುಂತಾದವರೊಂದಿಗೆ ಭಾರತದ ಉದ್ದಗಲಕ್ಕೂ ಸಂಚರಿಸಿದರು. ಆ ವರ್ಷ ಹಿಂದೂ–ಮುಸ್ಲಿಂ ಬಾಂಧವ್ಯದ ಆಶಾಕಿರಣ ಗೋಚರಿಸಿದಂತಾಯಿತು. ಹಿಂದೂ–ಮುಸ್ಲಿಂರಲ್ಲಿ ಘರ್ಷಣೆಯ ವಿಚಾರವೆಂದರೆ ಬಕ್ರಿದ್ ದಿನದಂದು ನಡೆಯುತ್ತಿದ್ದ ಗೋವಧೆ. ಆ ವರ್ಷ ಹಿಂದಿನ ವರ್ಷಗಳೊಂದಿಗೆ ಹೋಲಿಕೆ ಮಾಡಿದರೆ ಅದು ಕನಿಷ್ಠವಾಗಿತ್ತು. ಗೋ ಸಂರಕ್ಷಣೆಗಾಗಿ ಮುಸ್ಲಿಂರನ್ನು

ಮನವೊಲಿಸಲು ಗಾಂಧೀಜಿ ಎಂದೂ ಹಿಂದೆ ಬೀಳಲಿಲ್ಲ. ಹಿಂದೂಗಳು ಖಿಲಾಫತ್ ಚಳುವಳಿಗೆ ತೋರುತ್ತಿದ್ದ ಬೆಂಬಲವನ್ನು ಸಾರಿ ಸಾರಿ ಹೇಳಲು ಎಂದೂ ಹಿಂದೆ ಬೀಳುತ್ತಿರಲಿಲ್ಲ. ಗಾಂಧೀಜಿಯವರ ಐಕ್ಯತೆಯ ವಿಚಾರವು ಅಹಿಂಸೆಯ ಬುನಾದಿಯ ಮೇಲ ಕಟ್ಟಲಾಗಿತ್ತು. ಹಿಂದೂಗಳು ಬಹುಸಂಖ್ಯಾತರಾಗಿದ್ದರು. ಅಲ್ಪಸಂಖ್ಯಾತರಾದ ಮುಸ್ಲಿಂ ಜನಾಂಗದವರ ಆಸೆ ಆಕಾಂಕ್ಷೆಗಳಿಗೆ ಸರಿಯಾಗಿ ಸ್ಪಂದಿಸಬೇಕೆಂದು ಕರೆನೀಡಿದ್ದರು. ಬಲವಂತವಾಗಿ ಅಲ್ಪ ಸಂಖ್ಯಾತರ ಮೇಲೆ ಅಭಿಪ್ರಾಯಗಳನ್ನು ಹೇರುವುದಕ್ಕಿಂತ ಅವರ ಮನಃಪರಿವರ್ತನೆಗೆ ಹೆಚ್ಚು ಒತ್ತುಕೊಡಬೇಕೆಂದು ಹೇಳಿದರು. ಜನರ ಬಹುಮತದ ಬೆಂಬಲದಿಂದ ಖಿಲಾಫತ್ ಮತ್ತು ಪಂಜಾಬ್‌ನಲ್ಲಾದ ಅನ್ಯಾಯಗಳಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕಂಡುಕೊಂಡಲ್ಲಿ ಸ್ವರಾಜ್ಯದ ಬಾಗಿಲು ತಟ್ಟಿದಂತೆಯೇ ಎಂದಿದ್ದರು.

ಆದರೆ ತೆರೆಮರೆಯಲ್ಲಿ ಕೆಲವು ವಿಚ್ಛಿದ್ರಕಾರಿ ಶಕ್ತಿಗಳು ಹಿಂದೂ–ಮುಸ್ಲಿಂ ಐಕ್ಯತೆಯನ್ನು ಕದಡುತ್ತಲೇ ಇದ್ದವು. ಖಿಲಾಫತ್ ಚಳವಳಿಯನ್ನು ಟರ್ಕ್ ಜನಾಂಗವೇ ಕೈಬಿಟ್ಟದ್ದರಿಂದ ಅದು ಅಸ್ತಿತ್ವ ಕಳೆದುಕೊಂಡಿತು. ಇಷ್ಟೆಲ್ಲ ಹಿನ್ನಡೆಗಳಿದ್ದಾಗ್ಯೂ ಗಾಂಧೀ ತಮ್ಮ ಹಿಂದೂ–ಮುಸ್ಲಿಂ ಸೌಹಾರ್ದತೆಯ ಆಶಯಗಳನ್ನು ಜೀವಂತವಾಗಿರಿಸಿಕೊಂಡಿದ್ದರು. ಅದಕ್ಕಾಗಿ ಅವರು ಅವರ ಕೊನೆಯುಸಿರಿರುವವರೆಗೂ ಹೋರಾಡಿದರು.

೧೯೨೪ರಲ್ಲಿ ಹಿಂದೂ–ಮುಸ್ಲಿಂ ದಂಗೆ ಆದಾಗ, ಪರಿಸ್ಥಿತಿ ಹೆಚ್ಚು ಬಿಗಡಾಯಿಸುವಂತೆ ಕಂಡಾಗ ಅವರು ೨೧ ದಿವಸಗಳ ಉಪವಾಸವನ್ನು ಕೈಗೊಂಡರು. ತನ್ನ ಆಂತರ್ಯದ ಶುದ್ಧಿಗಾಗಿ ಮತ್ತು ತನ್ನ ಹಿತವಚನಗಳನ್ನು ಜನರು ಪಾಲಿಸುವಂತಾಗಲಿ ಎಂಬ ಉದ್ದೇಶವು ಅವರದಾಗಿತ್ತು. ಇದರಿಂದಾಗಿ ಎಲ್ಲ ಜನಾಂಗದವರ ಸರ್ವಧರ್ಮ ಸಮ್ಮೇಳನ ಆಯೋಜಿಸಲಾಯಿತು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಜನಾಂಗದವರೆಲ್ಲರು ಭಾಗವಹಿಸಿದ್ದರು ಮತ್ತು ಕೋಮುಸೌಹಾರ್ದತೆ ದೃಢೀಕರಿಸುವ ನಿಟ್ಟಿನಲ್ಲಿ ಠರಾವುಗಳನ್ನು ಅಂಗೀಕರಿಸಲಾಯಿತು.

ಅಸಹಕಾರ ಚಳುವಳಿಯನ್ನು ಮುನ್ನಡೆಸುತ್ತಾ ಕಾನೂನು ಸಮರವನ್ನೂ ನಿಭಾಯಿಸುತ್ತಾ, ದೇಶ ಕಟ್ಟುವ ಕೆಲಸವನ್ನೂ ಮುಂದುವರಿಸಲಾಗಿತ್ತು. ಹಳ್ಳಿಗಳ ಉದ್ಧಾರ, ಖಾದಿ ಪ್ರಚಾರ, ಶಿಕ್ಷಣ ಸುಧಾರಣೆಗಳಿಗಾಗಿ ಆಗ್ರಹ ಅವ್ಯಾಹತವಾಗಿ ನಡೆದಿತ್ತು. ಹಲವು ವರ್ಷಗಳು ಇದೇ ರೀತಿ ಸ್ವಲ್ಪ ಸಮಯ ನಡೆದ ಮೇಲೆ ಇಂಡಿಯಾದ ಎಲ್ಲ ಜನರೂ ಹಿಂದುಳಿದ ವರ್ಗದವರೂ ಒಗ್ಗಟ್ಟಾಗುವ ಘಟನೆ ನಡೆಯಿತು. ಬ್ರಿಟಿಷ್ ಸರಕಾರದ ಸೈಮನ್ ಕಮಿಷನ್ ನೇಮಕಾತಿ ಈ ಪ್ರಕ್ರಿಯೆಗೆ ಚಾಲನೆ ನೀಡಿತು. ಆ ಕಮಿಷನ್‌ನಲ್ಲಿ ಯಾವೊಬ್ಬ ಭಾರತಿಯನಿಗೂ ಸ್ಥಾನ ದೊರೆಯದೆ ಇದ್ದದ್ದು ಎಲ್ಲರಲ್ಲೂ ತೀವ್ರ ಅಸಮಾಧಾನ ಮೂಡಿಸಿತ್ತು. ಅಸಹಕಾರ ಚಳುವಳಿ ಮತ್ತು ಅಹಿಂಸಾ ತತ್ವಗಳನ್ನು ಪ್ರಚುರ ಪಡಿಸಲು ಗಾಂಧೀ ಅಹರ್ನಿಶಿ ದುಡಿಯುತ್ತಿದ್ದರು. ಭಾರತೀಯರು ಅದನ್ನು ಗ್ರಹಿಸಿರುವ ರೀತಿ ಮತ್ತು

ಕೊನೆಯ ಸ್ವಾತಂತ್ರ್ಯ ಹೋರಾಟಕ್ಕೆ ಇನ್ನೂ ಅವರು ಅಪಕ್ವ ಎಂಬ ಭಾವನೆ ಗಾಂಧೀಜಿಯವರದ್ದಾಗಿತ್ತು. ನಿಧಾನವಾಗಿ ಮುಸ್ಲಿಮರು ಕಾಂಗ್ರೆಸ್‌ನಿಂದ, ಗಾಂಧೀಜಿಯವರಿಂದ ದೂರ ಸರಿಯತೊಡಗಿದರು. ಮುಸ್ಲಿಂ ಲೀಗ್‌ನ ಅಸ್ತಿತ್ವ ಮುಸ್ಲಿಂರ ನಿರಾಶೆಯ ಮನಕ್ಕೆ ಸಾಂತ್ವನ ನೀಡಿದಂತಿತ್ತು. ಅವರಿಂದ ದೇಶ ವಿಭಜನೆ ಸೊಲ್ಲು ಕೇಳಿಬರತೊಡಗಿತು. ಆದರೆ ಗಾಂಧೀಜಿ ಹಿಂದೂ-ಮುಸ್ಲಿಂ ಐಕ್ಯತೆಯ ಬಗ್ಗೆ ಅದೇ ಹೋರಾಟವನ್ನು ಮುಂದುವರಿಸುತ್ತಿದ್ದರು. ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯಂತೆ ಒಂದು ಕೋಮಿನವರನ್ನು ಇನ್ನೊಂದು ಕೋಮಿನವರ ವಿರುದ್ಧ ಚಿತಾವಣೆ ಮಾಡುತ್ತಿತ್ತು. ಪ್ರತ್ಯೇಕ ಸ್ವತಂತ್ರ ಮುಸ್ಲಿಂ ರಾಷ್ಟ್ರ ಬೇಕೆನ್ನುವ ಮುಸ್ಲಿಂ ಲೀಗ್‌ನ ಬೇಡಿಕೆ ಹಲವರಿಗೆ ಆಕರ್ಷಕವಾಗಿ ಕಂಡದ್ದುಂಟು. ಗಾಂಧೀಜಿಯವರು ದೇಶ ವಿಭಜನೆಯೊಂದನ್ನು ಬಿಟ್ಟು ಮಿಕ್ಕೆಲ್ಲ ಬೇಡಿಕೆಗಳನ್ನು ಅನುಮೋದಿಸಲು ತಯಾರಿದ್ದರು. ಪ್ರತ್ಯೇಕ ರಾಜ್ಯ ಸ್ಥಾಪನೆಯ ಬೇಡಿಕೆಗೆ ಮುಸ್ಲಿಂ ಲೀಗ್ ಬದ್ಧವಾಗಿದ್ದುದು ಇದುವರೆಗೆ ಗಾಂಧೀ ಕೋಮು ಸೌಹಾರ್ದತೆಗೆ ಮಾಡಿದ ಒಳ್ಳೆಯ ಕೆಲಸವನ್ನು ಮಣ್ಣು ಪಾಲು ಮಾಡಿತ್ತು. ದುರಂತಕ್ಕೆ ಮಕುಟವೆನ್ನುವಂತೆ ಕೋಮು ದ್ವೇಷದ ದಳ್ಳುರಿ ಉತ್ತರ ಭಾರತವನ್ನು ಆಕ್ರಮಿಸಿಕೊಳ್ಳತೊಡಗಿತ್ತು. ಸಾವಿರಾರು ಜೀವಗಳು ಬಲಿಯಾದವು. ಹಿಂದೂ, ಸಿಖ್ ಜನರು ಪಂಜಾಬ್, ಸಿಂಧ್ ಪ್ರಾಂತಗಳಿಂದ ನಿರಾಶ್ರಿತರಾಗಿ ಬರಬೇಕಾಯಿತು. ಪೂರ್ವದ ಬಂಗಾಲದಲ್ಲೂ ಅದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ದೇಶ ವಿಭಜನೆಯ ನಂತರ ಕೋಮುಗಲಭೆ ತಣ್ಣಗಾಗಬಹುದೆಂದು ನಿರೀಕ್ಷಿಸಿದ್ದು ಹುಸಿಯಾಯಿತು. ಕೋಟ್ಯಂತರ ಜನರು ಮನೆಮಠ ತೊರೆದು ಆ ಕಡ ಈ ಕಡೆ ಬರಬೇಕಾಯಿತು. ಈ ದಾರುಣ ಕಗ್ಗೊಲೆ, ಲೂಟಿ, ರಕ್ತಪಾತದ ನಡುವೆ ಗಾಂಧೀ, ಜನರನ್ನು ಸಾಂತ್ವನಗೊಳಿಸುವಲ್ಲಿ, ಕೋಮುಸೌಹಾರ್ದತೆಯ ಭಾವನೆಗಳನ್ನು ತುಂಬುವುದರಲ್ಲಿ ನಿರತರಾಗಿದ್ದರು. ಕೋಮುಗಲಭೆ ತೀವ್ರಗೊಂಡಿದ್ದ ನೌಖಾಲಿಗೆ ತೆರಳಿ ಅಲ್ಲಿನ ಮುಸ್ಲಿಂ ಬಾಂಧವರನ್ನು ಸಮಾಧಾನಮಾಡಲೆತ್ನಿಸಿದರು. ಹಳ್ಳಿಯಿಂದ ಹಳ್ಳಿಗೆ ಕಾಲ್ನಡಿಗೆಯಲ್ಲಿ ಸಂಚರಿಸಿ ಶಾಂತಿಯನ್ನು ಕಾಪಾಡಿದರು. ಅಂತಹ ಪ್ರಕ್ಷುಬ್ದ ದ್ವೇಷದ ವಾತಾವರಣದಲ್ಲೂ ಎದೆಗುಂದದೆ ಗಂಡಾಂತರಗಳಿಗೆ ತನ್ನನ್ನೇ ಒಡ್ಡಿಕೊಂಡದ್ದು ಪವಾಡವೇ ಸರಿ. ಹಿಂದೂ-ಮುಸ್ಲಿಂ ಜನಾಂಗಗಳನ್ನು ಒಂದೇ ಮಾತೆಯ ಸುಪುತ್ರರೆಂದು ಗಾಂಧೀ ಗೌರವಿಸುತ್ತಿದರು. ಅವರಲ್ಲಿ ಬೇಧ ಭಾವ ಎಣಿಸುತ್ತಿರಲಿಲ್ಲ. ತನ್ನ ಜೀವಿತದ ಕೊನೆಯ ದಿನದ ವರೆಗೆ ಎಲ್ಲರಲ್ಲಿ ಸಹೋದರತ್ವ ಭಾವನೆ ಬಿತ್ತುವುದರಲ್ಲೇ ತಲ್ಲೀನರಾಗಿದ್ದರು. ತನ್ನ ನಿರ್ಭೀತ, ಪ್ರಾಮಾಣಿಕ ಭ್ರಾತೃತ್ವದ ಕಾಳಜಿಗಳಿಂದಾಗಿ ಕೆಲವು ಮುಸ್ಲಿಂ ನಾಯಕರುಗಳ ವಿರೋಧ ಕಟ್ಟಿಕೊಳ್ಳಬೇಕಾಗಿ ಬಂದರೂ, ಅದೇ ಕೆಲವು ಹಿಂದೂ ನಾಯಕರ ಕೆಂಗಣ್ಣಿಗೆ ಗುರಿಯಾಗಬೇಕಾಗಿ ಬಂದರೂ ಎದೆಗುಂದದೆ ದಣಿವಿರದ ಆ ಹೋರಾಟದಲ್ಲಿ ತನ್ಮಯರಾಗಿದ್ದರು. ಸಂಜೆಯ ಪ್ರಾರ್ಥನಾ ಸಭೆಗೆ ಹೋಗುತ್ತಿರುವಾಗ ಹಿಂದೂ ಮತಾಂಧನೊಬ್ಬನ ಗುಂಡೇಟಿಗೆ ಬಲಿಯಾಗಿ ಅವರು

ಸಾವನ್ನಪ್ಪಿದಾಗ ನಾಲಗೆಯಲ್ಲಿ ಶ್ರೀರಾಮಜಪ, ಮುಖದಲ್ಲೊಂದು ಮುಗುಳ್ನಗೆ ಇತ್ತು. ಪಾಕಿಸ್ತಾನ ಉದಯದ ನಂತರವೂ ಹಿಂದೂ-ಮುಸ್ಲಿಂ ಜನಾಂಗೀಯ ಘರ್ಷಣೆಗಳು ಅವ್ಯಾಹತವಾಗಿ ನಡೆಯುತ್ತಲೇ ಇದ್ದವು. ಗಾಂಧೀಜಿಯವರ ಆಶಯ; ಕನಸುಗಳು ದುರಂತದಲ್ಲಿ ಪರ್ಯಾವಸನಗೊಂಡಿದ್ದವು. ಸ್ವರಾಜ್ಯದಕ್ಕಿದರೂ ಅದರ ಹೂವುಗಳು ಹುಳುಕಾಗಿದ್ದವು. ಭಾರತವನ್ನು ಪ್ರೀತಿಸುವ ನಾಗರೀಕರೆಲ್ಲರಿಗೂ ಇಂದು ಗಾಂಧೀಜಿಯವರ ಆದರ್ಶಗಳನ್ನು ಮತ್ತೊಮ್ಮೆ ಮನನ ಮಾಡಿಕೊಳ್ಳಬೇಕಾದ ಜರೂರು ಹೆಚ್ಚಾಗಿದೆ. ಪರಧರ್ಮ ಸಹಿಷ್ಣುತೆ, ಸಹಬಾಳ್ವೆ, ಎಲ್ಲರ ಒಳಿತನ್ನು ಬಯಸುವಂತಹ ಉದಾತ್ತಗುಣಗಳನ್ನು ನಾವಿಂದು ಮತ್ತೊಮ್ಮೆ ಬರಮಾಡಿಕೊಳ್ಳಬೇಕಾಗಿದೆ. ಅಹಿಂಸೆ ಮತ್ತು ಸತ್ಯದ ಪ್ರಣಾಳಿಕೆಯ ಬೆಳಕಿನಲ್ಲಿ ಇಂದಿನ ಕಗ್ಗಂಟುಗಳನ್ನು ನಾವು ಬಿಡಿಸಿಕೊಂಡು ಸೌಹಾರ್ದಯುತ ಸುಂದರ ಭಾರತವನ್ನು ಕಟ್ಟಬೇಕಾಗಿದೆ. ಇದು ಜಾಗತಿಕ ಅವಶ್ಯಕತೆ ಕೂಡಾ ಆಗಿದೆ. ಇದು ಪ್ರೇಮ, ತ್ಯಾಗ ಮತ್ತು ಸಹಭ್ರಾತೃತ್ವದ ಅಡಿಪಾಯದ ಮೇಲೆ ನಿಂತಿರುವ ಸೌಧವಾಗಬೇಕಾಗಿದೆಯೇ ಹೊರತು, ಭಯ, ದಬ್ಬಾಳಿಕೆಯಿಂದಲ್ಲ. ಗಾಂಧೀಜಿವರು ಶೋಷಣೆ, ದಬ್ಬಾಳಿಕೆಗಳನ್ನು ವಿರೊಧಿಸಿ ಅಂತಃಕರುಣ, ಸೋದರಭಾವನೆ, ಪರಸ್ಪರ ಗೌರವಾದರ್ಶಗಳ ಪ್ರೇಮಭಾವನೆಯನ್ನು ಪ್ರಚುರ ಪಡಿಸಿದ್ದರು. ಅದನ್ನು ನಾವಿಂದು ಮನದಟ್ಟು ಮಾಡಿಕೊಳ್ಳಬೇಕಾಗಿದೆ.

ಇಂದು ವಿಜ್ಞಾನ ನಮಗೆ ಕೊಟ್ಟಿರುವ ಸವಲತ್ತುಗಳಲ್ಲಿ ಪರಸ್ಪರ ಹೊಂದಾಣಿಕೆಯ ಮನೋಭಾವ ತೋರದಿದದ್ದರೆ ಎಲ್ಲರೂ ನಾಶವಾಗುವ ಸಂಭವವೇ ಹೆಚ್ಚು. ಅಣ್ವಸ್ತ್ರಗಳ ಈ ಯುಗದಲ್ಲಿ ಬಲಾಢ್ಯ ರಾಷ್ಟ್ರಗಳು ಸೈನ್ಯಶಕ್ತಿಯ ಎದಿರು ಒಪ್ಪಂದ ಮಾಡಿಕೊಳ್ಳಬೇಕು ಮತ್ತು ಭಯ ಹಾಗೂ ಪರಸ್ಪರರಲ್ಲಿಯ ಅಪನಂಬಿಕೆಯನ್ನು ಕಳಚಿ ಹಾಕಬೇಕು. ಈ ರೀತಿಯಾಗಿ ಒಂದು ಜಗತ್ತಿನ ಸ್ಥಾಪನೆಗೆ ರಾಜಕೀಯವಾಗಿ ದಾರಿ ಮಾಡಿಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಳ್ಳಲು ಹೆಣಗುತ್ತಿರುವ ಜನಾಂದೋಲನಗಳಿಗೆ ಗಾಂಧೀಜಿಯವರ ಆಶಯಗಳು ಊರುಗೋಲುಗಳಾಗಿರುತ್ತವೆ. ಇಡೀ ಜಗತ್ತಿಗೇ ಸುಖ, ಸಮೃದ್ಧಿ, ನೆಮ್ಮದಿಯ ಬದುಕನ್ನು ತರಬಲ್ಲದಾಗಿದೆ.

ಹೈದರಾಬಾದ್ ಅಗಸ್ಟ್ ೧೫, ೧೯೬೨

(ನವಜೀವನ ಪ್ರಕಾಶನದ ಕೋಮು ಸಮರಸತೆ ಪುಸ್ತಕಕ್ಕೆ ಬರೆದ ಪರಿಚಯಾತ್ಮಕ ಲೇಖನ)

ಭಾವಾನುವಾದ : ಡಾ॥ ವಿಜಯಶಂಕರ್

* * *

ಜನಪದ ನಿಲಯದ ಅಂತರಂಗದಲ್ಲಿ.. ೧೦೬

– ಸುರೇಂದ್ರ ಕೌಲಗಿ

ಜಾನಪದಗಳು ರಾಜ್ಯ ಸಾಮ್ರಾಜ್ಯಗಳು ಗುರು।
ಸ್ಥಾನಗಳು ಧರ್ಮಗಳು ಭಾಷೆ ವಿದ್ಯೆಗಳು॥
ಕಾಣಿಸದೆ ಸಾಗಿಹವು ಕಾಲಪ್ರವಾಹದಲಿ।
ಮಾನವತೆ ನಿಂತಿಹುದು – ಮಂಕುತಿಮ್ಮ॥



ಇದು ಜೀವ ವಿಮೆಯ ಕಾಲ. ಜೀವ ವಿಮೆ ಇಲ್ಲದೆ ಇರುವ ಪರಿಸ್ಥಿತಿಯನ್ನು ಊಹಿಸಲೂ ಸಾಧ್ಯವಿಲ್ಲ. ಜೀವ ವಿಮೆ ಇಲ್ಲದೆ ಜೀವನ ಹೇಗಿರುತ್ತದೆ ಎಂಬ ಅನುಭವ ಇತ್ತೀಚಿಗೆ ಆಯಿತು. ಕಳೆದ ಜೂನ್ ಮಾಹೆಯಲ್ಲಿ ಹೆಚ್ಚಿದ ರಕ್ತದ ಒತ್ತಡದಿಂದಾಗಿ ಅಷ್ಟು ವಿಶೇಷ ಗಂಭೀರವಲ್ಲದ ಪಾರ್ಶ್ವವಾಯುವಿಗೆ ತುತ್ತಾಗಬೇಕಾಯಿತು. ಆದ್ದರಿಂದ ಸಹಜವಾಗಿಯೇ ಆಸ್ಪತ್ರೆ ಸೇರಬೇಕಾಯಿತು. ಸ್ಪೆಷಲ್‌ವಾರ್ಡ್‌ನಲ್ಲಿ ಇರಬೇಕಾಯಿತು. ಆಸ್ಪತ್ರೆಯಲ್ಲಿ ಪ್ರವೇಶ ಪಡೆಯುತ್ತಿದ್ದಂತೆಯೇ ತಜ್ಞ ವೈದ್ಯರು ವಿಳಂಬ ಮಾಡದೆ ಚಿಕಿತ್ಸೆ, ಔಷಧೋಪಚಾರ ಪ್ರಾರಂಭಿಸಿದರು. ತುರ್ತು ಪರಿಸ್ಥಿತಿ ಇದ್ದುದ್ದರಿಂದ ಆಸ್ಪತ್ರೆಯ ಚಿಕಿತ್ಸಾ ಖರ್ಚಿನ ಬಗ್ಗೆ ಯೋಚನೆ ಮಾಡುವುದಕ್ಕೆ ವ್ಯವಧಾನವಿರಲಿಲ್ಲ. ಒಂದು ವಾರದಿಂದ ಹತ್ತು ದಿನ ಆಸ್ಪತ್ರೆಯಲ್ಲಿ ಕಳೆಯಬೇಕಾಯಿತು. ದಿನೇ ದಿನೇ ಆಸ್ಪತ್ರೆ ವಾಸದ ಮತ್ತು ಔಷಧೋಪಚಾರದ ಮತ್ತು ಇತರೆ ಖರ್ಚುಗಳು ಆಕಾಶಕ್ಕೇರುತ್ತಿದ್ದವು. ಯಾವ ಪ್ರಕಾರದ ಸಹಾಯ ಅಂದರೆ ಸರ್ಕಾರದಿಂದ ದೊರೆಯುವ ಪ್ರಶ್ನೆಯೇ ಇರಲಿಲ್ಲ. ಜೀವ ವಿಮಾ ಸಂಸ್ಥೆಯಿಂದ ಹಣ ಪಡೆಯುವುದಕ್ಕೂ ಸಾಧ್ಯವಿರಲಿಲ್ಲ. ಏಕೆಂದರೆ ಜೀವ ವಿಮೆಯನ್ನೇ ಮಾಡಿಸಿರಲಿಲ್ಲ! ಜೀವ ವಿಮೆ ಇಲ್ಲದೆ ಇರುವಂಥ ಪ್ರಾಣಿಗಳು ಈ ಲೋಕದಲ್ಲಿ ಹೇರಳವಾಗಿವೆ. ಪ್ರಾಣಿಗಳಲ್ಲೊಂದಾದ ಮನುಷ್ಯ ಮಾತ್ರ ಜೀವ ವಿಮೆ ಎಂಬ ವ್ಯವಸ್ಥೆ ಮಾಡಿಕೊಂಡು ತಾನು ಜೀವನ ಯಾನದಲ್ಲಿ ಭದ್ರ ಹಾಗೂ ಸುರಕ್ಷಿತ ಎಂಬ ಭ್ರಮೆಯಲ್ಲಿದ್ದಾನೆ. ಜೀವ ವಿಮೆ ಇರಲಿ ಅಥವಾ ಇಲ್ಲದಿರಲಿ 'ಜಾತಸ್ಯ ಮರಣಂ ಧ್ರುವಂ' ಎಂಬ ಮಾತಿನಂತೆ ಮರಣ ಮನುಷ್ಯನನ್ನು ಬಿಟ್ಟಿದ್ದಲ್ಲ. ಎಲ್ಲ ಪ್ರಾಣಿಗಳಿಗೆ ಇರುವಂತೆ ಮನುಷ್ಯನ ರಕ್ಷಕನು ದೇವರೆ. ಒಂದು ವೇಳೆ ದೇವರಲ್ಲಿ ವಿಶ್ವಾಸ ಇಲ್ಲದಿದ್ದರೆ ರಕ್ಷಣೆಯ ಆ ಭರವಸೆಗೆ ಸಮಾಜ. ಆ ವೇಳೆಯಲ್ಲಿ ಸಮಾಜವೇ ದೇವರ ಸ್ಥಾನದಲ್ಲಿದ್ದು ಅನಾರೋಗ್ಯದಿಂದಿರುವ ಮನುಷ್ಯನಿಗೆ ಸಹಾಯ ಮಾಡುತ್ತದೆ. ಎಲ್ಲಿಯವರೆಗೆ ಸ್ಪಂದನಾತ್ಮಕ ಸಮಾಜ ಸುತ್ತಲಿರುತ್ತದೊ ಅಲ್ಲಿಯವರೆಗೆ ಕೃತಕ ಜೀವ ವಿಮೆಯ ಅಗತ್ಯವಿರುವುದಿಲ್ಲ. ಜೀವ ಮಿಮೆ ಸಮಾಜದ ಮೇಲಿನ ನಂಬಿಕೆ ಹೋಗುವಂತೆ ಮಾಡಿ ವಿಮೆಯ ಹಣವನ್ನೇ ನಂಬುವಂತೆ ಮಾಡುತ್ತದೆ. ಜೀವ ವಿಮಾ ಸಂಸ್ಥೆಯಲ್ಲಿ ಇರುವವರೂ ಕೂಡ ಮರಣಕ್ಕೆ ಒಳಗಾಗುವವರೇ! ತಮ್ಮ ಜೀವನವೇ ಉದಕ–ಉದ್ಬುದವಾಗಿರುವಾಗ ಬೇರೆಯವರ ಜೀವನದ ಭದ್ರತೆ ಬಗ್ಗೆ ಜೀವ ವಿಮಾ ಸಂಸ್ಥೆ ಮಾತಾಡುವುದು ಹಾಸ್ಯಾಸ್ಪದವೆನಿಸುತ್ತದೆ. ಇಂಥ ಸನ್ನಿವೇಶದಲ್ಲಿ ಸಮಾಜ ಅದ್ಭುತವಾಗಿ ನೆರವಿಗೆ ಬಂದುದರ ಅನುಭವವಾಯಿತು. ರಕ್ತದ

ಒತ್ತಡ ಹೆಚ್ಚಾದುದನ್ನು ತಿಳಿದು ತಕ್ಷಣ ವಿಳಂಬ ವಿಲ್ಲದೆ ಆಸ್ಪತ್ರೆಗೆ ಸೇರಿಸಿದವರು ಸ್ನೇಹಿತರೇ. ಕುಟುಂಬದ ಸದಸ್ಯರಿಗೆ ವಿಷಯ ತಿಳಿಸಿ ಅವರು ತಕ್ಷಣ ಆಸ್ಪತ್ರೆಗೆ ಬರುವಂತೆ ಮಾಡಿದರು. ಸಹಜವಾಗಿಯೇ ಸಮಾಜದ ಒಂದು ಭಾಗವಾಗಿರುವ ಕುಟುಂಬದ ಸದಸ್ಯರು ಹೆಚ್ಚಿನ ಸೇವೆ ಮಾಡುವುದರಲ್ಲಿ ತಲ್ಲೀನರಾದರು. ಅನಾರೋಗ್ಯದ ಸುದ್ದಿಯನ್ನು ಅಗತ್ಯವಿರುವವರಿಗೆಲ್ಲ ತಿಳಿಸಿದರು. ನಿಧಾನವಾಗಿ ಸಮಯ ಕಳೆದಂತೆ ಸಮಾಜದ ಬೇರೆ ಬೇರೆ ಸ್ತರದ ಮಿತ್ರರು ಬರಲಾರಂಭಿಸಿದರು. ಪ್ರಾರಂಭದಲ್ಲಿ ಕೇವಲ ಔಪಚಾರಿಕ ವಿಚಾರಣೆ ಮಾಡುವುದಕ್ಕೆ ಬಂದಿದ್ದರೆ ಆನಂತರದ ಭೇಟಿಯ ಸಂದರ್ಭದಲ್ಲಿ ಹಣ್ಣು ಹಂಪಲುಗಳ ದಾನ ಮತ್ತು ಧನಸಹಾಯ ಒದಗಿ ಬರಲಾರಂಭಿಸಿತು. ಈ ಪ್ರತಿಕ್ರಿಯೆ ಅತ್ಯಂತ ಸಹಜವಾದುದ್ದಾಗಿತ್ತು, ಮಾನವೀಯವಾಗಿತ್ತು. ಎಲ್ಲಿಯೂ ಕೃತ್ರಿಮತೆ ಎಂಬುದು ಇರಲಿಲ್ಲ. ಸಮಾಜದ ಸದಸ್ಯರ ಈ ಫಲಾಪೇಕ್ಷೆ ರಹಿತ ಸಹಾಯ ಕಾಯಿಲೆಯಿಂದ ಚೇತರಿಸಿಕೊಳ್ಳಲು ಆಸ್ಪತ್ರೆಯ ಔಷಧಿಗಿಂತ ಮಿಗಿಲಾಗಿತ್ತು. ಆ ಸಂದರ್ಭದಲ್ಲಿ ಕೂಡಿ ಬಂದ ಸಹಾನುಭೂತಿ ಇಲ್ಲದೇ ಹೋಗಿದ್ದಲ್ಲಿ ಕೇವಲ ಔಷಧೋಪಚಾರದಿಂದ ಚೇತರಿಸಿಕೊಳ್ಳುವುದು ಕಷ್ಟ ಸಾಧ್ಯವಾಗುತ್ತಿತ್ತು. ಆಸ್ಪತ್ರೆಯಿಂದ ಬಿಡುಗಡೆ ಹೊಂದುವ ಸಮಯದಲ್ಲಿ ಓರ್ವ ಆಯುರ್ವೇದ ವೈದ್ಯ ಮಿತ್ರರು ಬಂದು ತಮ್ಮ ಕ್ಲಿನಿಕ್‌ಗೆ ಬರಬೇಕೆಂದೂ, ಆಯುರ್ವೇದ ಶಾಸ್ತ್ರದ ಪ್ರಕಾರ ಉಪಚಾರ ಪಡೆಯಬೇಕೆಂದು ಒತ್ತಾಯಿಸಿದರು. ಕೆಲವೇ ದಿನಗಳಲ್ಲಿ ಓಡಾಡಲು ಸಾಧ್ಯವಾಗುವಂತೆ ಮಾಡುವುದಾಗಿ ಹೇಳಿದರು. ತಮ್ಮ ಚಿಕ್ಕ ಕ್ಲಿನಿಕ್‌ನಲ್ಲಿಯೇ ಒಂದು ಕೊಠಡಿಯಲ್ಲಿ ಇರಿಸಿಕೊಂಡು ಉಪಚಾರ ಪ್ರಾರಂಭಿಸಿದರು. ಕ್ಲಿನಿಕ್‌ನಲ್ಲಿ ಆ ಕೊಠಡಿ ಮೇಲ್ಭಗದಲ್ಲಿತ್ತು. ಮಹಡಿಗಳನ್ನು ಏರಿ ಅಲ್ಲಿಗೆ ಹೋಗಬೇಕಿತ್ತು ಆದರೆ ಅದು ಸಾಧ್ಯವಿರಲಿಲ್ಲ. ಕ್ಲಿನಿಕ್‌ನ ಸಿಬ್ಬಂದಿಯವರು ಅನಾಮತ್ತಾಗಿ ಎತ್ತಿಕೊಂಡು ಹೋಗಿ ಕೋಣೆಗೆ ಸೇರಿಸಿದರು. ಇನ್ನೊಂದು ವಾರದಲ್ಲಿ ಮೆಟ್ಟಿಲುಗಳನ್ನು ಸ್ವತಃ ಇಳಿದು ಹೋಗುವಂತೆ ಚಿಕಿತ್ಸೆ ಕೊಡುವುದಾಗಿ ವೈದ್ಯರು ಹೇಳಿದರು. ಅದರಂತೆಯೇ ಆಯಿತು. ಕ್ಲಿನಿಕ್‌ನ ಸಿಬ್ಬಂದಿಯ ಮಾನವೀಯ ವ್ಯವಹಾರ ವೈದ್ಯರ ಸಹಾನುಭೂತಿಯ ಚಿಕಿತ್ಸೆಗಳಿಂದಾಗಿ ೧೫ ದಿನಗಳಲ್ಲಿ ಗುಣಮುಖ ಹೊಂದಿ ಆ ಮೆಟ್ಟಿಲುಗಳನ್ನು ಸಿಬ್ಬಂದಿಯ ಸಹಾಯದಿಂದ ಸ್ವತಃ ಕೆಳಗಿಳಿದು ಬಂದೆ. ವೈದ್ಯರು ಹಣದಾಸೆಗಿಂತ ಸೇವೆಯ ದೃಷ್ಟಿಯಿಂದ ಉಪಚಾರ ನೀಡಿದರು. ೭೯ನೇ ವಯಸ್ಸಿನಲ್ಲಿ ಸ್ಟ್ರೋಕ್ ಆಗುತ್ತದೆ, ಎಂಬ ವಿಚಾರ ಬರುವುದಕ್ಕೂ ಸಾಧ್ಯವಿರಲಿಲ್ಲ ಅಂದ ಮೇಲೆ ಜೀವ ವಿಮೆ ಮಾಡುವ ಅಗತ್ಯವೆನಿಸದೆ ಇದ್ದದ್ದು ಸಹಜವಾಗಿತ್ತು. ಅಂಥ ಪರಿಸ್ಥಿತಿ ಬಂದರೆ ಅದನ್ನು ಹೇಗೆ ಎದುರಿಸಲಾಗುವುದು ಎಂಬುದು ತಿಳಿಯದ ವಿಚಾರವಾಗಿತ್ತು. ಭವಿಷ್ಯವೆಲ್ಲವೂ ಅಗೋಚರವಾಗಿರುವಾಗ ಸಮಾಜ ಜೀವಿಯಾದ ಮನುಷ್ಯನಿಗೆ ಸುತ್ತಲಿನ ಸಮಾಜವೇ ಮಿತ್ರ, ಬಂಧು ಮತ್ತು ದೇವರು. ಯಾವಾಗಲೂ ಸಮಾಜವನ್ನೇ ತನ್ನ ಸುತ್ತಲು ಇರಿಸಿಕೊಂಡಿರುವ ಮನುಷ್ಯ ಸಮಾಜಕ್ಕಾಗಿ ಒಳ್ಳೆಯದನ್ನೇ ಮಾಡುವ ಮನೋವೃತ್ತಿಯನ್ನು ಬೆಳೆಸಿಕೊಂಡರೆ ಸಮಾಜ ಅವನನ್ನು ಕೈಬಿಡುವುದಿಲ್ಲ. ಒಂದಿಲ್ಲ ಒಂದು ರೀತಿಯಲ್ಲಿ ಸಮಾಜ ಬ್ರಹ್ಮ ತನ್ನ ಸಹಾಯ ಹಸ್ತವನ್ನು ನೀಡುತ್ತಾನೆ. ಆಗಿ ಹೋದ ದೊಡ್ಡ ದೊಡ್ಡ ವ್ಯಕ್ತಿಗಳು ಋಷಿಮುನಿಗಳು ಭವಿಷ್ಯದ ಯೋಚನೆ ಇಲ್ಲದೆ ಸಮಾಜ ಸೇವೆ ಮಾಡಿ ಹೋದರು. ಸಮಾಜದಲ್ಲಿ ಅಗೋಚರವಾದ ಮತ್ತು ದೈವ ಸದೃಶವಾದ ಶಕ್ತಿಯಿದೆ. ಮನುಷ್ಯನು ಸಮಾಜವನ್ನು ಪ್ರೀತಿಸಿದರೆ, ಗೌರವಿಸಿದರೆ ಅದು ಪ್ರತಿಯಾಗಿ ಆ ಮನುಷ್ಯನನ್ನು ಪ್ರೀತಿಸುತ್ತದೆ ಮತ್ತು ಗೌರವಿಸುತ್ತದೆ. ಇಂಥ ಒಂದು ಅನುಭವ ಕಳೆದ ತಿಂಗಳುಗಳಲ್ಲಿ ಆದದ್ದು ಪುಣ್ಯ ವಿಶೇಷ. ಆ ಸಮಾಜ ಪುರುಷನಿಗೆ ನಾನು ಕೃತಜ್ಞ.

ಖಾದಿ ವಿಚಾರ

ಅಸಹಯೋಗದ ಅಡಿಪಾಯ ಖಾದಿ

೧೯೨೦ನೇ ವರ್ಷ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮೈಲಿಗಲ್ಲೆಂದು ತಿಳಿಯಲ್ಪಡುತ್ತದೆ. ಏಕೆಂದರೆ ಗಾಂಧೀಜಿ ಇದೇ ವರ್ಷ ಇಂಗ್ಲಿಷ್ ಸರ್ಕಾರದ ವಿರುದ್ಧ ಅಸಹಯೋಗ ಆಂದೋಲನ ನಡೆಸಿದರು. ಅಸಹಯೋಗ ಆಂದೋಲನ ಪ್ರಾರಂಭಿಸುವ ಹಿಂದೆ ಅನೇಕ ಕಾರಣಗಳಿದ್ದವು. ಮೊದಲನೆಯದು, ೧೯೧೯ರಲ್ಲಿ ಇಂಗ್ಲಿಷ್ ಆಡಳಿತದ ಅಮೃತಸರದ ಜಲಿಯನ್ ವಾಲಾಬಾಗ್‌ನ ಬರ್ಬರ ನರಸಂಹಾರ. ಎರಡನೆಯದು, ಪ್ರಥಮ ವಿಶ್ವಯುದ್ಧದ ನಂತರ ಮುಸ್ಲಿಂ ಕಲೀಫಾಗಳ ಪ್ರಶ್ನೆ ಮತ್ತು ಮೂರನೆಯದು ಭಾರತವನ್ನು ಪೂರ್ಣರೂಪದಲ್ಲಿ ತಮ್ಮ ಹಿಡಿತಕ್ಕೆ ತಂದ ರೌಲಟ್ ಕಾನೂನು. ಗಾಂಧೀಜಿಯವರ ಅನುಸಾರ ಈ ಅಸಹಯೋಗ ಆಂದೋಲನದ ಮೂಲ ಉದ್ದೇಶ್ಯ ಸ್ವ-ಶೋಧನೆ ಮತ್ತು ಪ್ರಾಯಶ್ಚಿತ. ಹಿಂದ್‌ಸ್ವರಾಜ್‌ನಲ್ಲಿ ಹೇಳಿದಂತೆ ಇಂಗ್ಲೀಷರು ನಮ್ಮಿಂದ ಭಾರತವನ್ನು ಕಿತ್ತುಕೊಂಡಿರಲಿಲ್ಲ, ಬದಲಿಗೆ ನಾವು ಅವರಿಗೆ ಹಿಂದೂಸ್ಥಾನವನ್ನು ಕೊಟ್ಟೆವು. ಅವರು ತಮ್ಮ ಬಾಹುಬಲದಿಂದ ಭಾರತದಲ್ಲಿ ಇಲ್ಲ. ಆದರೆ ನಾವು ಅವರನ್ನು ಇಲ್ಲಿ ಇಟ್ಟುಕೊಂಡಿದ್ದೇವೆ. ಗಾಂಧೀಜಿಯವರಂತೂ ಎಲ್ಲಿಯವರೆಗೆ ಹೇಳಿದ್ದಾರೆ ಎಂದರೆ "ನಾವು ಇಂಗ್ಲೀಷನ್ನು ಕಲಿತ ಮತ್ತು ಸಂಪನ್ನ ಜನರೇ ಇಂಗ್ಲಿಷ್ ಸಾಮ್ರಾಜ್ಯ ಇಲ್ಲಿ ಉಳಿಯುವಂತೆ ಬಹಳಷ್ಟು ಸಹಾಯ ಮಾಡಿದ್ದೇವೆ. ನನಗೆ ಇದನ್ನು ಹೇಳುವುದರಲ್ಲಿ ಸಂಕೋಚವಿಲ್ಲ. ಏನೆಂದರೆ ನಮ್ಮ ವ್ಯಾಪರೀ ಜನರೇ ಬ್ರಿಟಿಷ್ ಶಾಸನದ ಸಮರ್ಥನೆ ಮಾಡುತ್ತಾರೆ ಮತ್ತು ಅವರ ಹಿತ ಈ ಸಾಮ್ರಾಜ್ಯದೊಂದಿಗೆ ಸೇರಿದೆ." ಇದಕ್ಕಿಂತ ಮೊದಲು ೧೯೦೮ರಲ್ಲಿ ಗಾಂದೀಜಿ ಹೀಗೆ ಬರೆದಿದ್ದಾರೆ: ಭಾರತದಲ್ಲಿ ಇಂಗ್ಲಿಷ್ ಆಡಳಿತ ಒಂದು ಪಾಪದಂತಿದೆ. ಆದರೆ ಇಂಗ್ಲೀಷರು ಹೊರಟು ಹೋದ ಮೇಲೆ ನಮಗೆ ಒಳ್ಳೆಯದಾಗುವುದೆಂದು ವಿಶ್ವಾಸ ಇರಕೂಡದು. ನಮ್ಮ ನಮ್ಮಲ್ಲಿಯ ಮತಬೇಧ, ನಮ್ಮ ಅನೈತಿಕತೆ ಮತ್ತು ನಮ್ಮ ಅಜ್ಞಾನದ ಕಾರಣದಿಂದಲೇ ಇಂಗ್ಲೀಷರು ನಮ್ಮ ಮೇಲೆ ಆಡಳಿತ ನಡೆಸಲು ಸಾಧ್ಯವಾಯಿತು. ಮೂರು ಸಾವಿರ ಇಂಗ್ಲೀಷರು ಭಾರತೀಯರ ಸಂಖ್ಯೆಯ ಹೋಲಿಕೆಯಲ್ಲಿ ಎಲ್ಲರ ದೃಷ್ಟಿಯಲ್ಲಿ ದುರ್ಬಲರಾಗಿದ್ದಾರೆ. ಇಪ್ಪತ್ತು ಕೋಟಿ ಭಾರತೀಯರನ್ನು ಗುಲಾಮರನ್ನಾಗಿ ಮಾಡಿಟ್ಟಿದ್ದಾರೆ. ಭಾರತೀಯರು ಬಲಶಾಲಿಗಳು, ಹೃದಯ ವೈಶಾಲ್ಯದವರಾಗಿದ್ದಾರೆ. ಇದರ ಅರ್ಥ ಭಾರತೀಯರೆ ಸ್ವತಃ ತಮ್ಮನ್ನು ಗುಲಾಮರನ್ನಾಗಿರಿಸಿಕೊಂಡಿದ್ದಾರೆ. ಆದ್ದರಿಂದ ಅಸಹಯೋಗ ಆಂದೋಲನ ನಮ್ಮ ಸ್ವಂತದ ಶುದ್ಧೀಕರಣವಾಗಿದೆ ಎಂದು ಗಾಂಧೀ ಭಾವಿಸುತ್ತಾರೆ.

ಈ ಅಸಹಯೋಗ ಆಂದೋಲನದಿಂದ ಖಾದಿ ಮತ್ತು ಸ್ವದೇಶಿಯ ನೇರ ಸಂಬಂಧವಿದೆ. ಇಲ್ಲಿಂದಲೇ ಗಾಂಧೀಜಿ ಖಾದಿ ಆಂದೋಲನಕ್ಕೆ ಸಾರ್ವಜನಿಕ ಸ್ವರೂಪ ಕೊಡುತ್ತಾರೆ. ಅಸಹೋಗ ಆಂದೋಲನವೇ ಖಾದಿಯನ್ನು ಸ್ವಾತಂತ್ರ್ಯ ಸಂಗ್ರಾಮದ

ಪ್ರಮುಖ ಅಸ್ತ್ರವನ್ನಾಗಿಸಿದೆ. ಆದ್ದರಿಂದ ಅಸಹಯೋಗ ಆಂದೋಲನವನ್ನು ತಿಳಿಯುವುದರೊಂದಿಗೆ ಖಾದಿ ಆಂದೋಲನ ವಿಚಾರದ ಪ್ರಸ್ಥಭೂಮಿ ಯಾವ ರೀತಿಯದೆಂದು ಕೂಡ ತಿಳಿಯುತ್ತೇವೆ.

೧೯೨೦ರಲ್ಲಿ ಪ್ರಾರಂಭವಾದ ಅಸಹೋಗ ಆಂದೋಲನ ಕ್ರಮೇಣ ತೀವ್ರವಾಯಿತು ಮತ್ತು ಸಮಕಾಲೀನ ನಾಯಕರ ಸಹಯೋಗ ಮತ್ತು ಶಕ್ತಿ ಅದಕ್ಕೆ ದೊರೆಯುತ್ತದೆ. ಅಸಹಯೋಗ ಆಂದೋಲನದ ಮೂಲ ಪುರಾತನವಾಗಿದೆ. ಇಂಗ್ಲೀಷರು ಭಾರತಕ್ಕೆ ಕೇವಲ ವ್ಯಾಪರ ಮಾಡಲು ಬಂದಿದ್ದರು. ಆದರೆ ಯಾವ ರೀತಿ ಅವರು ತಮ್ಮ ವ್ಯಾಪಾರ ನಿಮಿತ್ತ ಹಿಂದೂಸ್ಥಾನವನ್ನು ಹಿಡಿದಿಟ್ಟುಕೊಂಡರೊ ಮತ್ತು ಭಾರತೀಯ ಉದ್ಯೋಗಗಳನ್ನು ನಷ್ಟ ಮಾಡಿದರೊ ಹಾಗೂ ಭಾರತೀಯ ಅರ್ಥ ವ್ಯವಸ್ಥೆ ಕೆಡಿಸಿದರೊ ಇವೆಲ್ಲಕ್ಕಿಂತ ಗಾಂಧೀಜಿಯವರ ದೃಷ್ಟಿಯಲ್ಲಿ ಇಂಗ್ಲೀಷರು ಕ್ರೂರ ಅಪರಾಧ ಮಾಡಿದರು. ನಮ್ಮ ನೇಕಾರರ ಬೆರಳುಗಳನ್ನು ಕತ್ತರಿಸಿದರು ಮತ್ತು ನಮ್ಮ ಅರ್ಥವ್ಯವಸ್ಥೆಯನ್ನು ದಿವಾಳಿ ಎಬ್ಬಿಸಿದರು. ಈ ಕಾರಣದಿಂದಲೇ ಗಾಂಧೀಜಿ ಇಂಗ್ಲಿಷ್ ಸಾಮ್ರಾಜ್ಯದ ಘೋರ ವಿರೋಧ ಮಾಡಿದರು ಮತ್ತು ಇಂಗ್ಲಿಷ್ ಆಡಳಿತವನ್ನು ರಾವಣರಾಜ್ಯವೆಂದು ಕರೆದರು. ಈ ರಾವಣರಾಜ್ಯವೇ ಅಸಹಯೋಗ ಆಂದೋಲನಕ್ಕೆ ಪ್ರಮುಖ ಕಾರಣವಾಯಿತು.

* * *

ಸಂತಾಪ...

ಕಳೆದ ತಿಂಗಳು ದೇಶದ ರಾಜಧಾನಿ ದೆಹಲಿಯಲ್ಲಿ ಓರ್ವ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಕೆಲವು ದುಷ್ಕರ್ಮಿಗಳು ಚಲಿಸುತ್ತಿರುವ ವಾಹನದಲ್ಲಿ ಅತ್ಯಾಚಾರವೆಸಗಿದ್ದಾರೆ. ಇಡೀ ಭಾರತೀಯ ಸಮಾಜವೇ ಈ ಘಟನೆಯಿಂದ ತಲ್ಲಣಿಸಿದೆ. ಇಂಥ ಘಟನೆ ಮರುಕಳಿಸದಂತೆ ಸಮಾಜ ಮತ್ತು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ಘಟನೆಯನ್ನು 'ಜನಪದ ವಿಚಾರ' ತೀವ್ರವಾಗಿ ಖಂಡಿಸುತ್ತದೆ. ಮತ್ತು ಇಂಥ ದುರ್ಘಟನೆ ಪುನರಾವರ್ತನೆಯಾಗದಂಥ ಆರೋಗ್ಯಕರ ಪರಿಸ್ಥಿತಿ ಉಂಟಾಗಲೆಂದು ಹಾರೈಸುತ್ತದೆ.

* * *

ಕರ್ನಾಟಕ ರಾಜ್ಯದ ಶೈಕ್ಷಣಿಕ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಪರಿಶ್ರಮಿಸಿ ಸಕಲ ಜನಾಂಗದ ಗೌರವಕ್ಕೆ ಪಾತ್ರರಾಗಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಜನವರಿ ೧೩ ಭಾನುವಾರದಂದು ದಿವಂಗತರಾದರು. ಅವರ ನಿಧನಕ್ಕೆ ಜನಪದ ವಿಚಾರವು ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಸರ್ವೋದಯ ಆಂದೋಲನದ ಮುನ್ನಡೆ

ತುಮಕೂರು ಜಿಲ್ಲಾ ಸರ್ವೋದಯ ಮಂಡಲಿ ಅಸ್ತಿತ್ವಕ್ಕೆ

ತುಮಕೂರು ಜಿಲ್ಲೆಯ ಸರ್ವೋದಯ ಕಾರ್ಯಕರ್ತರು ಹಾಗೂ ಆಸಕ್ತರು ೮-೧೨-೧೨ರಂದು; ಬಾಪೂಜಿ ಸಂಸ್ಥೆಗಳ ಸಂಸ್ಥಾಪಕ ಕಾರ್ಯದರ್ಶಿಯವರಾದ ಶ್ರೀ ಎಂ.ಬಸವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಮಾಲೋಚಿಸಿ ಜಿಲ್ಲಾ ಸರ್ವೋದಯ ಮಂಡಲಿಯನ್ನು ಅಸ್ತಿತ್ವಕ್ಕೆ ತಂದುಕೊಂಡಿರುತ್ತಾರೆ. ಮಂಡಲಿ ಹೀಗಿರುತ್ತದೆ:

ಶ್ರೀ ಎಂ.ಬಸವಯ್ಯ	ಗೌ॥ಅಧ್ಯಕ್ಷರು
ಶ್ರೀ ಟಿ.ಆರ್. ರೇವಣ್ಣ	ಅಧ್ಯಕ್ಷರು
ಶ್ರೀ ಭೈರಪ್ಪ ರೆಡ್ಡಿ	ಕಾರ್ಯದರ್ಶಿಯವರು
ಶ್ರೀ ಎಂ.ವಿ.ನಂಜಪ್ಪ	ಖಜಾಂಚಿಯವರು
ಶ್ರೀ ರಿಜ್ವಾನ್ ಭಾಷ	ಸಂಘಟನಾ ಕಾರ್ಯದರ್ಶಿಯವರು
ಪ್ರೊ॥ ಡಿ.ಚಂದ್ರಪ್ಪ	ಸದಸ್ಯರು, ತುಮಕೂರು
ಶ್ರೀ ಹೊನ್ನೇಶ್	ಸದಸ್ಯರು, ಮಧುಗಿರಿ
ಶ್ರೀ ದವನಂ ಎ. ಅಮರನಾಥ್	ಸದಸ್ಯರು, ಪಾವಗಡ

ಉಳಿದ ತಾಲ್ಲೂಕುಗಳ ಪ್ರತಿನಿಧಿಗಳನ್ನು ತುಂಬಲಾಗುವುದು.

ಸರ್ವೋದಯ ಕಾರ್ಯಕರ್ತರ ಸಮಾಲೋಚನಾ ಸಭೆಯನ್ನು ರಾಜ್ಯ ಸರ್ವೋದಯ ಮಂಡಲಿಯ ಕಾರ್ಯದರ್ಶಿಯವರಾದ ಪ್ರೊ॥ ಎಲ್.ನರಸಿಂಹಯ್ಯನವರು ಕರೆದಿದ್ದರು.

ಜಿಲ್ಲಾ ಸರ್ವೋದಯ ಮಂಡಲಿಯ ಮೊದಲ ಚಟುವಟಿಕೆಯಾಗಿ ಸರ್ವೋದಯ ಗೀತೆಗಳ ಹಾಡುಗಾರಿಕೆ ಕಾರ್ಯಕ್ರಮವನ್ನು ೪ ಪ್ರೌಢಶಾಲೆಗಳಲ್ಲಿ ಮತ್ತು ೨ ಕಿರಿಯ ಮಹಾವಿದ್ಯಾಲಯಗಳಲ್ಲಿ ಡಿಸೆಂಬರ್ ೨೬,೨೭ ಮತ್ತು ೨೮ ರಂದು ಏರ್ಪಡಿಸಲಾಗಿತ್ತು.

ರಾಜ್ಯ ಸರ್ವೋದಯ ಮಂಡಲಿಯ ಸದಸ್ಯರು, ಕಾರ್ಯನಿರ್ವಾಹಕ ಸಮಿತಿಯ ಸಂಚಾಲಕರೂ ಆದ ಶ್ರೀ ನಾಮದೇವ ಶೆಣೈ ಅವರು ಹಾಡುಗಾರಿಕೆ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರು. ಮಂಗಳೂರು ಮಂಡಲಿಯ ಶ್ರೀ ಕೆ. ಯಶವಂತ್ ಅವರು ಮೂರೂ ದಿನ ಹಾಜರಿದ್ದರು. ಸುಮಾರು ೨,೬೦೦ ವಿದ್ಯಾರ್ಥಿಗಳಿಗೆ ಸರ್ವೋದಯ ಸಂದೇಶವನ್ನು ಮತ್ತು ಗೀತೆಗಳ ಹಾಡುಗಾರಿಕೆಯನ್ನು ಕೇಳಿಸಿ ಹಾಡಿಸಿದ್ದಾಯಿತು. ವಿದ್ಯಾರ್ಥಿಗಳ ಪಾಲುಗಾರಿಕೆ ಸಕ್ರಿಯವಾಗಿತ್ತು. ಮಂಡಲಿ ನಡೆಸಬೇಕೆಂದಿರುವ ಪ್ರಬಂಧ ಸ್ಪರ್ಧೆ ಮತ್ತು ಹಾಡುಗಾರಿಕೆ ಸ್ಪರ್ಧೆಗಳಲ್ಲಿ ಭಾಗವಹಿಸಲು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಆಸಕ್ತಿಯನ್ನು ವ್ಯಕ್ತಪಡಿಸಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಯವರಾದ ಶ್ರೀ ರತ್ನಯ್ಯನವರು ಮತ್ತು ಪಿ.ಯು. ಉಪನಿರ್ದೇಶಕರಾದ ಶ್ರೀ ಜಯಪ್ರಕಾಶ್ ಅವರು ಉಪಸ್ಥಿತರಿದ್ದು ಸರಳವಾದ ಆದರೆ ವಿಶಿಷ್ಟವಾದ ಕಾರ್ಯಕ್ರಮವೆಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ಸರ್ವೋದಯ ಮಂಡಲ

ಇದರ ಕಾರ್ಯಕಾರೀ ಸಮಿತಿಯ ಸಭೆ ಡಿಸೆಂಬರ್ ೧೨ ಮತ್ತು ೧೩ರಂದು ಸುಶ್ರೀ ರಾಧಾ ಬೆಹನ್ ಭಟ್ ಅವರ ಅಧ್ಯಕ್ಷತೆಯಲ್ಲಿ ದೆಹಲಿಯ ಹರಿಜನ ಸೇವಕ ಸಂಘದ ಗಾಂಧೀ ಆಶ್ರಮದಲ್ಲಿ ನಡೆಯಿತು. ೧೮ ರಿಂದ ೨೦ ರಾಜ್ಯಗಳ ಸರ್ವೋದಯ ಮಂಡಲಗಳ ಅಧ್ಯಕ್ಷರು/ಕಾರ್ಯದರ್ಶಿಯವರು ಪಾಲ್ಗೊಂಡಿದ್ದರು. (ಶೇ.೪೦ ಮಂದಿಯಷ್ಟು ಯುವ ತಲೆಮಾರಿನವರು ಕಂಡು ಬಂದರು)

ಸರ್ವ ಸೇವಾ ಸಂಘದ ಕಾರ್ಯದರ್ಶಿಯವರ ಸಾಮಾನ್ಯ ವರದಿಯ ವಾಚನಾ ನಂತರ 'ಜಲ್-ಜಂಗಲ್-ಜಮೀನ್'ಗಳ ಸಂರಕ್ಷಣೆಗಾಗಿ ಮತ್ತು ಸಂವರ್ಧನೆಗಾಗಿ ಸಂಘವು ಏರ್ಪಡಿಸಿದ್ದ ಉಪವಾಸ ಹಾಗೂ ಸತ್ಯಾಗ್ರಹದ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

ಅಸ್ಸಾಮಿನಲ್ಲಿ ತಲೆಯೆತ್ತಿರುವ ಜನಾಂಗೀಯ (ಮುಸ್ಲಿಂ-ಬೋಡೋ) ಕಲಹವನ್ನು ತಡೆಗಟ್ಟುವ ಮತ್ತು ಶಾಂತಿ-ಸೌಹಾರ್ದತೆಗಳನ್ನು ಸ್ಥಾಪಿಸುವ ಸದುದ್ದೇಶದಿಂದ, ಅಖಿಲ ಭಾರತ ಸರ್ವೋದಯ ಮಂಡಲಿ ಕೈಗೊಂಡಿರುವ ವ್ಯಾಪಕವಾದ ಪ್ರಯಯತ್ನಗಳ ಬಗ್ಗೆ ವಿವರ ನೀಡಿದ ಪ್ರಧಾನ ಕಾರ್ಯದರ್ಶಿಯವರು ನಿರೀಕ್ಷಿಸುವಷ್ಟು ಸುಲಭವಾಗಿ ಸಾಧನೆಯಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು. ಆದರೂ ಬರುವ ದಿನಗಳಲ್ಲಿಯೂ ಈ ಶಾಂತಿ ಸಾಧಕ ಪ್ರಯತ್ನಗಳನ್ನು ಮುಂದುವರಿಸ ಬೇಕಾಗಿದೆ. ಗಾಂಧೀ ಹೆಸರಿನ ಮೂಲಕ ಹೋಗುವುದರಿಂದ, ಪ್ರತಿ ಜನಾಂಗವೂ ತನ್ನ ನಿಲುವಿನಿಂದ ಹೊರ ಬಂದು ಸೌಹಾರ್ದತೆಗೆ ಓಗೊಡುವ ಸಾಧ್ಯತೆಯಿದೆ ಎಂಬ ಆಶಾಭಾವನೆಯನ್ನು ವ್ಯಕ್ತ ಪಡಿಸಿದರು.

ಸರ್ವೋದಯ ಸಮಾಜದ ಸಮ್ಮೇಳನವು ಆಗ್ರಾ/ಮಥುರಾದಲ್ಲಿ ಮುಂದಿನ ನವೆಂಬರ್ ೧೮-೨೬ರ ಅವಧಿಯಲ್ಲಿ ನಡೆಸುವ ಸಂಗತಿ ತಾತ್ವಿಕವಾಗಿ ವ್ಯಕ್ತವಾಯಿತು.

ಎರಡನೇ ದಿನದ ಅವಧಿಯಲ್ಲಿ ವಿವಿಧ ರಾಜ್ಯಗಳ ಸಾಮಾನ್ಯ ವರದಿಯನ್ನು ಸಲ್ಲಿಸಲಾಯಿತು. ಕರ್ನಾಟಕವೂ ಸೇರಿದಂತೆ ೨-೩ ರಾಜ್ಯಗಳನ್ನು ಹೊರತು ಪಡಿಸಿ ವರದಿಗಳು ಹಿಂದಿಯಲ್ಲಿದ್ದವು.

ಕರ್ನಾಟಕ ರಾಜ್ಯದ ಸರ್ವೋದಯ ಮಂಡಲಿಯ ಸಂಕ್ಷಿಪ್ತ ವರದಿ:

೧೯೬೩ ರಿಂದ ಅಸ್ತಿತ್ವದಲ್ಲಿರುವ ಕರ್ನಾಟಕ ಸರ್ವೋದಯ ಮಂಡಲಿ ಒಂದು ನೋಂದಾಯಿತ ಸಂಸ್ಥೆಯಾಗಿರುತ್ತದೆ. ಪಶ್ಚಿಮ ವಾಹಿನಿಯ ತೀರದಲ್ಲಿ ಸರ್ವೋದಯ ಪ್ರಣೀತ ಎರಡು ದಿನದ ವಿಚಾರಗೋಷ್ಠಿಗಳನ್ನು ಪ್ರತಿ ವರ್ಷವೂ ನಡೆಸಿಕೊಂಡು ಬರಲಾಗುತ್ತಿದೆ.

ಜೊತೆಗೆ, ವೈಯಕ್ತಿಕ ನೆಲೆಯಲ್ಲಿ ಸರ್ವೋದಯ ಮಂಡಲದವರು, ಈ ಕೆಳಗೆ ಕಾಣಿಸಿರುವಂತೆ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಉಲ್ಲೇಖನಾರ್ಹವಾಗಿದೆ.

೧. ಶ್ರೀ ಸುರೇಂದ್ರ ಕೌಲಗಿಯವರು, ಅಧ್ಯಕ್ಷರು, ಕರ್ನಾಟಕ ಸರ್ವೋದಯ ಮಂಡಲ ಇವರು ಜನಪದ ವಿಚಾರ ಕನ್ನಡ ಮಾಸಿಕದ ಮೂಲಕ ಮತ್ತು ಮಂಡ್ಯ ಜಿಲ್ಲೆಯಲ್ಲಿ ವಿವಿಧ ವೇದಿಕೆಗಳ ಮೂಲಕ ಜನಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ನಿರ್ವಹಿಸುತ್ತಿದ್ದಾರೆ. ಇತ್ತೀಚೆಗೆ, ಶ್ರೀ ನಾರಾಯಣ ದೇಸಾಯಿಯವರಿಂದ ಮೈಸೂರಿನಲ್ಲಿ ೫ ದಿನಗಳ ಕಾಲ

ಗಾಂಧೀ ದರ್ಶನದಂತಹ ವಿಶಿಷ್ಟ ಕಾರ್ಯಕ್ರಮವನ್ನು ನೆರವೇರಿಸಿದರೆಂಬುದು ಗಮನಾರ್ಹ.

೨. ಶ್ರೀ ಸಾಮದೇವ ಶೆಣೈ – ಸರ್ವೋದಯ ವ್ಯವಸ್ಥೆಯಲ್ಲಿ ಶ್ರಮಿಸುತ್ತ ಬಂದಿರುವ ಶ್ರಮಿಸುತ್ತ ಬಂದಿರುವ ಹಿರಿಯ ಕಾರ್ಯಕರ್ತರು, ಸರ್ವೋದಯ ಗೀತೆಗಳ ಹಾಡುಗಾರಿಕೆ ಕಾರ್ಯಕ್ರಮವನ್ನು ಶಾಲೆಯಿಂದ ಶಾಲೆಗೆ ಕೊಂಡೊಯ್ಯುತ್ತಿದ್ದಾರೆ. ಮಂಗಳೂರಿನ ಸರ್ವೋದಯ ಮಂಡಲದ ಕಾರ್ಯದರ್ಶಿಯವರಾದ ಶ್ರೀ ಕೆ.ಯಶವಂತ್‌ರ ಸಹಯೋಗದಲ್ಲಿ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಗಮನಾರ್ಹವಾಗಿ ನೆರವೇರಿಸುತ್ತಿದ್ದಾರೆ.

೩. ಶ್ರೀ ಎಲ್.ನರಸಿಂಹಯ್ಯ, ಕಾರ್ಯದರ್ಶಿ, ಕರ್ನಾಟಕ ಸರ್ವೋದಯ ಮಂಡಲಿ ಇವರು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಗಾಂಧೀ ಕುರಿತ ರಸಪ್ರಶ್ನೆ ಶೈಕ್ಷಣಿಕ ಕಾರ್ಯಕ್ರಮವನ್ನು; ಡಿ.ಇಡಿ ಮತ್ತು ಬಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ 'ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು' ಕುರಿತಂತೆ ಉಪನ್ಯಾಸ–ಸಂವಾದ ಕಾರ್ಯಕ್ರಮವನ್ನು ತುಮಕೂರು ಜಿಲ್ಲೆಯಲ್ಲಿ ಮತ್ತು ಅವಕಾಶ ದೊರಕಿದ ಕಡೆ ನಿರ್ವಹಿಸುತ್ತಿದ್ದಾರೆ.

೪. ಡಾ॥ಎಚ್.ಎಸ್.ಸುರೇಶ್, ರಾಜ್ಯ ಮಂಡಲಿಯ ಸಂಘಟನಾ ಕಾರ್ಯದರ್ಶಿ ಇವರು ಮುಂಬೈ ಸರ್ವೋದಯ ಮಂಡಲಿಯ ಸಹಕಾರದೊಂದಿಗೆ ಸುಮಾರು ೩೦,೦೦೦ ರೂ ಮೌಲ್ಯದ 'ಆತ್ಮಕಥೆ' ಪುಸ್ತಕಗಳ ಮಾರಾಟ ಮತ್ತು ಪರಿವರ್ತಿತ ಕೈದಿಯಾಗಿರುವ ಶ್ರೀ ಲಕ್ಷ್ಮಣ ತುಕಾರಾಮ ಗೋಲೆ ಅವರನ್ನು ಕರೆಯಿಸಿಕೊಂಡು ವಿಚಾರಣಾಧೀನ ಕೈದಿಗಳಿಗೆ ಉಪನ್ಯಾಸ ಕಾರ್ಯನೀಡುವ ಸ್ತುತ್ಯರ್ಹಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಈ ವರೆಗೆ ರಾಜ್ಯದ ೬ ಜಿಲ್ಲೆಗಳಲ್ಲಿ ಇದು ನಿರ್ವಹಣೆಯಾಗಿದೆ.

ಜಿಲ್ಲೆಗಳಲ್ಲಿ ಮಂಡಲಗಳ ಸಂಘಟನೆ: ರಾಜ್ಯದಲ್ಲಿ ಈವರೆಗೆ ಏಳು ಜಿಲ್ಲೆಗಳಲ್ಲಿ ಮಂಡ್ಯ, ಹಾಸನ, ಮೈಸೂರು, ಬಳ್ಳಾರಿ, ಚಿತ್ರದುರ್ಗ, ಮಂಗಳೂರು ಮತ್ತು ಉಡುಪಿ ಜಿಲ್ಲಾ ಮಂಡಲಗಳು ಅಸ್ತಿತ್ವಕ್ಕೆ ಬಂದಿರುತ್ತವೆ.

ಮುಂಬರುವ ದಿನಗಳಲ್ಲಿ:

* ಮಾರ್ಚ್/ ಏಪ್ರಿಲ್ ೨೦೧೩ರಲ್ಲಿ ಸರ್ವಸದಸ್ಯರ ಸಭೆ ನೆರವೇರಲಿದೆ.

* ರಾಜ್ಯದ ಸರ್ವೋದಯ ಮಂಡಲ ತನ್ನ ೫೦ ವರ್ಷಗಳ ಹೊಸ್ತಿಲಲ್ಲಿರುವ ಕಾರಣ ಸುವರ್ಣ ಮಹೋತ್ಸವವನ್ನು ಅರ್ಥಪೂರ್ಣವಾಗಿ ನೆರವೇರಿಸಬೇಕೆಂಬ ಅಭಿಪ್ರಾಯವಿದೆ. ಈ ಸಂಬಂಧದಲ್ಲಿ ಜಿಲ್ಲಾ ಮಟ್ಟದಲ್ಲಿ ನೆರವೇರಲಿರುವ ವಿವಿಧ ಕಾರ್ಯಕ್ರಮಗಳ ಮುಂದುವರಿದ ಹಾಗೂ ಮುಕ್ತಾಯದ ಕಾರ್ಯಕ್ರಮವಾಗಿ ಕನಿಷ್ಠ ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಇರಿಸಿಕೊಳ್ಳುವ ಅಭಿಪ್ರಾಯವಿದೆ.

ವರದಿ
ಎಲ್.ನರಸಿಂಹಯ್ಯ
ಕಾರ್ಯದರ್ಶಿಗಳು,
ಕರ್ನಾಟಕ ಸರ್ವೋದಯ ಮಂಡಲ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎನ್.ಕಲ್ಲಪ್ಪ ; ಶ್ರಿ ಎಂ.ಕೆ.ನಾರಾಯಣ : ಶ್ರೀ ಎಂ.ಕೆ.ಸುಬ್ಬರಾವ್
ಶ್ರೀ ಎಂ.ಕೆ.ಶಂಕರ್ – ಬೆಂಗಳೂರು
ಶ್ರೀ ಜೆ.ಆರ್.ಲಕ್ಷ್ಮಣರಾವ್ ; ಶ್ರೀ ಆನಂದರಾವ್ ಬಾಟ್ನೆ ; ಶ್ರೀಮತಿ ವೈದೇಹಿ
ಶ್ರೀ ಬಿ.ಕೆ. ಶಿವಣ್ಣ : ಶ್ರೀ ಕೆ.ಟಿ.ವೀರಪ್ಪ – ಮೈಸೂರು
ಶ್ರೀ ಎಚ್.ಎನ್.ರಮೇಶ್ – ಮಂಡ್ಯ : ಶ್ರೀ ಎಚ್.ಎಂ.ಶಿವಣ್ಣ – ಹಾಸನ
ಶ್ರೀ ಎಲ್.ನರಸಿಂಹಯ್ಯ – ತುಮಕೂರು : ಶ್ರೀ ವಿಜಯದೇವನ್ – ಪಾಂಡವಪುರ
ಶ್ರೀ ಮಧುರೈ ತಿಮ್ಮಾರೆಡ್ಡಿ – ಚಿತ್ರದುರ್ಗ : ಶ್ರೀ ಎನ್.ಶ್ರೀನಿವಾಸಗೌಡ – ಕೋಲಾರ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಪ್ರೊ॥ ಸಿ.ಟಿ.ಶಿವಪ್ಪಗೌಡ ; ಪ್ರೊ॥ ಕೆ.ವಿ.ದಾಮೋದರಗೌಡ ; ಪ್ರೊ॥ ನಿಟ್ಟೂರು ದೇವೇಂದ್ರ ಕುಮಾರ್ ; ಶ್ರೀಮತಿ ಎಚ್.ಆರ್.ಚಂದ್ರಕಲಾ ; ಶ್ರೀ ಎಂ.ಪಿ.ಜಯರಾಮು ; ಶ್ರೀ ವರಪ್ರಸಾದ್ – ಮೈಸೂರು : ಶ್ರೀ ಆರ್.ಎಂ.ಚನ್ನಕೃಷ್ಣ – ರಾಗಿಮುದ್ದನಹಳ್ಳಿ ಶ್ರೀ ಎಂ.ಕುಮಾರ್ – ಹಾಸನ ; ಶ್ರೀಮತಿ ಎಂ.ಬಿ.ಪ್ರಮೀಳಾ – ಮಂಡ್ಯ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

This donation is exempted from Tax
U/s 80G(5)(vi) of IT Act. Order No:
F No:J-32/80G/CIT/MYS/2011-12
Date:24-05-2011
Period AY 2011-12 onwards
PAN : AAATJ2582J

For Janapada Seva Trust

Treasurer

ಶ್ರೀಮತಿ/ ಶ್ರೀ..

Secretary

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.